ಗುರುವಾರ, ಜುಲೈ 10, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಾಡಾನೆಗಳ ಸಾವು

ಮಾನವ–ಪ್ರಾಣಿ ಸಂಘರ್ಷದಿಂದಾಗಿ 23 ವರ್ಷಗಳಲ್ಲಿ ಅಸ್ಸಾಂನಲ್ಲಿ 1,400ಕ್ಕೂ ಅಧಿಕ ಕಾಡಾನೆಗಳು ಮೃತಪಟ್ಟಿವೆ ಎಂದು ಭಾರತೀಯ ವನ್ಯಜೀವಿ ಸಂಸ್ಥೆ ವರದಿ ಮಾಡಿದೆ



ಆ್ಯಪ್ ಸಿಒಒ ಹುದ್ದೆಗೆ ಖಾನ್

ಭಾರತ ಮೂಲದ ಸಬೀಹ್ ಖಾನ್ ಅವರು ಆ್ಯಪಲ್ ಕಂಪನಿಯ ಸಿಒಒ ಆಗಲಿದ್ದಾರೆ. ಹಾಲಿ ಸಿಒಒ ಜೆಫ್ ವಿಲಿಯಮ್ಸ್ ನಿವೃತ್ತಿಯ ನಂತರ, ಖಾನ್ ಆ ಜವಾಬ್ದಾರಿಯನ್ನು ಈ ತಿಂಗಳಲ್ಲಿ ವಹಿಸಿಕೊಳ್ಳಲಿದ್ದಾರೆ



SAMSUNG

Galaxy Z Fold7
Galaxy AI

4.2mm
Slimmest Galaxy Z Fold yet

200MP Camera
with ProVisual Engine

Snapdragon 8 Elite
for Galaxy

Pre-order now

Buy 256GB. Get 512GB.
^Free memory upgrade worth ₹ 12000

24 months no-cost EMI*
Zero down payment

BAJAJ FINSERV | HDFC BANK | IDFC FIRST Bank | TVS CREDIT | Samsung Finance+™

samsung.com

Please dispose of e-waste and plastic waste responsibly. Customers can WhatsApp on 180057267664 for information on e-waste/plastic waste.

Image simulated, actual may vary. Actual UX/UI may vary. Color and features as per availability. Samsung account login is required for certain AI features. Samsung does not make any promises, assurances, or guarantees as to the accuracy, completeness or reliability of the output provided by AI features. Samsung promotes responsible use of Artificial Intelligence (AI) features. *T&C apply. 24 months no cost EMI only applicable on NBFC. Eligibility for EMI at the sole discretion of the financiers including those listed on Samsung Finance+ (Financier T&C applies). ^Pre-order customers of Galaxy Z Fold7 256 GB are eligible to benefits of memory upgrade from 256 GB to 512 GB worth ₹ 12000. Offer valid till 24 July 2025. Offer can be revised or withdrawn without prior notice. All third party logos/brands are trademarks/registered trademarks of the respective brand/company. Samsung disclaims any and all liabilities thereof.

Scan and experience Galaxy AI

Or WhatsApp "Hi" to 9870 494949 to pre-order at Samsung Experience Store

Cheil-26941/25

Cheil-26941/24

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗುತ್ತಿಗೆ ರದ್ದು
ಮುಖ್ಯಮಂತ್ರಿ ರೇಖಾ ಗುಪ್ತಾ ಅವರ ಅಧಿಕೃತ ನಿವಾಸದ ನವೀಕರಣ ಕಾರ್ಯದ ಗುತ್ತಿಗೆಯನ್ನು ದೆಹಲಿ ಸರ್ಕಾರ ರದ್ದುಗೊಳಿಸಿದೆ

ಐಸಿಸಿ: ಅಗ್ರ ಹತ್ತರಲ್ಲಿ ಗಿಲ್
ಭಾರತ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್ ಅವರು ತಮ್ಮ ವೃತ್ತಿಜೀವನದಲ್ಲಿ ಮೊದಲ ಸಲ ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ 6ನೇ ಸ್ಥಾನಕ್ಕೇರಿದ್ದಾರೆ. ಒಟ್ಟು 15 ಸ್ಥಾನಗಳ ಬಡ್ತಿ ಪಡೆದಿದ್ದಾರೆ

ಸೆನ್ಸೆಕ್ಸ್ 83,536 | ನಿಫ್ಟಿ 25,476 | $/₹ 85.73 | ಚಿನ್ನ (Std. 10g) ₹1.01 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.14 ಲಕ್ಷ (ಬೆಂಗಳೂರು)

ಉಗ್ರನಿಗೆ ಎಎಸ್‌ಐ ನಂಟು: ಎನ್‌ಐಎ

ಬೆಂಗಳೂರು: ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಉಗ್ರರೊಂದಿಗೆ ಸಂಪರ್ಕ ಹೊಂದಿದ್ದ ಮನೋವೈದ್ಯ, ಎಎಸ್‌ಐ ಹಾಗೂ ಶಂಕಿತ ಉಗ್ರನ ತಾಯಿಯನ್ನು ಬಂಧಿಸಿರುವ ಎನ್‌ಐಎ ಅಧಿಕಾರಿಗಳು, ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಟಿ.ನಾಸೀರ್ ಜೊತೆಗೆ ಮೂವರೂ ಸಂಪರ್ಕ ಹೊಂದಿರುವ ಸುಳಿವು ಸಿಕ್ಕಿದ್ದು, ಅದನ್ನು ಆಧರಿಸಿ ಎನ್‌ಐಎ ಅಧಿಕಾರಿಗಳು ಕೋಲಾರ ಹಾಗೂ ಬೆಂಗಳೂರಿನ ಐದು ಸ್ಥಳಗಳಲ್ಲಿ ದಾಳಿ ನಡೆಸಿದ್ದಾರೆ.

ಇನ್ನಷ್ಟು ವಿವರ 5

ಚಿನಕುರುಳಿ ಪ್ರಕಾಶ್ ಶೆಟ್ಟಿ

ನಿಗಮ, ಮಂಡಳಿ ಪಟ್ಟಿ ಆಖೈರು?

ನವದೆಹಲಿಯಲ್ಲಿ ಇಂದು ಸುರ್ಜೇವಾಲಾ ಜತೆ ಸಿ.ಎಂ, ಡಿಸಿಎಂ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷ ಸಂಘಟನೆ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಕುರಿತಂತೆ ಎರಡು ಹಂತಗಳಲ್ಲಿ ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಗುರುವಾರ ಸಂಜೆ ಸಭೆ ನಡೆಸಲಿದ್ದಾರೆ.

ಸರ್ಕಾರದ ಆಡಳಿತ ವೈಫಲ್ಯದ ಬಗ್ಗೆ ಶಾಸಕರಾದ ಬಿ.ಆರ್. ಪಾಟೀಲ ಮತ್ತು ರಾಜು ಕಾಗೆ ಅವರು ಬಹಿರಂಗವಾಗಿ ಆರೋಪ ಮಾಡಿದ ಬೆನ್ನಲ್ಲೇ ಹಲವು ಶಾಸಕರು ಅನುದಾನ ಕೊರತೆ, ಸಚಿವರ ಅಸಹಕಾರ, ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದರು. ಸುರ್ಜೇವಾಲಾ ಅವರು ಜೂನ್ 30ರಿಂದ ಮೂರು ದಿನ ಬೆಂಗಳೂರು, ಮೈಸೂರು ವಿಭಾಗದ 42 ಶಾಸಕರೊಂದಿಗೆ ಸಭೆ ನಡೆಸಿದ್ದರು. ಎರಡನೇ ಹಂತದಲ್ಲಿ ಉಳಿದ ಭಾಗಗಳ 61 ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಎರಡು ವರ್ಷಗಳಲ್ಲಿ ತಮ್ಮ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು, ಭವಿಷ್ಯದ ಯೋಜನೆಗಳು, ಕ್ಷೇತ್ರದಲ್ಲಿ ಕೆಲಸ ಮಾಡಲು ಉಂಟಾಗುತ್ತಿರುವ ಅಡ್ಡಿಗಳು, ಸರ್ಕಾರ ಹಾಗೂ ಉಸ್ತುವಾರಿ ಸಚಿವರ ಕಾರ್ಯವೈಖರಿ ಬಗ್ಗೆ ಹಲವು ಶಾಸಕರು ಅಳಲು ತೋಡಿಕೊಂಡಿದ್ದರು. ಸರ್ಕಾರದ ಕಾರ್ಯಶೈಲಿಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಬಗ್ಗೆ ಸುರ್ಜೇವಾಲಾ ವರದಿ ಸಿದ್ಧಪಡಿಸಿದ್ದಾರೆ. ಸರ್ಕಾರದಲ್ಲಿನ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ಮೊದಲ ಮತ್ತು ಎರಡನೇ ಹಂತದಲ್ಲಿ ಹಲವು ನಿಗಮ, ಮಂಡಳಿಗಳಿಗೆ ಅಧ್ಯಕ್ಷರ ನೇಮಕ ನಡೆದಿತ್ತು. ನಿರ್ದೇಶಕರು, ಸದಸ್ಯರ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಈ ಸಂದರ್ಭದಲ್ಲಿ ಕಾರ್ಯಕರ್ತರಿಗೆ ಸ್ಥಾನಮಾನ ನೀಡಲಾಗುವುದು ಎಂದು ಪಕ್ಷ ಈ ಹಿಂದೆ ಪ್ರಕಟಿಸಿತ್ತು. ಈ ನಿಗಮಗಳಿಗೆ ಅಧ್ಯಕ್ಷರ ಹೆಸರನ್ನು ಗುರುವಾರ ಆಖೈರುಗೊಳಿಸುವ ಸಂಭವ ಇದೆ. ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದ ಕೆಲವು ಶಾಸಕರಿಗೂ ಅಧ್ಯಕ್ಷ ಸ್ಥಾನ ನೀಡುವ ಚರ್ಚೆ ಆರಂಭವಾಗಿದೆ.

5

ನಿಗಮ, ಮಂಡಳಿ ನೇಮಕಾತಿಗೆ ಸಂಬಂಧ ಸುರ್ಜೇವಾಲಾ ಜೊತೆ ಗುರುವಾರ ಚರ್ಚೆ ನಡೆಸಲಾಗುತ್ತದೆ. ಸಾಧ್ಯವಾದರೆ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಮಲ್ಲಿಕಾರ್ಜುನ ಖರ್ಗೆ ಅವರು ಈ ವರ್ಷವನ್ನು ಪಕ್ಷ ಸಂಘಟನಾ ವರ್ಷ ಎಂದು ಘೋಷಿಸಿದ್ದಾರೆ. ಈ ಸಂಬಂಧ ಸಭೆ ನಡೆಸಲಾಗುತ್ತದೆ. ಅಲ್ಲಿ ರಾಜಕೀಯ ವಿಚಾರ ಇರುವುದಿಲ್ಲ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸೋನಿಯಾ ಭೇಟಿಗೆ ಸಮಯ ಕೇಳಿದ ಡಿಕೆಶಿ

ಕರ್ನಾಟಕದ 'ಕೈ' ಸರ್ಕಾರದಲ್ಲಿ ಅಧಿಕಾರ ಹಂಚಿಕೆಯ ಕುರಿತು ಚರ್ಚಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಲು ಯತ್ನಿಸಿದರು.

ಬುಧವಾರ ಬೆಳಿಗ್ಗೆ ಸೋನಿಯಾ ನಿವಾಸಕ್ಕೆ ತೆರಳಿದ ಅವರು ಭೇಟಿಗೆ ಕಾಲಾವಕಾಶ ಕೋರಿದರು. ಅವರ ಭೇಟಿ ಸಾಧ್ಯವಾಗಲಿಲ್ಲ. ಜತೆಗೆ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಭೇಟಿಗೂ ಸಮಯ ಕೇಳಿದರು. ಪ್ರಿಯಾಂಕಾ ಅವರನ್ನು ಶಿವಕುಮಾರ್ ಭೇಟಿ ಮಾಡಿ ಸಮಾಲೋಚಿಸಿದರು ಎಂದು ಹೈಕಮಾಂಡ್ ಮೂಲಗಳು ಹೇಳಿವೆ. ಆದರೆ, ಇದನ್ನು ಶಿವಕುಮಾರ್ ನಿರಾಕರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಸ್ಪಷ್ಟನೆ ನೀಡಿದ ಅವರು, 'ಸೋನಿಯಾ ಅವರ ಭೇಟಿಗೆ ಕಾಲಾವಕಾಶ ಕೇಳಲು ಅವರ ನಿವಾಸಕ್ಕೆ ಹೋಗಿದ್ದೆ' ಎಂದರು.

ರಾಜ್ಯದಲ್ಲಿ ಸೆಪ್ಟೆಂಬರ್‌ನಲ್ಲಿ ಕ್ರಾಂತಿ ಆಗಲಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಕೆಲವು ದಿನಗಳ ಹಿಂದೆ ಹೇಳಿಕೆ ನೀಡಿದ್ದರು. 'ಐದು ವರ್ಷಗಳ ಕಾಲ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದ್ದರು. 'ಸದ್ಯ ನನ್ನ ಬಳಿ ಬೇರೆ ಆಯ್ಕೆಗಳಿಲ್ಲ' ಎಂದು ಶಿವಕುಮಾರ್ ಮಾರ್ಮಿಕವಾಗಿ ಹೇಳಿದ್ದರು.

'ಮೊದಲ ಎರಡೂವರೆ ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ. ನಂತರ ಆ ಸ್ಥಾನವನ್ನು ಶಿವಕುಮಾರ್ ಅವರಿಗೆ ಬಿಟ್ಟುಕೊಡಬೇಕು ಎಂದು ಹೈಕಮಾಂಡ್ ಅಧಿಕಾರ ಹಂಚಿಕೆ ಸೂತ್ರ ಸಿದ್ಧಪಡಿಸಿತ್ತು. ಆ ಪ್ರಕಾರ, ನವೆಂಬರ್ ಹೊತ್ತಿಗೆ ಮುಖ್ಯಮಂತ್ರಿ ಸ್ಥಾನವನ್ನು ಶಿವಕುಮಾರ್ ಅವರಿಗೆ ಬಿಟ್ಟುಕೊಡಬೇಕು' ಎಂಬುದು ಶಿವಕುಮಾರ್ ಬಣದ ವಾದ.

'ಸೋನಿಯಾ ಗಾಂಧಿ ಮಧ್ಯಪ್ರವೇಶ ಮಾಡಿದ ಬಳಿಕವಷ್ಟೇ ಸಿದ್ದರಾಮಯ್ಯ ಮೊದಲ ಅವಧಿಗೆ ಮುಖ್ಯಮಂತ್ರಿಯಾಗಲು ಒಪ್ಪಿದ್ದೇನೆ. ನವೆಂಬರ್‌ವರೆಗೆ ಸಿದ್ದರಾಮಯ್ಯ ಅವರಿಗೆ ಸಂಪೂರ್ಣ ಸಹಕಾರ ನೀಡುತ್ತೇನೆ. ಅಲ್ಲಿಯವರೆಗೆ ತಾಳ್ಮೆಯಿಂದ ಕಾಯುತ್ತೇನೆ. ಮತ್ತೆ ನೋಡೋಣ' ಎಂದು ಶಿವಕುಮಾರ್ ಅವರು ಆಪ್ತರಲ್ಲಿ ಹೇಳಿಕೊಂಡಿದ್ದಾರೆ. ಈ ವಿಷಯದ ಬಗ್ಗೆ ಸೋನಿಯಾ ಅವರಲ್ಲಿ ಪ್ರಸ್ತಾಪಿಸಲು ಶಿವಕುಮಾರ್ ಬಯಸಿದ್ದರು ಎಂದು ಮೂಲಗಳು ಹೇಳಿವೆ.

'ಪಕ್ಷದ ಹಿರಿಯ ನಾಯಕರ ಭೇಟಿಗೆ ಸಮಯ ಕೇಳಿದ್ದೇನೆ. ಸಮಯ ನೀಡದಿದ್ದರೆ ಯಾರನ್ನೂ ಭೇಟಿಯಾಗಲು ಆಗುವುದಿಲ್ಲ. ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪಟ್ನಾಕ್ಕೆ ತೆರಳಿದ್ದಾರೆ' ಎಂದು ಶಿವಕುಮಾರ್ ತಿಳಿಸಿದರು.

ಕಿಟ್ಟಿ ಪಾರ್ಟಿ ಸಾಧನ ₹30 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ



ಸವಿತಾ

ಬೆಂಗಳೂರು: ರಾಜಕಾರಣಿಗಳ ಹೆಸರು ಬಳಸಿಕೊಂಡು ಶ್ರೀಮಂತ ಕುಟುಂಬದ 20ಕ್ಕೂ ಹೆಚ್ಚು ಮಹಿಳೆಯರಿಗೆ ಅಂದಾಜು ₹30 ಕೋಟಿ ವಂಚಿಸಿರುವ ಆರೋಪದಡಿ ಎಚ್‌ವಿಕೆ ಗಾರ್ಡನ್ ನಿವಾಸಿ ಸವಿತಾ ಹಾಗೂ ಆಕೆಯ ಪರಿಚಯಸ್ಥ ಪುನೀತ್‌ನನ್ನು ಬಸವೇಶ್ವರನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕಿಟ್ಟಿ ಪಾರ್ಟಿಯಲ್ಲಿ ಪರಿಚಯ ಆದವರಿಗೆ ವಂಚಿಸಿದ್ದ ಇಬ್ಬರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ತಲೆಮರೆಸಿಕೊಂಡಿರುವ ಇಬ್ಬರಿಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ₹85 ಲಕ್ಷ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ಬಂದಿತ್ತು. ಆ ದೂರು ಆಧರಿಸಿ ತನಿಖೆ ನಡೆಸಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಎಂ.ಬಿ.ಪಾಟೀಲ, ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಹೆಸರು ಬಳಸಿಕೊಂಡು ಸವಿತಾ ವಂಚನೆ ನಡೆಸಿರುವುದು ಗೊತ್ತಾಗಿದೆ. ಅದಕ್ಕೆ ಸಂಬಂಧಿಸಿದ ಆಡಿಯೊವನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ ₹2.50 ಕೋಟಿ ವಂಚನೆ ನಡೆಸಿದ್ದ ಆರೋಪದಡಿ ಸವಿತಾ ವಿರುದ್ಧ ಗೋವಿಂದರಾಜನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ಪ್ರಕರಣದಲ್ಲೂ ಆಕೆಯನ್ನು ಬಂಧಿಸಲಾಗಿತ್ತು ಎಂದು ಪೊಲೀಸರು ಹೇಳಿದರು.

'ಸದ್ಯದ ತನಿಖೆಯಲ್ಲಿ ಅಂದಾಜು ₹30 ಕೋಟಿ ವಂಚನೆ ನಡೆಸಿರುವುದು ಕಂಡುಬಂದಿದೆ. ತನಿಖೆ ಪೂರ್ಣವಾದ ಮೇಲೆ ವಂಚನೆಯ ಮೊತ್ತ ಗೊತ್ತಾಗಲಿದೆ' ಎಂದು ಪೊಲೀಸರು ಹೇಳಿದರು.

'ಆರ್ಥಿಕವಾಗಿ ಪ್ರಬಲವಾಗಿರುವ ಕುಟುಂಬದ ಮಹಿಳೆಯರನ್ನು ಗುರುತಿಸುತ್ತಿದ್ದ ಆರೋಪಿ, ಅವರನ್ನು ಪರಿಚಯ ಮಾಡಿಕೊಳ್ಳುತ್ತಿದ್ದಳು. ನಂತರ, ಕಿಟ್ಟಿ ಪಾರ್ಟಿಗೆ ಬರುವಂತೆ ಆಹ್ವಾನ ನೀಡುತ್ತಿದ್ದಳು. ತನಗೆ ಹಲವು ರಾಜಕಾರಣಿಗಳು ಗೊತ್ತು ಎಂದು ಹೇಳಿಕೊಂಡು ಗಾಳ ಹಾಕುತ್ತಿದ್ದಳು. ಬಳಿಕ ಅವರನ್ನು ಪುಸಲಾಯಿಸಿ ಹೂಡಿಕೆ ನೆಪದಲ್ಲಿ ಹಣ ಪಡೆದು ವಂಚಿಸುತ್ತಿದ್ದಳು' ಎಂದು ಮೂಲಗಳು ಹೇಳಿವೆ.

'ಅಮೆರಿಕ ಹಾಗೂ ದುಬೈನಲ್ಲಿ ಪರಿಚಯಸ್ಥರು ನೆಲಸಿದ್ದಾರೆ. ಅಲ್ಲಿಂದ ಕಡಿಮೆ ಬೆಲೆಗೆ ಚಿನ್ನ ತರಿಸಿಕೊಡುವುದಾಗಿಯೂ ಹೇಳಿ ವಂಚಿಸಿರುವುದು ಗೊತ್ತಾಗಿದೆ. ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡುವಂತೆ ಶ್ರೀಮಂತ ಕುಟುಂಬದ ಮಹಿಳೆಯರನ್ನು ಮನವೊಲಿಸಿ ಮೋಸ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಜನ್ಮ ದಿನದ ಪ್ರಯುಕ್ತ ಜೆಡಿಎಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಗೊಟ್ಟಿಗೆರೆ ಮಂಜುನಾಥ್ (ಮಂಜಣ್ಣ) ಅವರಿಗೆ ಬಸವನಪುರ ಬಿ.ಎನ್. ಕುಮಾರ್ ಬೆಳ್ಳಿ ಕಿರೀಟ ತೊಡಿಸಿ, ಬೆಳ್ಳಿ ಗದೆ ನೀಡಿ ಅಭಿನಂದಿಸಿದರು. ಗೊಟ್ಟಿಗೆರೆ ಸುನಿಲ್, ತರುಣ್, ಸುಬ್ಬಣ್ಣ, ಸುಕೇಶ್, ಮಂಜುನಾಥ್ ಹಾಗೂ ಅಭಿಮಾನಿ ಬಳಗದವರು ಇದ್ದರು

‘ಉಸ್ತುವಾರಿ’ಗೆ ದೂರಿನ ಸುರಿಮಳೆ

ಸಚಿವರ ಕಾರ್ಯವೈಖರಿ ವಿರುದ್ಧ ಸುರ್ಜೇವಾಲಾಗೆ ಶಾಸಕರ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವರ ಕಾರ್ಯವೈಖರಿ ವಿರುದ್ಧ ಪಕ್ಷದ ‘ಉಸ್ತುವಾರಿ’ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಮುಂದೆ ಕಾಂಗ್ರೆಸ್ ಶಾಸಕರು ದೂರುಗಳ ಸುರಿಮಳೆ ಸುರಿಸಿದ್ದಾರೆ. ಯಾವ್ಯಾವ ಇಲಾಖೆಗಳಿಂದ ಅಭಿವೃದ್ಧಿ ಕೆಲಸಕ್ಕೆ ಹಿನ್ನಡೆಯಾಗಿದೆ ಎಂಬುದನ್ನು ದಾಖಲೆಗಳ ಸಹಿತ ಕೆಲವು ಶಾಸಕರು ವಿವರಿಸಿದ್ದಾರೆ. ಸ್ಪಂದಿಸದ ಸಚಿವರಿಗೆ ಮುಖ್ಯಮಂತ್ರಿಯ ಮೂಲಕ ಸೂಚನೆ ಕೊಡಿಸಬೇಕು ಎಂದೂ ಬಿನ್ನವಿಸಿದ್ದಾರೆ.

ಶಾಸಕರ ದೂರುಗಳಿಗೆ ಸ್ಪಂದಿಸಿದ ಸುರ್ಜೇವಾಲಾ, ಕೆಲವು ಸಚಿವರಿಗೆ ದೂರವಾಣಿ ಕರೆ ಮಾಡಿ ಸಮಸ್ಯೆಗಳನ್ನು ಗಮನಕ್ಕೆ ತಂದಿದ್ದಾರೆ. ‘ಶಾಸಕರು ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ನಿಮ್ಮ ಇಲಾಖೆಗೆ ಸಂಬಂಧಿಸಿದ ಕೆಲಸ ಇನ್ನೂ ಬಾಕಿಯಿದೆ. ಅವುಗಳನ್ನು ಆದಷ್ಟು ಬೇಗ ಮುಗಿಸಿಕೊಡಿ’ ಎಂದು ಶಾಸಕರ ಮುಂದೆಯೇ ಸಚಿವರಿಗೆ ಸುರ್ಜೇವಾಲಾ ಕಿವಿಮಾತು ಹೇಳಿದ್ದಾರೆ ಎಂದು ಗೊತ್ತಾಗಿದೆ.

ಸುರ್ಜೇವಾಲಾ ಭೇಟಿ ಬಳಿಕ ಮಾತನಾಡಿದ ಶಾಸಕ ಯು.ಬಿ. ಬಣಕಾರ್, ‘ಕ್ಷೇತ್ರದ ಸಮಸ್ಯೆಗಳನ್ನು ಗಮನಕ್ಕೆ ತಂದಿದ್ದೇನೆ. ರಾಜಕೀಯ ಬೆಳವಣಿಗೆ ಬಗ್ಗೆಯೂ ಮಾಹಿತಿ ಹಂಚಿಕೊಂಡಿದ್ದೇನೆ. ಕ್ಷೇತ್ರಕ್ಕೆ ಅನುದಾನದ ಕೊರತೆ ಇಲ್ಲ. ಮುಖ್ಯಮಂತ್ರಿ ₹50 ಕೋಟಿ, ನೀರಾವರಿಗೆ ಉಪ ಮುಖ್ಯಮಂತ್ರಿ ₹ 50 ಕೋಟಿ ಕೊಟ್ಟಿದ್ದಾರೆ. ಹೀಗಾಗಿ ನನ್ನ ಕ್ಷೇತ್ರಕ್ಕೆ (ಹಿರೇಕೆರೂರು) ಯಾವುದೇ ಸಮಸ್ಯೆ ಇಲ್ಲ’ ಎಂದರು.

ಶಾಸಕ ಪ್ರಕಾಶ್ ಕೋಳಿವಾಡ ಮಾತನಾಡಿ, ‘ಸುರ್ಜೇವಾಲಾ ಅವರ ಮುಂದೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದೇನೆ. ಸಿದ್ದರಾಮಯ್ಯ ಉತ್ತಮ ಸರ್ಕಾರ ನೀಡುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಜನ ನೆನಪಿಸಿಕೊಳ್ಳುತ್ತಿದ್ದಾರೆ. ಸರ್ಕಾರದ ಮೇಲೆ ಜನರಿಗೆ ನಂಬಿಕೆ ಬಂದಿದೆ’ ಎಂದರು.

‘ಸುರ್ಜೇವಾಲಾ ಅವರು ಗ್ಯಾರಂಟಿ ಯೋಜನೆಗಳ ಬಗ್ಗೆ ಕೇಳಿದರು. ಅದರ ಬಗ್ಗೆ ಅವರಿಗೆ ಸಂಪೂರ್ಣ ಮಾಹಿತಿ ಕೊಟ್ಟಿದ್ದೇನೆ. ಕ್ಷೇತ್ರದ ಅಭಿವೃದ್ಧಿ ಕೆಲಸಗಳ ಬಗ್ಗೆಯೂ ಹೇಳಿದ್ದೇನೆ. ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ. ಕೊಡುವುದು, ಬಿಡುವುದು ಹೈಕಮಾಂಡ್‌ಗೆ ಬಿಟ್ಟಿದ್ದು’ ಎಂದು ಶಾಸಕ ಬಸಂತಪ್ಪ ಹೇಳಿದರು.

ಸುರ್ಜೇವಾಲಾ ಅವರ ಮುಂದೆ ಭದ್ರಾವತಿ ಶಾಸಕ ಸಂಗಮೇಶ್ ಅವರು ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟರು. ‘ನಾನು ಮೂರು ಬಾರಿ ಶಾಸಕನಾದವನು. ಆದರೆ, ಸಂಪುಟದಲ್ಲಿ ಅವಕಾಶ ಸಿಕ್ಕಿಲ್ಲ. ಶಿವಮೊಗ್ಗದಲ್ಲಿ ಹಿಂದೆ ನಾನೊಬ್ಬನೇ ಗೆದ್ದಿದ್ದೆ. ಆಗಲೂ ಸಚಿವ ಸ್ಥಾನ ಕೊಡುವುದಾಗಿ ಭರವಸೆ ನೀಡಿ ಕೊನೆಯಲ್ಲಿ ಕೊಡಲಿಲ್ಲ. ಸಂಪುಟ ಪುನಾರಚನೆ ವೇಳೆ ಪರಿಗಣಿಸಬೇಕು’ ಎಂದು ಮನವಿ ಮಾಡಿದರು.

ಅನಾರೋಗ್ಯದ ಕಾರಣ ಸಭೆಗೆ ಹಾಜರಾಗದೆ ದೂರವಾಣಿ ಕರೆ ಮಾಡಿ ಸುರ್ಜೇವಾಲಾ ಜೊತೆ ಶಾಮನೂರು ಶಿವಶಂಕರಪ್ಪ ಅವರು ಮಾತನಾಡಿದರು. ವಿದೇಶದಲ್ಲಿರುವ ಕಾರಣ ದೆಹಲಿಗೆ ಬಂದು ಭೇಟಿಯಾಗುವುದಾಗಿ ಸುರ್ಜೇವಾಲಾಗೆ ಬಸವರಾಜ್ ಶಿವಗಂಗಾ ತಿಳಿಸಿದ್ದಾರೆ.

ಯೋಗೇಶ್ವರ್ ಪುತ್ರಿ, ಮೊದಲ ಪತ್ನಿ ಭೇಟಿ

ಕಾಂಗ್ರೆಸ್ ಶಾಸಕ ಸಿ.ಪಿ. ಯೋಗೇಶ್ವರ್ ಅವರ ಪುತ್ರಿ ನಿಶಾ ಯೋಗೇಶ್ವರ್ ಹಾಗೂ ಮೊದಲ ಪತ್ನಿ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ನಿಶಾ, ‘ಯಾರೂ ನಮಗೆ ನ್ಯಾಯ ಕೊಡಿಸಿಲ್ಲ. ದೊಡ್ಡ ವ್ಯಕ್ತಿಯೊಬ್ಬರನ್ನು ಪ್ರಶ್ನೆ ಮಾಡುವುದು ಸುಲಭವಲ್ಲ. ಅನ್ಯಾಯವನ್ನು ಎಷ್ಟೆಂದು ಸಹಿಸುವುದು' ಎಂದರು.

‘ಸುರ್ಜೇವಾಲಾ ಅವರಿಗೆ ಮಾಹಿತಿ ನೀಡಿದ್ದೇವೆ. ನಮ್ಮ ಜೀವನ ಕಷ್ಟ ಆಗಿದೆ. ಅವರು (ಸಿ.ಪಿ. ಯೋಗೇಶ್ವರ್) ನಮಗೆ ಸಹಾಯ ಮಾಡುತ್ತಿಲ್ಲ. ಇದು ರಾಜಕೀಯ ಅಲ್ಲ, ಬದಲಾಗಿ ನ್ಯಾಯದ ಪ್ರಶ್ನೆ. ಈ ವಿಚಾರವಾಗಿ ಮಾತನಾಡುತ್ತೇನೆ ಎಂದು ಸುರ್ಜೇವಾಲಾ ಅವರು ಭರವಸೆ ನೀಡಿದ್ದಾರೆ. ನ್ಯಾಯಾಲಯದ ಮೂಲಕವೂ ಹೋರಾಟ ಮಾಡುತ್ತಿದ್ದೇವೆ’ ಎಂದರು.

ಸುದ್ದಿ 2 ನಿಮಿಷ

ಯಶವಂತಪುರ–ಕಾಚಿಗುಡ ವಂದೇ ಭಾರತ್‌ಗೆ 16 ಬೋಗಿ

ಬೆಂಗಳೂರು: ಕಾಚಿಗುಡ – ಯಶವಂತಪುರ ನಡುವೆ ಸಂಚರಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಬೋಗಿಗಳ ಸಂಖ್ಯೆಯನ್ನು 16ಕ್ಕೆ ಹೆಚ್ಚಿಸಲಾಗಿದೆ.

ವಂದೇ ಭಾರತ್ ರೈಲು 8 ಬೋಗಿಗಳೊಂದಿಗೆ ಸಂಚರಿಸುತ್ತಿದೆ. ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿರುವುದರಿಂದ ಬೋಗಿಗಳ ಸಂಖ್ಯೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಜುಲೈ 10ರಿಂದ 16 ಬೋಗಿಗಳ ವಂದೇ ಭಾರತ್ ಸಂಚರಿಸಲಿದೆ. ಇದು ಶಾಶ್ವತ ವ್ಯವಸ್ಥೆಯಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹೂಡಿಯಲ್ಲಿ ವೃಕ್ಷ್ ಫರ್ಟಿಲಿಟಿ ಕೇಂದ್ರಕ್ಕೆ ಚಾಲನೆ

ಬೆಂಗಳೂರು: ನಗರದ ವೈಟ್‌ಫೀಲ್ಡ್ ಸಮೀಪದ ಹೂಡಿಯಲ್ಲಿ ವೃಕ್ಷ್ ಫರ್ಟಿಲಿಟಿ ಕೇಂದ್ರ ತನ್ನ ಎರಡನೇ ಶಾಖೆಯನ್ನು ಈಚೆಗೆ ಆರಂಭಿಸಿತು.

ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಮುಖ್ಯ ಕೇಂದ್ರದ ಯಶಸ್ವಿನ ನಂತರ, ಎರಡನೇ ಶಾಖೆಯನ್ನು ಹೂಡಿಯಲ್ಲಿ ಆರಂಭಿಸಿದೆ.

ಪೌಷ್ಟಿಕತಜ್ಞೆ ಮತ್ತು ವೆಲ್‌ನೆಸ್ ಬ್ರ್ಯಾಂಡ್ ಅಲಮಿರಾಪ್‌ನ ಸಂಸ್ಥಾಪಕಿ ಪರಿಮಳಾ ಜಗ್ಗೇಶ್ ಕೇಂದ್ರವನ್ನು ಉದ್ಘಾಟಿಸಿದರು.

ವೃಕ್ಷ್ ಫರ್ಟಿಲಿಟಿ ಕ್ಲಿನಿಕಲ್ ನಿರ್ದೇಶಕಿ ಡಾ. ಸ್ನೇಹಾ ಶೆಟ್ಟಿ, ‘ಸಾವಿರಾರು ದಂಪತಿ ನಮ್ಮಲ್ಲಿ ಇರಿಸಿರುವ ಭರವಸೆ, ಕಾಳಜಿ ಮತ್ತು ನಂಬಿಕೆಯೇ ಹೊಸ ಕೇಂದ್ರದ ಆರಂಭಕ್ಕೆ ಕಾರಣ. ನಾವು ಪ್ರತಿಯೊಬ್ಬ ರೋಗಿಯೊಂದಿಗೆ ಸಹಾನುಭೂತಿಯಿಂದ ನಡೆದುಕೊಳ್ಳುತ್ತೇವೆ’ ಎಂದರು.

ವೃಕ್ಷ್ ಫರ್ಟಿಲಿಟಿ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದ ಹಲವರು ತಮ್ಮ ಅನುಭವ ಹಂಚಿಕೊಂಡರು. ಶಾಸಕಿ ಮಂಜುಳಾ ಲಿಂಬಾವಳಿ, ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಹರಿಪ್ರಸಾದ್ ಶೆಟ್ಟಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗೃಹ ಮಂಡಳಿ ಕಚೇರಿಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗೃಹ ಮಂಡಳಿಯ ನಿವೇಶನವನ್ನು ಅನರ್ಹರಿಗೆ, ಅಕ್ರಮವಾಗಿ ಮಾರಾಟ ಮಾಡಿದ ಪ್ರಕರಣದಲ್ಲಿ, ಮಂಡಳಿಯ ಅಧಿಕಾರಿಯೂ ಸೇರಿ ಮೂವರ ಮನೆ ಹಾಗೂ ಮಂಡಳಿಯ ಯಲಹಂಕ ಕಚೇರಿಯ ಮೇಲೆ ಲೋಕಾಯುಕ್ತ ಪೊಲೀಸರು ಬುಧವಾರ ದಾಳಿ ನಡೆಸಿದ್ದಾರೆ.

ಮಂಡಳಿಯು ಯಲಹಂಕದ ನ್ಯೂಟೌನ್‌ನ ‘ಎ’ ಸೆಕ್ಟರ್‌ನಲ್ಲಿ ಅಭಿವೃದ್ಧಿ ಪಡಿಸಿದ್ದ ನಿವೇಶನ ಸಂಖ್ಯೆ 271 ಅನ್ನು ಅನರ್ಹರೊಬ್ಬರಿಗೆ ಮಾರಾಟ ಮಾಡಲಾಗಿದೆ. ಈ ಮೂಲಕ ಸರ್ಕಾರಕ್ಕೆ ₹10 ಕೋಟಿ ನಷ್ಟ ಉಂಟು ಮಾಡಲಾಗಿದೆ ಎಂದು ಲೋಕಾಯುಕ್ತದಲ್ಲಿ ದೂರು ದಾಖಲಾಗಿತ್ತು.

‘ಯಲಹಂಕದಲ್ಲಿನ ಕಚೇರಿ ಶೋಧದ ವೇಳೆ, ಅಕ್ರಮಕ್ಕೆ ಸಂಬಂಧಿಸಿದ ಹಲವು ದಾಖಲೆಗಳು ಪತ್ತೆಯಾಗಿವೆ. ಹೀಗಾಗಿ ಮಂಡಳಿಯು ಅಭಿವೃದ್ಧಿಪಡಿಸಿರುವ ಸುಮಾರು ₹1,500 ಕೋಟಿ ಮೌಲ್ಯದ ನಿವೇಶನಗಳಿಗೆ ಸಂಬಂಧಿಸಿದ ದಾಖಲೆ ಮತ್ತು ಲೆಕ್ಕಪತ್ರಗಳನ್ನು ಸಲ್ಲಿಸಿ ಎಂದು, ಮಂಡಳಿಯ ಆಯುಕ್ತರಿಗೆ ಸೂಚಿಸಲಾಗಿದೆ’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

‘ಗೃಹ ಮಂಡಳಿಯ ಯಲಹಂಕ ಉಪನಗರ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸೈಯದ್ ಅಸ್ಗರ್, ನಿವೇಶನ ಖರೀದಿಸಿದ್ದ ಗೋವಿಂದಯ್ಯ ಮತ್ತು ಸತೀಶ್ ಹರಿಣಿ ಎಂಬುವವರ ಮನೆಗಳ ಮೇಲೆ ದಾಳಿ ಮಾಡಿ, ಶೋಧ ನಡೆಸಲಾಯಿತು. ನಿವೇಶನಗಳ ವ್ಯಾಜ್ಯಕ್ಕೆ ಸಂಬಂಧಿಸಿದ ಹಲವು ದಾಖಲೆಗಳು ಪತ್ತೆಯಾಗಿವೆ’ ಎಂದು ಹೇಳಿದ್ದಾರೆ.

ಶೋಧದ ವೇಳೆ ಹಲವು ದಾಖಲೆಗಳನ್ನು ವಶಕ್ಕೆ ಪಡೆದ ತನಿಖಾಧಿಕಾರಿಗಳು, ಮೂವರಿಗೂ ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದರು.

ಬಾಲಕಿ ಕೊಲೆ ಅತ್ಯಾಚಾರ ಶಂಕೆ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಪಟ್ಟಣದ ಬಾಡಿಗೆ ಮನೆಯೊಂದರಲ್ಲಿ ಕೊಪ್ಪಳ ಜಿಲ್ಲೆಯ 13 ವರ್ಷದ ಬಾಲಕಿಯ ಕೊಲೆಯಾಗಿದೆ. ಕೃತ್ಯಕ್ಕೆ ಮುಂಚೆ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ ಶಂಕೆ ವ್ಯಕ್ತವಾಗಿದೆ. ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕಿಯ ತಂದೆ–ತಾಯಿ ಇಬ್ಬರೂ ಕಟ್ಟಡ ನಿರ್ಮಾಣ ಕೆಲಸ ಮಾಡುವ ವಲಸೆ ಕಾರ್ಮಿಕರು. ನಾಲ್ವರು ಮಕ್ಕಳೊಂದಿಗೆ ಪಟ್ಟಣದ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಕೊಲೆಯಾದ ಬಾಲಕಿ ಮೂರನೇ ಪುತ್ರಿಯಾಗಿದ್ದು, ಶಾಲೆಗೆ ಹೋಗದೆ ಮನೆಯಲ್ಲೇ ಇದ್ದಳು.

ನಗರದಲ್ಲಿ ಇಂದು

‘ಸಂಸ್ಕೃತಶ್ರೀಃ’ ಪ್ರಶಸ್ತಿ ಪ್ರದಾನ, ಗುರುವಂದನಾ ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಅತಿಥಿ: ಡಾ. ವಿಜಯಲಕ್ಷ್ಮಿ ದೇಶಮಾನೆ, ಅಧ್ಯಕ್ಷತೆ: ಎಸ್.ಕೆ. ಗೋಪಾಲಕೃಷ್ಣ ಆಯೋಜನೆ: ಸಮ್ಯಕ್ ಪ್ರತಿಷ್ಠಾನಮ್, ಸ್ಥಳ: ಶ್ರೀಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6

ಡಾ. ವಿಜಯಲಕ್ಷ್ಮಿ

ಗುರು ಪೂರ್ಣಿಮಾ ಮಹೋತ್ಸವ: ದತ್ತಗುರು ಸದಾನಂದ ಮಹಾರಾಜರ ಹೂವಿನ ತೇರಿನ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ದತ್ತಗುರು ಸದಾನಂದ ಮಹಾರಾಜರ ಆಧ್ಯಾತ್ಮಿಕ ಮತ್ತು ಧ್ಯಾನ ಕೇಂದ್ರ, ಚಕ್ರವರ್ತಿ ಬಡಾವಣೆ, ಬೆಳಿಗ್ಗೆ 7ರಿಂದ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಶೋಧನೆ ಮತ್ತು ನಾವೀನ್ಯತೆ ಪ್ರತಿಷ್ಠಾನ ಹಾಗೂ ಪರೀಕ್ಷಾ ಪರಿಣಿತಿ ಕೇಂದ್ರಗಳ ಉದ್ಘಾಟನೆ: ಜ್ಯೋತಿರಾದಿತ್ಯ ಸಿಂಧಿಯಾ, ಅತಿಥಿಗಳು: ಡಾ.ಶರಣ ಪ್ರಕಾಶ ಪಾಟೀಲ, ಟಿ.ಜಿ.ಸೀತಾರಾಂ ಉಪಸ್ಥಿತಿ: ಎಸ್.ವಿದ್ಯಾಶಂಕರ್, ಸ್ಥಳ: ವಿಟಿಯು- ವಿಆರ್‌ಐಎಫ್- ಟಿಸಿಒಇ ಕೇಂದ್ರ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ, ನಾಗರಬಾವಿ, ಬೆಳಿಗ್ಗೆ 9.30

ಗ್ರಾಮೀಣ ಡಾಕ್ ಸೇವಕ್ (ಜಿಡಿಎಸ್) ಸಿಬ್ಬಂದಿಯೊಂದಿಗೆ ಸಂವಾದ, ಸಮ್ಮೇಳನ: ಜ್ಯೋತಿರಾದಿತ್ಯ ಸಿಂಧಿಯಾ, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಮಂಡಲ ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ: ಸಂಜಯ್ ಚಪೋಲ್ಕರ್, ಆಶಾ, ಮಾಧುರಿ ವಸಿಷ್ಠ, ಆಯೋಜನೆ: ಮಂಡಲ ಆರ್ಟಿಸ್ಟ್ಸ್ ಕಲೆಕ್ಟಿವ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11

ಮಹಾಮೇರು ಪಂಚಗಣಪತಿ ದೇವರ 16ನೇ ವಾರ್ಷಿಕೋತ್ಸವ, ಗುರು ಪೌರ್ಣಿಮೆ ಜಾತ್ರಾ ಮಹೋತ್ಸವ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಗುರು ಜ್ಞಾನ ಕೇಂದ್ರ ಟ್ರಸ್ಟ್, ಮೈಸೂರು ರಸ್ತೆ, ಕೆಂಗೇರಿ, ಬೆಳಿಗ್ಗೆ 11

ವಸುಂಧರಾ ಭೂಪತಿ ಅವರ ‘ಮಹಾತ್ಮ ಗಾಂಧಿ ಮತ್ತು ಪ್ರಕೃತಿ ಚಿಕಿತ್ಸೆ’, ‘ಹಣ್ಣುಗಳು ಮತ್ತು ಆರೋಗ್ಯ’, ಜಿ. ಶರಣಪ್ಪ ಅವರ ‘ಚಂದ್ರನ ಬೆಳಕಲ್ಲಿ’ ಪುಸ್ತಕಗಳ ಬಿಡುಗಡೆ: ದಿನೇಶ್ ಗುಂಡೂರಾವ್, ಅನ್ನಪೂರ್ಣ ತುಕಾರಾಮ್, ಅಧ್ಯಕ್ಷತೆ: ಕೆ.ಎಸ್. ರವೀಂದ್ರನಾಥ್, ಪುಸ್ತಕಗಳ ಕುರಿತು: ಎಂ.ಎಸ್. ಆಶಾದೇವಿ, ಅತಿಥಿ: ಇಂದಿರಾ ಕೃಷ್ಣಪ್ಪ, ಆಯೋಜನೆ: ಜನ ಪ್ರಕಾಶನ, ಸ್ಥಳ: ಡಾ.ಡಿ. ಚಿನ್ನಯ್ಯ ಸಭಾಂಗಣ, ಒಂದನೇ ಮಹಡಿ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮಾರೇನಹಳ್ಳಿ ರಸ್ತೆ, ಒಂಬತ್ತನೇಯ ಹಂತ, ಜಯನಗರ, ಸಂಜೆ 4

ಗುರುಪೂರ್ಣಿಮೆ ಅಂಗವಾಗಿ ಶಿವಕುಮಾರ ಸ್ವಾಮೀಜಿ, ರೇಣುಕಾಚಾರ್ಯ ಪ್ರತಿಮೆಗಳಿಗೆ ಮಾಲಾರ್ಪಣೆ: ಸಾನ್ನಿಧ್ಯ: ಚೆನ್ನಮಲ್ಲ ಸ್ವಾಮೀಜಿ, ಆಯೋಜನೆ: ಕರ್ನಾಟಕ ವಿಚಾರ ವೇದಿಕೆ, ಸ್ಥಳ: ರಾಜಾಜಿನಗರ, ಸಂಜೆ 4

ಶಿವಶರಣ ಹಡಪದ ಅಪ್ಪಣ್ಣ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

ದಾಸವಾಣಿ: ಗಾಯನ: ಮನಸ್ವಿ ಜಿ. ಕಶ್ಯಪ್, ವಾಣಿಶ್ರೀ ಮುರಳಿ, ಕೀ–ಬೋರ್ಡ್: ಜಯರಾಮಾಚಾರ್, ತಬಲಾ: ಸತ್ಯಪ್ರಮೋದ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

‘ರಂಗ ರಂಗೋಲಿ’ ರಾಜ್ಯಮಟ್ಟದ ಕನ್ನಡ ನಾಟಕೋತ್ಸವ: ‘ಮೈ ಮನಗಳ ಸುಳಿಯಲ್ಲಿ’ ನಾಟಕ ಪ್ರದರ್ಶನ: ನಿರ್ದಿಗಂತ ತಂಡ, ನಿರ್ದೇಶನ: ಅಮಿತ್ ಜೆ. ರೆಡ್ಡಿ, ಪ್ರಸ್ತುತಿ: ಪ್ರಕಾಶ್ ರಾಜ್, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿ ಕಾವಲ್, ಸಂಜೆ 6.30ರಿಂದ



ಪ್ರಕಾಶ್ ರಾಜ್

ಭಕ್ತಿ ಸಂಗೀತ ಸಂಭ್ರಮ: ಗಾಯನ: ಶಶಿಧರ್ ಕೋಟೆ ಮತ್ತು ತಂಡ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡು ಮಲ್ಲೇಶ್ವರ ದೇವಸ್ಥಾನದ ಬಯಲು ರಂಗಮಂದಿರ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ಅನರ್ಘ್ಯ ರಾವ್, ಕೀ–ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಎನ್. ಮೋಹನ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಮಹದಾಯಿ: ಕೇಂದ್ರಕ್ಕೆ ರಾಜ್ಯ ಸಡ್ಡು

ನವದೆಹಲಿ: ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದಿಂದ ವನ್ಯಜೀವಿ ಹಾಗೂ ಅರಣ್ಯ ಅನುಮೋದನೆ ಸಿಗುವ ಮುನ್ನವೇ ಮಹದಾಯಿ ಯೋಜನೆಯ ಕಾಮಗಾರಿ ಆರಂಭಿಸಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಈ ಮೂಲಕ ಕೇಂದ್ರ ಸರ್ಕಾರ ಹಾಗೂ ಗೋವಾ ಸರ್ಕಾರಕ್ಕೆ ಸಡ್ಡು ಹೊಡೆಯಲು ತೀರ್ಮಾನಿಸಿದೆ.

ಕೇಂದ್ರ ಅರಣ್ಯ ಹಾಗೂ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಬಿನ್ನವತ್ತಳೆ ಸಲ್ಲಿಸಿದ ಬಳಿಕ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಬಗ್ಗೆ ಸುಳಿವು ನೀಡಿದರು.

‘ಗೋವಾ ಸರ್ಕಾರವು ವ್ಯಾಪ್ತಿ ಮೀರಿ ನೋಟಿಸ್ ನೀಡಿದೆ. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದೇವೆ. ಈ ಪ್ರಕರಣದ ವಿಚಾರಣೆ ಇನ್ನೂ ಆರಂಭವಾಗಿಲ್ಲ. ಈ ಅರ್ಜಿ ಹಿಂಪಡೆದರೆ ಹೇಗೆ’ ಎಂದು ಪ್ರಶ್ನಿಸಿದರು. ಅರ್ಜಿ ಹಿಂಪಡೆಯಬಹುದು ಎಂದು ಕಾನೂನು ತಜ್ಞ ಮೋಹನ ಕಾತರಕಿ ಸಲಹೆ ನೀಡಿದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
ಅರಮನೆ ರಸ್ತೆ, ಬೆಂಗಳೂರು – 560 001. ಭಾರತ
ದೂರವಾಣಿ: +91–80–29555666 E-mail: mcublr@gmail.com
ಸಂಖ್ಯೆ: ಮಕ್ಲವಿ/ಅಭಿವೃದ್ಧಿ.ವಿ–009 & 010/2025–26/107 ದಿನಾಂಕ: 04.07.2025
ಅರ್ಜಿ ಆಹ್ವಾನ
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯಿಂದ ಪ್ರಾಯೋಜಿತವಾಗಿ ನಡೆಯುತ್ತಿರುವ "ಹಾವಾಡಿಗ" ಮತ್ತು "ಬೈಲು ಪತ್ತಾರ" ಸಮುದಾಯದ ಕುಲಶಾಸ್ತ್ರೀಯ ಅಧ್ಯಯನಕ್ಕೆ ಅನುವಾಗುವಂತೆ ವಿವಿಧ ತಾತ್ಕಾಲಿಕ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ.
ಅರ್ಜಿ ಸಲ್ಲಿಸಲು **ಜುಲೈ 18, 2025** ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿ ವಿಶ್ವವಿದ್ಯಾಲಯದ ವೆಬ್‌ಸೈಟ್ mcu.karnataka.gov.in ನಲ್ಲಿ ಲಭ್ಯವಿರುತ್ತದೆ.
ಸಹಿ/–
ಕುಲಸಚಿವರು
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
ವಾಸಾಸಂಇ/ವಾ.ಪ್ರ/1730/ಎಂಎಐ/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್ : 08156–295427 ಇಮೇಲ್: eemidcbpura@gmail.com
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 05/2025–26 ದಿನಾಂಕ: 09/07/2025
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಗೌರಿಬಿದನೂರು ಮತ್ತು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 **ಗಿರಿಜನ ಉಪ ಯೋಜನೆ ಅಡಿಯಲ್ಲಿ** ಅನುಮೋದನೆಯಾಗಿರುವ ಕಾಮಗಾರಿಗೆ ಕೆ.ಡಬ್ಲೂ 1 ಮತ್ತು 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವೀ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಕೆ.ಪಿ.ಪಿ ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 18/07/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ 19/07/2025 ರಂದು (ಸಾಧ್ಯವಾದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ವಿದ್ಯುತ್ ಪರಿವೀಕ್ಷಣಾಲಯ
ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ಹೆಚ್ಚುವರಿ ಉತ್ತರ, ನಂ: 723, “ಲಕ್ಷ್ಮೀನಾರಾಯಣ”, 2ನೇ ಮಹಡಿ, ಹೋಟೆಲ್ ಕದಂಬ ಎದುರು, ಮೋದಿ ಹಾಸ್ಪಿಟಲ್ ರಸ್ತೆ, 2ನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು–560086
ಫೋನ್: 080–23354509, 9663255699. ಇ–ಮೇಲ್: dceiban.blr@gmail.com
ಸಂ:ಉಮುವಿಪ/ಬೆಂ.ಹೆ.ಉ/ವ್ಯ/ಆಡಳಿತ/ಇ–ಟೆಂಡರ್/ವಾಹನ/2025–26/1648 ದಿನಾಂಕ: 08.07.2025
ಇ–ಟೆಂಡರ್ ಪ್ರಕಟಣೆ
ಮೇಲ್ಕಂಡ ಕಚೇರಿಯ ಅಧಿಕೃತ ಕೆಲಸಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ **02 ಸಂಖ್ಯೆಯ ಎ.ಸಿ ಕಾರು ಹಾಗೂ 01 ಸಂಖ್ಯೆಯ ನಾನ್ ಎ.ಸಿ ಕಾರು, ಒಟ್ಟು–03 ಕಾರುಗಳನ್ನು** ಹಾಗೂ ಚಾಲಕರನ್ನು ಬಾಡಿಗೆಗೆ ಪೂರೈಸಲು (ಹಳದಿ ಬಣ್ಣದ ನಂಬರ್ ಬೋರ್ಡ್ ಹೊಂದಿದ) **ಇ.ಎಮ್.ಡಿ ಮೊತ್ತ: ರೂ.34,500/–**ಗಳೊಂದಿಗೆ ಕರ್ನಾಟಕ ಸಾರ್ವಜನಿಕ ಪೋರ್ಟಲ್ **https://kppp.karnataka.gov.in** ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ.
1) ಟೆಂಡರ್ ಷರತ್ತು ಸಂಬಂಧ ವಿವರ/ಸ್ಪಷ್ಟೀಕರಣ ಪಡೆಯಲು ಕೊನೆಯ **ದಿನಾಂಕ: 16.07.2025 ಮಧ್ಯಾಹ್ನ 01:00 ಗಂಟೆಗೆ.** 2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.07.2025 ಸಾಯಂಕಾಲ 05:00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 21.07.2025 ಬೆಳಿಗ್ಗೆ 11:00 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22.07.2025 ಬೆಳಿಗ್ಗೆ 11:00 ಗಂಟೆಗೆ.**
ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಾರ್ಯಾಲಯದಲ್ಲಿ ಕೆಲಸದ ದಿನಗಳಂದು ಪಡೆಯಬಹುದು.
ಸಹಿ/–
ಟೆಂಡರ್ ಕರೆಯುವ ಪ್ರಾಧಿಕಾರ ಹಾಗೂ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/1715/2025–26

ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ
ಭಾರತ ಸರ್ಕಾರ
WDRA
ಎನ್‌ಸಿಯುಐ ಬಿಲ್ಡಿಂಗ್, 4ನೇ ಮಹಡಿ, 3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ಹೌಜ್ ಖಾಸ್, ನವದೆಹಲಿ–110016, ದೂರವಾಣಿ ಸಂ.: 49536496, 49092978
ಫೈಲ್ ನಂ. ಐಟಿ–ಸಿಆರ್/1/2024–ಐಟಿ/1229
ದಿನಾಂಕ:23.06.2025
ವಿಷಯ: ಡೆಪ್ಯುಟೇಶನ್ ಆಧಾರದ ಮೇರೆಗೆ 01 ಜೂನಿಯರ್ ಕನ್ಸಲ್ಟಂಟ್ (ಮಾಹಿತಿ ತಂತ್ರಜ್ಞಾನ) ಹುದ್ದೆಗೆ ತೊಡಗಿಸಿಕೊಳ್ಳುವುದು.
www.wdra.gov.in
CBC 08109/12/0005/2526
ಸಹಾಯಕ ನಿರ್ದೇಶಕರು (ಎಚ್‌ಆರ್&ಸಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಂ. ಕಾಇ(ಕೃ/ಕೃ)/ಪಶ್ಚಿಮ/ಟೆಂಡರ್/10/25-26 ದಿನಾಂಕ : 09-07-2025
ಅಲ್ಪಾವಧಿ ಟೆಂಡರ್ ಪ್ರಕಟಣೆ – ಕರೆ–2
https://kppp.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು, ಕೃ/ಕೃ ವಿಭಾಗ – ಪಶ್ಚಿಮ ವಲಯ

MYSORE SILK SAREES
BIG SALE
Varamahalakshmi Sale - Upto 50% off
Venue: Infantry Road, 84/85 Safina Plaza Unit 02,03 & 04 Tasker Town, Shivajinagar, Bengaluru-560 001
Dates: 11,12,13 July (Friday - Sunday)
Timing: 10am-9pm
Sri Chamundi Silks by Namita Kathare
Ph: +91 9663398130
Instagram ID: @mysoresilksareesss

SEBI
ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ
ಪ್ರಕಟಣೆ
ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ರವರಿಂದ ನೇಮಕಗೊಂಡಿರುವ, ತೀರ್ಪು ನೀಡುವ ಪ್ರಾಧಿಕಾರದ ಅಧಿಕಾರಿ ಶ್ರೀ. ಜೈ ಸೆಬಾಸ್ಟಿಯನ್ ರವರು ಕೆಳಕಂಡ ಸಂಸ್ಥೆಗೆ/ನೋಟಿಸ್‌ದಾರರಿಗೆ ಶೋಕಾಸ್ ನೋಟಿಸ್ (ಎಸ್‌ಸಿಎನ್) ಹೊರಡಿಸಿದ್ದರು, ಆದರೆ ಸದರಿ ನೋಟಿಸ್‌ಗಳು ಅವರ ಹಿಂದಿನ ಬಲ್ಲ ವಿಳಾಸಕ್ಕೆ ಬಟವಾಡೆ ಆಗಿರುವುದಿಲ್ಲ. ಆದ್ದರಿಂದ, ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ವಿಚಾರಣೆ ಕೈಗೊಳ್ಳುವುದಕ್ಕೆ, ಸದರಿ ತೀರ್ಪು ಪ್ರಾಧಿಕಾರದ ಅಧಿಕಾರಿಯು ಸೆಬಿ ಸಂಸ್ಥೆಯ (www.sebi.gov.in ಅಡಿಯಲ್ಲಿನ ಶೀರ್ಷಿಕೆ Enforcement->Unserved Summons / Notices) ವೆಬ್‌ಸೈಟ್‌ನಲ್ಲಿ ನೋಟಿಸ್‌ದಾರರ ಮಾಹಿತಿಗಾಗಿ ಕೆಳಕಂಡ ಎಸ್‌ಸಿಎನ್ ಪ್ರಕಟಿಸಿರುತ್ತಾರೆ. ಸದರಿ ನೋಟಿಸ್‌ದಾರರು ತಮ್ಮ ಯಾವುದೇ ಪ್ರತಿಕ್ರಿಯೆ ನೀಡುವುದಾದಲ್ಲಿ, ಅದು ಎಸ್‌ಸಿಎನ್ ನಿಬಂಧನೆಗಳ ಪ್ರಕಾರ ಈ ಪ್ರಕಣೆಯು ಪ್ರಕಟಗೊಂಡ ದಿನಾಂಕದಿಂದ 14 ದಿನಗಳೊಳಗೆ ashas@sebi.gov.in, deeptis@sebi.gov.in ಮತ್ತು vijayc@sebi.gov.in ಇಮೇಲ್ ಮುಖಾಂತರ ತೀರ್ಪು ಪ್ರಾಧಿಕಾರದ ಅಧಿಕಾರಿಗೆ ತಲುಪುವಂತೆ ರವಾನಿಸತಕ್ಕದ್ದು. ಈ ವಿಷಯದಲ್ಲಿ ವಿಚಾರಣೆಯನ್ನು ಕೈಗೊಳ್ಳುವ ನಿಟ್ಟಿನಲ್ಲಿ, ತೀರ್ಪು ಪ್ರಾಧಿಕಾರದ ಅಧಿಕಾರಿಯು ಕೆಳಗಿನ ‘ಕೋಷ್ಟಕ ಎ’ ದಲ್ಲಿ ನೀಡಲಾಗಿರುವ ದಿನಾಂಕ ಮತ್ತು ಸಮಯದಲ್ಲಿ ದೂರವಾಣಿ / ವಿಡಿಯೋ ಕಾನ್ಫರೆನ್ಸ್ ಮುಖಾಂತರ ಅಥವಾ ಖುದ್ದಾಗಿ **ಸೆಬಿ ಭವನ 2, ಸಿ7, ಜಿ ಬ್ಲಾಕ್, ಬಾಂದ್ರ ಕುರ್ಲಾ ಕಾಂಪ್ಲೆಕ್ಸ್, ಮುಂಬೈ–400051** ವಿಳಾಸದಲ್ಲಿ ವಿಚಾರಣೆ ಕೈಗೊಳ್ಳುವ ಒಂದು ಅವಕಾಶವನ್ನು ಒದಗಿಸಿರುತ್ತಾರೆ.
ಶೋಕಾಸ್ ನೋಟಿಸ್‌ಗಳು (ಎಸ್‌ಸಿಎನ್‌ಎಸ್)
ಕೋಷ್ಟಕ ಎ

ಎಸ್‌ಸಿಎನ್ ಔಟ್‌ವಾರ್ಡ್ ನಂ. (ಎ)	ನೋಟಿಸ್‌ದಾರರ ಹೆಸರು ಮತ್ತು ವಿಳಾಸ (ಬಿ)	ವಿಚಾರಣೆ ದಿನಾಂಕ (ಸಿ)	ವಿಚಾರಣೆ ಸಮಯ (ಡಿ)
ಇಎಡಿ–8/ಎಎಸ್/ಎಕೆ/40956/1/2022	ರಾಕೇಶ್ ಕುಮಾರ್ ಖೇತಾನ್ (ಎಚ್‌ಯುಎಫ್) 184549 19ನೇ ಅಡ್ಡರಸ್ತೆ 20ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು, ಕರ್ನಾಟಕ–560040	ಜುಲೈ 23, 2025	ಬೆಳಿಗ್ಗೆ 11.15 ಗಂಟೆ

ಸದರಿ ನೋಟಿಸ್‌ದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಕೋಷ್ಟಕದಲ್ಲಿನ ಕಾಲಂ (ಸಿ) ಯಲ್ಲಿ ತಿಳಿಸಲಾಗಿರುವ ವಿಚಾರಣೆಗೆ ನಿಗದಿಯಾಗಿರುವ ದಿನಾಂಕಕ್ಕೆ ಕನಿಷ್ಠ ಮೂರು ದಿನ ಮುಂಚಿತವಾಗಿ jais@sebi.gov.in ಮತ್ತು yashk@sebi.gov.in ಇಮೇಲ್ ವಿಳಾಸಕ್ಕೆ ವಿಚಾರಣೆಗೆ ಯಾರು ಹಾಜರಾಗುತ್ತಿದ್ದಾರೆ ಎಂಬ ಮಾಹಿತಿಯನ್ನು ತಿಳಿಸತಕ್ಕದ್ದು. ಟೆಲೆ/ವಿಡಿಯೋ ಕಾನ್ಫರೆನ್ಸ್ ಮುಖಾಂತರ ವಿಚಾರಣೆಯ ವೆಬ್–ಲಿಂಕ್ ಮಾಹಿತಿಯನ್ನು, ಮೇಲ್ಕಂಡ ಇಮೇಲ್ ವಿಳಾಸಗಳಲ್ಲಿ ನೀವು ನೀಡಿರುವ ಇಮೇಲ್ ಐಡಿ / ಮೊಬೈಲ್ ಸಂಖ್ಯೆಗಳಿಗೆ ನೀಡಲಾಗುತ್ತದೆ. ಮೇಲ್ಕಂಡ ಕೋಷ್ಟಕದ ಕಾಲಂ (ಸಿ) ಮತ್ತು (ಡಿ) ಗಳಲ್ಲಿ ನೀಡಲಾಗಿರುವ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ನೋಟಿಸ್‌ದಾರರು ತಮ್ಮ ಖಚಿತತೆಯನ್ನು ತಿಳಿಸಲು ವಿಫಲರಾದಲ್ಲಿ, ನೋಟಿಸ್‌ದಾರನು ವೈಯಕ್ತಿಕ ವಿಚಾರಣೆಯ ಅವಕಾಶ ಪಡೆದುಕೊಳ್ಳುವುದನ್ನು ನಿರಾಕರಿಸಿದ್ದಾನೆ ಎಂದು ಪರಿಗಣಿಸಲಾಗುತ್ತದೆ. ಒಂದು ವೇಳೆ, ನೋಟಿಸ್‌ದಾರ ಅಥವಾ ನೋಟಿಸ್‌ದಾರರ ಅಧಿಕೃತ ಪ್ರತಿನಿಧಿಯು ಸದರಿ ದಿನಾಂಕ ಮತ್ತು ಸಮಯದಂದು ವಿಚಾರಣೆಗೆ ಹಾಜರಾಗದಿದ್ದಲ್ಲಿ, ತೀರ್ಪು ನೀಡುವ ಪ್ರಾಧಿಕಾರದ ಅಧಿಕಾರಿಯು ಸದರಿ ವಿಷಯದಲ್ಲಿ ದಾಖಲೆಗಳಲ್ಲಿ ಲಭ್ಯವಿರುವ ಅಂಶಗಳ ಆಧಾರದ ಮೇರೆಗೆ ಮುಂದುವರಿಯುತ್ತಾರೆ.
ದಿನಾಂಕ: 26.06.2025
ಸ್ಥಳ: ಮುಂಬೈ
ಜೈ ಸೆಬಾಸ್ಟಿಯನ್
ಚೀಫ್ ಜನರಲ್ ಮ್ಯಾನೇಜರ್
CBC 15204/11/0110/2526

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.:
SBC-GSU-ENGG-2025-ABSS-02
www.ireps.gov.in
PUB/277/AAMO/PRB/SWR/2025-26

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560030
ಎನ್‌ಐಎಎನ್‌ಪಿ/ವಿಡಿಎ–08–ಸಿಡಿಐಎನ್/2024–25
www.nianp.res.in
ಸಹಿ/– ಪ್ರಭಾರಿ ಆಡಳಿತಾಧಿಕಾರಿ

ಬ್ಯಾಂಕ್ ಆಫ್ ಇಂಡಿಯಾ Bank of India BOI
ಚಿನ್ನದ ಮೌಲ್ಯಮಾಪಕ ಎಂಪ್ಯಾನಲ್‌ಮೆಂಟ್‌ಗಾಗಿ ಅರ್ಜಿಗಳ ಆಹ್ವಾನ
Ref. No: BZO/AFD/CK/2025-25/PP/01 Date: 09.07.2025
Bengaluru.AFD@bankofindia.co.in
ದಿನಾಂಕ : 09.07.2025
ಸ್ಥಳ : ಬೆಂಗಳೂರು

ಗುರುವಾರ, ಜುಲೈ 10, 2025 | ₹ 7.00

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಭಾರತ್ ಬಂದ್’
ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧ ನೀತಿ ವಿರೋಧಿಸಿ ವಿವಿಧ ಕಾರ್ಮಿಕ ಒಕ್ಕೂಟಗಳು ಬುಧವಾರ ಕರೆ ನೀಡಿದ್ದ ‘ಭಾರತ್ ಬಂದ್’ ಅಂಗವಾಗಿ ಬೆಂಗಳೂರಿನಲ್ಲಿ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು



ಸಿನಿಮಾ ಟ್ರೇಲರ್: ಕೋರ್ಟ್ ಮೊರೆ
‘ಮುಸ್ಲಿಮರನ್ನು ಅವಮಾನಕರ ರೀತಿಯಲ್ಲಿ ಚಿತ್ರಿಸಿರುವ ‘ಉದಯಪುರ ಫೈಲ್ಸ್’ ಸಿನಿಮಾವನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಸಿಬಿಎಫ್‌ಸಿಗೆ ನಿರ್ದೇಶನ ನೀಡಿ’ ಎಂದು ಜಮೀಯತ್ ಉಲೆಮಾ ಎ ಹಿಂದ್ ಸಂಘಟನೆ ಮದ್ರಾಸ್ ಹೈಕೋರ್ಟ್ ಕೋರಿದೆ

3 ಹೊಸ ಪೊಲೀಸ್ ವಿಭಾಗ ಸೃಜನೆ 2B

‘ನುಡಿಜಾತ್ರೆ: ಮೂರು ಪಟ್ಟು ಬಿಲ್’ 6

ಜಿಬಿಎ ರಚನೆಗೆ ಖಾಸಗಿ ಸಲಹೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಪರಿವರ್ತನೆಯಾಗಲು ಸಿದ್ಧತೆ

52 ವಾರ	**4** ವಾರ	**10** ವಾರ	**16** ವಾರ	**22** ವಾರ
ಖಾಸಗಿ ಸಂಸ್ಥೆ ಯೋಜನಾತ್ಮಕ ಸಲಹೆ ನೀಡಿ, ಅನುಷ್ಠಾನ ಮಾಡುವ ಒಟ್ಟಾರೆ ಅವಧಿ	ಆರಂಭಿಕ ವರದಿ ಸಲ್ಲಿಸಲು ಗಡುವು	ಜಿಬಿಎಗೆ ಪರಿವರ್ತನೆಯಾಗಲು ಕರಡು ವರದಿ ಸಲ್ಲಿಕೆ	ಬಿ–ಸ್ಮೈಲ್ ಕಾರ್ಯಾಚರಣೆ ಕರಡು ವರದಿ	ಜಿಬಿಎ, ಬಿ–ಸ್ಮೈಲ್‌ಗೆ ಪ್ರಥಮ ಯೋಜನಾತ್ಮಕ ವರದಿ ಸಲ್ಲಿಕೆ

• ಆರ್.ಮಂಜುನಾಥ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ (ಜಿಬಿಎ) ಪರಿವರ್ತನೆಯಾಗಲು ಖಾಸಗಿ ಸಂಸ್ಥೆಯಿಂದ ಸಲಹೆ ಮತ್ತು ಯೋಜನಾತ್ಮಕ ಬೆಂಬಲ ಪಡೆಯಲು ನಿರ್ಧರಿಸಿದೆ.

‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024’ ಮೇ 15ರಿಂದ ಜಾರಿಯಾಗಿದ್ದು, ಬಿಬಿಎಂಪಿ ಪ್ರದೇಶವನ್ನು ‘ಗ್ರೇಟರ್ ಬೆಂಗಳೂರು ಪ್ರದೇಶ’ ಎಂದು ಘೋಷಿಸಲಾಗಿದೆ. ಆದರೂ ಬಿಬಿಎಂಪಿ ಕಾಯ್ದೆ–2020ರ ಪ್ರಕಾರ ಬಿಬಿಎಂಪಿ ಕಾರ್ಯನಿರ್ವಹಿಸುತ್ತಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಅದರ ಮೂಲಕವೇ ಆಡಳಿತ ನಡೆಸಲು ಇದೀಗ ಸಿದ್ಧತೆ ಆರಂಭವಾಗಿದೆ.

ಜಿಬಿಎ ಆಡಳಿತವನ್ನು ಅನುಷ್ಠಾನಗೊಳಿಸಲು ಪ್ರತಿಷ್ಠಿತ ಸಲಹಾ ಸಂಸ್ಥೆಗಳ ಮೂಲಕ ‘ಯೋಜನಾತ್ಮಕ ಸಲಹೆಗಳನ್ನು’ ಪಡೆಯಲು ನಿರ್ಧರಿಸಲಾಗಿದೆ. ಹೀಗಾಗಿ, ಬಿಬಿಎಂಪಿ ಮುಖ್ಯ ಆಯುಕ್ತರು ಮೂಲಸೌಕರ್ಯ ವಿಭಾಗದ

ಮುಖ್ಯಾಂಶಗಳು

- ಸ್ವತ್ತುಗಳ ಮರುಹಂಚಿಕೆಗೆ 100 ದಿನದ ಕ್ರಿಯಾಯೋಜನೆ
- ಸಾಂಸ್ಥಿಕ ಚೌಕಟ್ಟು, ಹಣಕಾಸು ನಿರ್ವಹಣೆಗೆ ಕಾರ್ಯತಂತ್ರ
- ಮಾರುಕಟ್ಟೆ, ಬಿಡ್ಡಿಂಗ್ ಪ್ರಕ್ರಿಯೆ ನಿರ್ವಹಣೆಗೆ ಸಲಹೆ

ಕಾರ್ಯಕಾರಿ ಎಂಜಿನಿಯರ್ ಮೂಲಕ ಟೆಂಡರ್ ಆಹ್ವಾನಿಸಿದ್ದಾರೆ. ಜುಲೈ 17 ರಂದು ಬಿಡ್‌ಗಳನ್ನು ತೆರೆಯಲಾಗುತ್ತದೆ.

ಬೆಂಗಳೂರು ತ್ವರಿತವಾಗಿ ಬೆಳವಣಿಗೆ ಆಗುತ್ತಿದ್ದು, ಮೂಲಸೌಕರ್ಯ ಹಾಗೂ ಸೇವೆಗಳನ್ನು ಒದಗಿಸುವ ಬೇಡಿಕೆಗಳು ಹೆಚ್ಚಾಗುತ್ತಿವೆ. ಆದ್ದರಿಂದ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಮೂಲಕ ನಗರದ ವಿಸ್ತರಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಗುರಿ ಹೊಂದಿದ್ದು, ಬಿಬಿಎಂಪಿಯು ಜಿಬಿಎಯಾಗಿ ಪರಿವರ್ತನೆಯಾಗುತ್ತಿದೆ.

ಬಿ–ಸ್ಮೈಲ್ ಕಾರ್ಯಾಚರಣೆಗೆ ರೂಪುರೇಷೆ

ಜಿಬಿಎಗೆ ಮಾತ್ರವಲ್ಲದೆ ಬೃಹತ್ ಮೂಲ ಸೌಕರ್ಯಗಳನ್ನು ನಿರ್ವಹಿಸಲು ಸ್ಥಾಪನೆಯಾಗಿರುವ ಬಿ–ಸ್ಮೈಲ್ ಕಾರ್ಯಾಚರಣೆಗೂ ಸಾಂಸ್ಥಿಕ ರಚನೆಯ ಚೌಕಟ್ಟು ರಚಿಸಿ, ಅದನ್ನು ಖಾಸಗಿಯವರೇ ಅನುಷ್ಠಾನ ಮಾಡಲಿದ್ದಾರೆ. ಅಧಿಕಾರಗಳ ನಿಯೋಜನೆ, ನೇಮಕಾತಿ ನಿಯಮ, ಆಡಳಿತ ವಿಧಾನಗಳು, ಪ್ರಮಾಣಿತ ಕಾರ್ಯಾಚಾರಣಾ ವಿಧಾನಗಳು (ಎಸ್‌ಒಪಿ), ಆಂತರಿಕ ನಿಯಂತ್ರಣ ವ್ಯವಸ್ಥೆಗಳು, ಸಾಮರ್ಥ್ಯ ನಿರ್ಮಾಣಕ್ಕೆ ಮಾರ್ಗಸೂಚಿ, ರೂಪು–ರೇಷೆಗಳನ್ನು ರಚಿಸಲಿದ್ದಾರೆ.

ಖಾಸಗಿ ಡೆವಲಪರ್‌ಗಳ ಭಾಗವಹಿಸುವಿಕೆಗೆ ತಂತ್ರ, ಮಾರುಕಟ್ಟೆ, ಬಿಡ್ಡಿಂಗ್ ಪ್ರಕ್ರಿಯೆ ನಿರ್ವಹಣೆ, ತಾಂತ್ರಿಕ ಸಲಹೆಗಾರರೊಂದಿಗೆ ಸಮನ್ವಯ, ಹಣಕಾಸಿನ ಮೌಲ್ಯಮಾಪನ–ಕಾರ್ಯವಿಧಾನಗಳನ್ನೂ ಬಿ–ಸ್ಮೈಲ್‌ಗೆ ಖಾಸಗಿ ಸಂಸ್ಥೆ ನೀಡಲಿದೆ.

ಇದಕ್ಕಾಗಿ, ಸಾಂಸ್ಥಿಕ ಚೌಕಟ್ಟು, ಸದೃಢ ಆಡಳಿತ ಹಾಗೂ ನಗರ ಪಾಲಿಕೆಗಳು ಮತ್ತು ಇತರೆ ಇಲಾಖೆಗಳ ನಡುವೆ ಸಮನ್ವಯ– ಹೊಣೆಗಾರಿಕೆಯ ಕಾರ್ಯವಿಧಾನಗಳನ್ನು ರಚಿಸಿಕೊಡಬೇಕೆಂದು ಖಾಸಗಿ ಸಂಸ್ಥೆಗಳನ್ನು ಕೇಳಲಾಗಿದೆ.

‘ಬಿಬಿಎಂಪಿಯನ್ನು ಜಿಬಿಎಗೆ ಪರಿವರ್ತಿಸಲು ಮತ್ತು ಬಿ–ಸ್ಮೈಲ್ ಕಾರ್ಯಾಚರಣೆಯ ಕಾರ್ಯತಂತ್ರಕ್ಕೆ ಬೆಂಬಲ’ ಶೀರ್ಷಿಕೆಯಡಿ ಯೋಜನಾತ್ಮಕ ವರದಿಯನ್ನು ಖಾಸಗಿಯವರಿಂದ ಆಹ್ವಾನಿಸಲಾಗಿದೆ. ಜಿಬಿಎ ಆಡಳಿತ ರಚನೆಗಾಗಿ ಸಾಂಸ್ಥಿಕ ಚೌಕಟ್ಟು, ಹಣಕಾಸು ನಿರ್ವಹಣಾ ಕಾರ್ಯತಂತ್ರ ವಿನ್ಯಾಸ, ಸಂಸ್ಥೆಗಳ ಜವಾಬ್ದಾರಿಯಲ್ಲಿ ಸ್ಪಷ್ಟತೆ, ಸಂಪನ್ಮೂಲ ಹಂಚಿಕೆ ಮತ್ತು ಹೊಸ ನಗರ ಪಾಲಿಕೆಗಳು, ಬಿಡಿಎ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಹಾಗೂ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ (ಬಿ–ಸ್ಮೈಲ್) ನಡುವಿನ ಸಮನ್ವಯ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಬೇಕಿದೆ. ಅಂತರ ಸಂಸ್ಥೆಗಳ ಸಮನ್ವಯದ ಜೊತೆಗೆ ಸಮಾನ ಆದಾಯ, ವೆಚ್ಚ ಹಂಚಿಕೆ, ಹಣಕಾಸು ವಿನಿಯೋಗ, ಆಡಳಿತಾತ್ಮಕ ಚೌಕಟ್ಟುಗಳನ್ನು ನಿರ್ಧರಿಸುವ ಕಾರ್ಯತಂತ್ರಗಳನ್ನೂ ರೂಪಿಸಬೇಕಾಗಿದೆ.

ಬಿಬಿಎಂಪಿಯಿಂದ ಜಿಬಿಎಗೆ ಆಡಳಿತ ಪರಿವರ್ತನೆಯಾಗುವ ಪ್ರಕ್ರಿಯೆ ಸುಗಮವಾಗಿರಲು ಸಮಗ್ರ ಕಾರ್ಯವಿಧಾನ ನೀಡಲು ಕೇಳಲಾಗಿದೆ. ನಗರ ಪಾಲಿಕೆಗಳ ನಡುವೆ ಸ್ವತ್ತುಗಳ ಮರುಹಂಚಿಕೆಗೆ 100 ದಿನಗಳ ಕ್ರಿಯಾಯೋಜನೆ ರೂಪಿಸಬೇಕಾಗಿದೆ. ಆಡಳಿತ ರಚನೆ ಮತ್ತು ಕಾರ್ಯಾಚರಣೆಯಲ್ಲಿ ಯಾವುದೇ ಅಡೆತಡೆಗಳಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಕಾರ್ಯತಂತ್ರಗಳನ್ನು ಒದಗಿಸಬೇಕಾಗಿದೆ.

‘ಗ್ರೇಟರ್ ಬೆಂಗಳೂರಿಗೆ’ ದೃಢವಾದ, ಜವಾಬ್ದಾರಿಯುತವಾದ ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ಆಡಳಿತ ಮತ್ತು ಯೋಜನೆಯನ್ನು ವಿತರಿಸುವ ವ್ಯವಸ್ಥೆಯನ್ನು ಒದಗಿಸಲು ಖಾಸಗಿ ಸಂಸ್ಥೆಯ ಸಲಹೆಯನ್ನು ತೆಗೆದುಕೊಳ್ಳಲಾಗುತ್ತದೆ. ಯೋಜನಾತ್ಮಕ ಸಲಹೆಗಳನ್ನು ಪಡೆಯಲು ಖಾಸಗಿ ಸಂಸ್ಥೆಯೊಂದಿಗೆ ಬಿಬಿಎಂಪಿ ಒಪ್ಪಂದ ಮಾಡಿಕೊಳ್ಳಲಿದೆ. ಬಿ–ಸ್ಮೈಲ್‌ನ ಮೊದಲ ಮಂಡಳಿ ಸಭೆಯಲ್ಲಿ ನಿರ್ದೇಶಕರ ಸಮ್ಮತಿ ಪಡೆದು ಒಪ್ಪಂದವನ್ನು ಬಿ–ಸ್ಮೈಲ್‌ಗೆ ವರ್ಗಾಯಿಸಲಾಗುತ್ತದೆ ಎಂದು ಹೇಳಲಾಗಿದೆ.

ಸಿಮೆಂಟ್ ಮಯೂರ

ಪ್ರಜಾವಾಣಿ ಚಿತ್ರ: ರಂಜು ಪಿ



ನಗರದ ಹೊರವರ್ತುಲ ರಸ್ತೆಯ ನೈಸ್ ರಸ್ತೆ ಬಳಿ ಒಣಗಿದ ಮರದ ರೆಂಬೆಗಳ ನಡುವೆ ಕ್ಯಾಮೆರಾ ಕಣ್ಣಿಗೆ ಗೋಚರಿಸಿದ ಬೀದಿ ದೀಪದ ಕಂಬಕ್ಕೆ ಅಳವಡಿಸಿರುವ ಸಿಮೆಂಟ್ ನವಿಲಿನ ಪ್ರತಿಕೃತಿ

‘ಕಣಿ’ ಹೇಳಿ ಜೈಲು ಪಾಲಾದ...

ಅಬಕಾರಿ ಅಧಿಕಾರಿಗೆ 3 ವರ್ಷ ಸೆರೆವಾಸ, ₹30 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಹುದ್ದೆಯಲ್ಲಿದ್ದುಕೊಂಡು ಬಿಡುವಿನ ಸಮಯದಲ್ಲಿ ‘ಕಣಿ’ ಹೇಳಿ, ಎಷ್ಟು ದುಡಿಯಬಹುದು? ‘ನಾನು ಕಣಿ ಹೇಳಿ ₹5 ಲಕ್ಷ ದುಡಿದಿದ್ದೇನೆ ಅಷ್ಟೇ’ ಎಂದು ನ್ಯಾಯಾಲಯಕ್ಕೆ ಪದೇ–ಪದೇ ಪ್ರಮಾಣಪತ್ರ ಸಲ್ಲಿಸಿದ್ದ ಅಬಕಾರಿ ಇನ್‌ಸ್ಪೆಕ್ಟರ್ ಒಬ್ಬರು ಈಗ ಜೈಲು ಪಾಲಾಗಿದ್ದಾರೆ.

ಬೆಂಗಳೂರು ದಕ್ಷಿಣ ವಲಯದ ಅಬಕಾರಿ ಇನ್‌ಸ್ಪೆಕ್ಟರ್ ಆಗಿದ್ದ ಕೆ.ಕೃಷ್ಣಮೂರ್ತಿ ಎಂಬುವವರಿಗೆ 2013ರ ಆಗಸ್ಟ್‌ನ ಒಂದು ಮುಂಜಾನೆ ಎಂದಿನಂತೆ ಇರಲಿಲ್ಲ. ಬೆಳಗ್ಗೆ ಬೆಳಕು ಹರಿಯುವ ಮುನ್ನವೇ ಲೋಕಾಯುಕ್ತ ಪೊಲೀಸರು ಅವರ ಮನೆಯ ಬಾಗಿಲು ಬಡಿದಿದ್ದರು. ಮನೆಯನ್ನು ಜಾಲಾಡಿ ಅಲ್ಲಿ ದೊರೆತ ನಗದು, ಆಸ್ತಿ ಪತ್ರಗಳು, ಬ್ಯಾಂಕ್ ಠೇವಣಿ ಪತ್ರಗಳು ಮತ್ತು ಚಿನ್ನ–ಬೆಳ್ಳಿಯ ಆಭರಣಗಳನ್ನು ವಶಕ್ಕೆ ಪಡೆದುಕೊಂಡು ಹೋಗಿದ್ದರು.

ಶೋಧದ ವೇಳೆ ಕೃಷ್ಣಮೂರ್ತಿ ಅವರ ಮನೆಯಲ್ಲಿ ಕೆಲವು ತಾಳೆಗರಿಗಳು, ಗಿಡ ಮೂಲಿಕೆಗಳೂ ದೊರೆತಿದ್ದವು. ಲೋಕಾಯುಕ್ತ ಪೊಲೀಸರು ಅವನ್ನೂ ಮಹಜರು ಮಾಡಿದ್ದರು. ಆಸ್ತಿ, ಬ್ಯಾಂಕ್ ಠೇವಣಿ, ನಗದು, ಚಿನ್ನ–ಬೆಳ್ಳಿಯ ಆಭರಣಗಳ ಮೌಲ್ಯವನ್ನು ತನಿಖಾಧಿಕಾರಿಗಳು ಲೆಕ್ಕಾಚಾರ ಮಾಡಿದಾಗ, ಕೃಷ್ಣಮೂರ್ತಿ ಅವರ ಒಟ್ಟು ಆಸ್ತಿ ₹72.54 ಲಕ್ಷ ಎಂಬುದು ಗೊತ್ತಾಯಿತು.

1990 ರಿಂದ 2013ರ ನಡುವೆ ಎಲ್ಲ ಘೋಷಿತ ಮೂಲಗಳಿಂದ ಕೃಷ್ಣಮೂರ್ತಿ ಅವರು ಸಂಪಾದಿಸಿದ್ದದ್ದು ₹42.55 ಲಕ್ಷ ಮಾತ್ರ. ಅದಕ್ಕಿಂತ ಹೆಚ್ಚುವರಿ ₹29.98 ಲಕ್ಷ ಆಸ್ತಿಯನ್ನು ಅವರು ಹೊಂದಿದ್ದರು. ಲೋಕಾಯುಕ್ತ ಪೊಲೀಸರು ಅವರ ವಿರುದ್ಧ, ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಪ್ರಕರಣ ದಾಖಲಿಸಿದರು. ಲೋಕಾಯುಕ್ತ ನ್ಯಾಯಾಲಯವು ವಿಚಾರಣೆ ಕೈಗೆತ್ತಿಕೊಂಡಿತ್ತು.

2B

‘ಬಾಣಂತನ ನೀವು ಮಾಡಿದ್ದಿರಾ?’

ತಮ್ಮ ಮತ್ತು ಕುಟುಂಬದ ವೆಚ್ಚಗಳ ಬಗ್ಗೆ ಮಾಹಿತಿ ನೀಡಿದ್ದ ಕೃಷ್ಣಮೂರ್ತಿ ಅವರು ಮೊದಲ ಮಗನ ಬಾಣಂತನಕ್ಕೆ ₹1.50 ಲಕ್ಷ ವೆಚ್ಚ ಮಾಡಿದ್ದೆ ಎಂದಿದ್ದರು. ಲೋಕಾಯುಕ್ತ ನ್ಯಾಯಾಧೀಶರು ಈ ವಿವರಣೆಯನ್ನೂ ತಿರಸ್ಕರಿಸಿದ್ದಾರೆ.

‘ನಿಮ್ಮ ಸಂಪ್ರದಾಯದಂತೆ ಮೊದಲ ಮಗುವಿನ ಬಾಣಂತನಕ್ಕೆ, ನಿಮ್ಮ ಪತ್ನಿ ಆಕೆಯ ತವರು ಮನೆಗೆ ಹೋಗಿರಬೇಕಲ್ಲವೇ. ಹೆರಿಗೆ ಮತ್ತು ಬಾಣಂತನದ ಪೂರ್ಣ ವೆಚ್ಚವನ್ನು ತವರು ಮನೆಯವರೇ ಭರಿಸಿರುತ್ತಾರೆ ಅಲ್ಲವೇ? ನೀವು ₹1.50 ಲಕ್ಷ ವೆಚ್ಚ ಮಾಡಿದ್ದು ಎಲ್ಲಿ? ಇಂತಹ ಆಧಾರವಿಲ್ಲದ ಲೆಕ್ಕವನ್ನೆಲ್ಲಾ ಏಕೆ ನೀಡಿದ್ದೀರಿ’ ಎಂದು ನ್ಯಾಯಾಧೀಶರು ಪ್ರಶ್ನಿಸಿದ್ದರು.

‘ಬೇಸ್’ಗೆ ಪ್ರೊ.ವಿಶ್ವನಾಥ ಕುಲಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಅಧ್ಯಾಪಕ ಪ್ರೊ.ವಿಶ್ವನಾಥ ಅವರು ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (ಬೇಸ್) ಕುಲಪತಿಯಾಗಿ ನೇಮಕವಾಗಿದ್ದಾರೆ.

ಒಂದು ವರ್ಷದ ನಂತರ ನೂತನ ಕುಲಪತಿ ನೇಮಕವಾಗಿದೆ. ಕುಲಪತಿ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ನೇಮಿಸಲಾಗಿದ್ದ ಶೋಧನಾ ಸಮಿತಿ ರಾಷ್ಟ್ರ ಮಟ್ಟದಲ್ಲಿ ಅರ್ಜಿಗಳನ್ನು ಆಹ್ವಾನಿಸಿತ್ತು.

ಪ್ರೊ. ವಿಶ್ವನಾಥ್

ಇದರಿಂದ ಪ್ರಕ್ರಿಯೆ ವಿಳಂಬವಾಗಿತ್ತು.

ಕುಲಪತಿಯಾಗಿದ್ದ ಎನ್.ಆರ್. ಭಾನುಮೂರ್ತಿ ಅವರ ಅವಧಿ 2024 ರ ಜೂನ್ 21ಕ್ಕೆ ಮುಕ್ತಾಯವಾಗಿತ್ತು. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ನಿರ್ದೇಶಕ ಡಿ. ರಾಜಶೇಖರ್ ಅವರನ್ನು ಪ್ರಭಾರ ಕುಲಪತಿಯಾಗಿ ನೇಮಿಸಲಾಗಿತ್ತು. ಅವರೂ ಕಳೆದ ಮೇ 31ರಂದು ನಿವೃತ್ತರಾಗಿದ್ದರು.

ಭಯೋತ್ಪಾದಕರಿಗೆ ಪಾಕಿಸ್ತಾನದಿಂದಲೇ ನೆರವು

• ಗ್ಯಾನೇಂದ್ರ ಕೇಶ್ರಿ

ನವದೆಹಲಿ: ಲಷ್ಕರ್ ಎ ತಯಬಾ ಮತ್ತು ಜೈಷ್ –ಇ– ಮೊಹಮ್ಮದ್ ಸೇರಿ ಭಾರತದಲ್ಲಿ ಭಯೋತ್ಪಾದನಾ ಚಟುವಟಿಕೆ ನಡೆಸುತ್ತಿರುವ ಉಗ್ರ ಸಂಘಟನೆಗಳಿಗೆ ಪಾಕಿಸ್ತಾನದ ನೆಲದಿಂದಲೇ ಹಣಕಾಸಿನ ನೆರವು ದೊರೆಯುತ್ತಿದೆ ಎಂಬ ಭಾರತದ ಆರೋಪವನ್ನು ಪುಷ್ಟೀಕರಿಸುವಂತಹ ವರದಿಯನ್ನು ಹಣದ ಅಕ್ರಮ ವರ್ಗಾವಣೆ ಮತ್ತು ಉಗ್ರರಿಗೆ ಹಣಕಾಸು ನೆರವಿಗೆ ಸಂಬಂಧಿಸಿದ ಜಾಗತಿಕ ಮಟ್ಟದ ವಿಚಕ್ಷಣಾ ಸಂಸ್ಥೆ ‘ಫೈನಾನ್ಷಿಯಲ್ ಆ್ಯಕ್ಷನ್ ಟಾಸ್ಕ್‌ಫೋರ್ಸ್’ (ಎಫ್‌ಎಟಿಎಫ್) ನೀಡಿದೆ.

‘ಭಯೋತ್ಪಾದಕರಿಗೆ ದೊರಕುತ್ತಿರುವ ಆರ್ಥಿಕ ನೆರವಿಗೆ ಸಂಬಂಧಿಸಿದ ಸಮಗ್ರ ಮಾಹಿತಿ’ ಎಂಬ ವರದಿಯಲ್ಲಿ, ‘ಎಲ್‌ಇಟಿ ಮತ್ತು ಜೆಇಎಂ ಸರ್ಕಾರಿ ಪ್ರಾಯೋಜಿತ ಚಟುವಟಿಕೆಗಳ ಫಲಾನುಭವಿಗಳಾಗಿವೆ’ ಎಂದು ಹೇಳಿದೆ.

ಪಾಕಿಸ್ತಾನವು ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿದೆ ಎಂದು ಎಫ್‌ಎಟಿಎಫ್ ನೇರವಾಗಿ ಹೇಳಿಲ್ಲ. ಆದರೆ, ಈ ಆರೋಪವನ್ನು ಪುಷ್ಟೀಕರಿಸುವಂತಹ ಪರೋಕ್ಷವಾದ ಸುಳಿವುಗಳನ್ನು ವರದಿಯಲ್ಲಿ ಹಂಚಿಕೊಂಡಿದೆ.

‘ಕೆಲವು ಭಯೋತ್ಪಾದಕ ಸಂಘಟನೆಗಳು ಕೆಲವು ರಾಷ್ಟ್ರಗಳ ಸರ್ಕಾರಗಳಿಂದ ಆರ್ಥಿಕ ನೆರವು ಪಡೆಯುತ್ತಿವೆ ಎಂಬುದು ಸಾರ್ವಜನಿಕವಾಗಿ ಲಭ್ಯವಿರುವ ದಾಖಲೆಗಳು ಹಾಗೂ ವಿವಿಧ ನಿಯೋಗಗಳು ಒದಗಿಸಿದ ಮಾಹಿತಿಗಳಿಂದ ದೃಢಪಟ್ಟಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ಕೆಐಎಡಿಬಿ ಸಿಬ್ಬಂದಿ ಇ.ಡಿ ವಶಕ್ಕೆ

ಬೆಂಗಳೂರು: ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ, ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಎರಡು ಬಾರಿ ಪರಿಹಾರ ನೀಡಿದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ರವಿ ಕುರುಬೆಟ್ಟ ಎಂಬುವವರನ್ನು ವಶಕ್ಕೆ ಪಡೆದಿದೆ.

ವಸಂತಕುಮಾರ್ ಅಣತಿಯಂತೆ ಮಂಡಳಿಯ ಸಿಬ್ಬಂದಿ ರವಿ ಕುರುಬೆಟ್ಟ ದಾಖಲೆಗಳನ್ನು ತಿದ್ದಿದ್ದರು. ಅವರ ವಿರುದ್ಧ ಧಾರವಾಡದ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಅವರು ಅಕ್ರಮ ಎಸಗಿರುವ ಬಗ್ಗೆ ಪುರಾವೆಗಳು ದೊರೆತಿದ್ದು, ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ.

ಪತ್ನಿ ಕೊಂದಿದ್ದ ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಪಿಂಗ್‌ಗೆ ಹೋಗಿ ಮನೆಗೆ ಬಂದಿದ್ದ ಪತ್ನಿಯ ಜತೆಗೆ ಗಲಾಟೆ ನಡೆಸಿ ಕತ್ತು ಹಿಸುಕಿ ಕೊಲೆ ಮಾಡಿದ್ದ ಪತಿಯನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹರೀಶ್

ಹರೀಶ್ ಬಂಧಿತ ಆರೋಪಿ. ಪದ್ಮಜಾ (29) ಕೊಲೆಯಾದವರು.

ಕೋಲಾರ ಜಿಲ್ಲೆಯ ಶ್ರೀನಿವಾಸಪುರದ ದಂಪತಿ ಬೊಮ್ಮನಹಳ್ಳಿಯಲ್ಲಿ ನೆಲಸಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಪದ್ಮಜಾ ಅವರು ಸಾಫ್ಟ್‌ವೇರ್ ಎಂಜಿನಿಯರ್. ಹರೀಶ್ ಸಿವಿಲ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

'ಹರೀಶ್ ಅವರು ಇತ್ತೀಚೆಗೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮದ್ಯ ಸೇವಿಸಿ ಮನೆಗೆ ಬಂದು ಗಲಾಟೆ ಮಾಡುತ್ತಿದ್ದರು. ಹರೀಶ್ ಹತ್ತು ದಿನಗಳ ಹಿಂದೆ ಕೆಲಸಕ್ಕೆ ಸೇರಿದ್ದರು. ಜುಲೈ 6ರಂದು ಶಾಪಿಂಗ್‌ಗೆ ಹೋಗಿ ಮನೆಗೆ ಬಂದಿದ್ದ ಪತ್ನಿಯೊಂದಿಗೆ ಜಗಳವಾಡಿದ್ದರು. ಇಬ್ಬರ ನಡುವಿನ ವಾಗ್ವಾದ ವಿಕೋಪಕ್ಕೆ ತಿರುಗಿ, ಪತ್ನಿಯನ್ನು ಹರೀಶ್ ಕೆಳಕ್ಕೆ ಬೀಳಿಸಿ ಕತ್ತು ಹಿಸುಕಿ ಕೊಲೆ ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಅದನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/36/2025–26 ದಿನಾಂಕ: 08–07–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕಳಲುಘಟ್ಟ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1) ಶ್ರೀಮತಿ ಲಕ್ಷ್ಮಿಬಾಯಿ ಕೋಂ ಬಾಬುಲಾಲ್ ಜೈನ್. 2) ಶ್ರೀಮತಿ ನಾರಾಯಣಿ ದೇವಿ ಕೋಂ ಶಂಕರ್ ಲಾಲ್. 3) ಶ್ರೀ ಹರ್ಷಿತ್. ಎಸ್.ಕೆ ಬಿನ್ ಕುಂದನ್‌ಮಾಲ್‌ಗನ್ನ. 4) ಶ್ರೀ ಸುರೇಶ್‌ಕುಮಾರ್ ಗನ್ನ ಬಿನ್ ಶಂಕರ್ ಲಾಲ್ ಗನ್ನ. 5) ಶ್ರೀ ಮೋಹಿತ್ ಕುಮಾರ್ ಜೈನ್ ಎಸ್. ಬಿನ್ ಸುರೇಶ್‌ಕುಮಮಾರ್ ಗನ್ನ.	ನೆಲಮಂಗಲ / ತ್ಯಾಮಗೊಂಡ್ಲು / ಕಳಲುಘಟ್ಟ	51/1ಎ1	00-16	ವ್ಯವಸಾಯ	ವಾಣಿಜ್ಯ
		51/3	01-30 (00–02ಗು 'ಎ' ಖರಾಬು ಸೇರಿ)		
		51/4ಎ	00-20		
		51/4ಸಿ	00-20		
		51/4ಡಿ	00-22 (00–02ಗು 'ಎ' ಖರಾಬು ಸೇರಿ)		
		51/5	01-02 (00–01ಗು 'ಎ' ಖರಾಬು ಸೇರಿ)		
		51/6	01-00 (00–01ಗು 'ಎ' ಖರಾಬು ಸೇರಿ)		
		51/7ಎ2	00-15 (00–01ಗು 'ಎ' ಖರಾಬು ಸೇರಿ)		

ಷರಾ:– ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಸಮುಚ್ಚಯ ಇಲ್ಲದೆ ಇರುವುದರಿಂದ ಪ್ರಶ್ನಿತ ಜಮೀನುಗಳಲ್ಲಿ ಉತ್ತಮ ಸೌಲಭ್ಯಗಳನ್ನೊಳಗೊಂಡ ವಾಣಿಜ್ಯ ಸಮುಚ್ಚಯ ಸ್ಥಾಪಿಸಿದಲ್ಲಿ, ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/1719/ಅಡ್ವಟೋರ್/2025–26

ಭಾರತ್ ಬಂದ್: ಶಾಂತಿಯುತ ಪ್ರತಿಭಟನೆ

ಕೆಂಪಾದ ಸ್ವಾತಂತ್ರ್ಯ ಉದ್ಯಾನ ಸರ್ಕಾರಗಳ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಬುಧವಾರ ರಾಜ್ಯದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಯಿತು. ರಾಜ್ಯ ಸರ್ಕಾರದ ರೈತ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳಿಗೂ ಪ್ರತಿಭಟನಕಾರರು ವಿರೋಧ ವ್ಯಕ್ತಪಡಿಸಿದರು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ಭಾರತ್ ಬಂದ್‌ಗೆ ಕರೆ ನೀಡಲಾಗಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಗಳನ್ನು ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆಗಳ ವಿವಿಧ ಕಾರ್ಮಿಕ ಸಂಘಟನೆಗಳ ಸಾವಿರಾರು ಸದಸ್ಯರು ಪಾಲ್ಗೊಂಡಿದ್ದರು.

ಕೆಲವು ಸಂಘಟನೆಗಳು ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಲು ನಿರ್ಧರಿಸಿದ್ದವು. ಆದರೆ, ಪೊಲೀಸರು ಅವಕಾಶ ನೀಡದ ಕಾರಣ ಮೆರವಣಿಗೆ ನಡೆಯಲಿಲ್ಲ. ಸ್ವಾತಂತ್ರ್ಯ ಉದ್ಯಾನದಲ್ಲಿ ಕೆಂಪು ಬಾವುಟ ಹಾಗೂ ಭಿತ್ತಿಚಿತ್ರಗಳೇ ತುಂಬಿ ಹೋಗಿದ್ದವು. ಬಹುತೇಕ ಉದ್ದಿಮೆಗಳ ಕಾರ್ಮಿಕರು ಕೆಲಸ ಬಹಿಷ್ಕರಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರಿಂದ ಮೈದಾನದಲ್ಲಿ ಜಾಗ ಸಾಲದೇ ರಸ್ತೆಯಲ್ಲೇ ಜನ ನಿಲ್ಲುವಂತಾಯಿತು.

ಕಾರ್ಮಿಕ ಸಂಬಂಧಿ 29 ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಿರುವ ಕೇಂದ್ರದ ಶಾಸನಗಳ ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಜಾರಿ ಮಾಡಬಾರದು. ಕಾರ್ಮಿಕರ ಪರವಾದ ಕಾನೂನುಗಳು ಜಾರಿಯಾಗಬೇಕು. ಗುತ್ತಿಗೆ ಮತ್ತು ಹೊರಗುತ್ತಿಗೆ ಕಾರ್ಮಿಕರನ್ನು ಕಾಯಂ ಮಾಡಬೇಕು. ಅಲ್ಲಿಯವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಸರ್ಕಾರಿ ನೌಕರರಿಗೆ ನೀಡುವ ವೇತನವನ್ನು ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕರಿಗೆ ನೀಡಬೇಕು. ಮುಷ್ಕರದ ಸಂದರ್ಭದಲ್ಲಿ ವಜಾಗೊಂಡ ಕಾರ್ಮಿಕರನ್ನು ಷರತ್ತಿಲ್ಲದೆ ಪುನರ್ ನೇಮಕಮಾಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಹೊಸದಾಗಿ ಜಾರಿಗೆ ತಂದಿರುವ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್), ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆ (ಬಿಎಸ್‌ಎ) ಎಂಬ ಮೂರು ಕ್ರಿಮಿನಲ್ ಕಾನೂನುಗಳನ್ನು ರದ್ದುಗೊಳಿಸಲು ರಾಜ್ಯ ಸರ್ಕಾರ ಒತ್ತಾಯಿಸಬೇಕು. ಅತಿ ಹೆಚ್ಚು ದಂಡ ವಿಧಿಸುವ ಜನ ವಿರೋಧಿ ಮೋಟಾರು ವಾಹನ (ತಿದ್ದುಪಡಿ) ಕಾಯಿದೆ 2019 ಹಾಗೂ ಮೇಜರ್ ಪೋರ್ಟ್ ಅಥಾರಿಟೀಸ್ ಕಾಯಿದೆ 2021 ಅನ್ನು ಕೈಬಿಡಲು ರಾಜ್ಯ ಸರ್ಕಾರ ಒತ್ತಾಯಿಸಬೇಕು ಎಂದು ತಿಳಿಸಿದರು.

ಕೌಶಲರಹಿತ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ₹31,566 ವೇತನ ನೀಡಬೇಕು. ಅಪಾಯಕಾರಿ ವಲಯದಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳಲು ಅವಕಾಶ ನೀಡುವುದನ್ನು ಕೈಬಿಡಬೇಕು. ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ವಾಪಸ್ ಪಡೆಯಬೇಕು. ಬಿಸಿಯೂಟ ಯೋಜನೆಯ ಯಾವುದೇ ಸ್ವರೂಪದ ಖಾಸಗೀಕರಣ ಕೈಬಿಡಬೇಕು ಎಂಬುದು ಸೇರಿದಂತೆ 37 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಆಶಾ ಹಾಗೂ ಬಿಸಿಯೂಟ ಕಾರ್ಯಕರ್ತೆಯರು, ಸರ್ಕಾರಿ ಸ್ವಾಯತ್ತ ಸಂಸ್ಥೆಗಳ ಕಾರ್ಮಿಕರು, ಖಾಸಗಿ ಕಂಪನಿಗಳ ಕಾರ್ಮಿಕರು, ರೈತರು, ಕೂಲಿ ಕಾರ್ಮಿಕರು ಭಾಗವಹಿಸಿದ್ದರು.

ಸಿಐಟಿಯುನ ವರಲಕ್ಷ್ಮೀ, ಎಐಟಿಯುಸಿಯ ವಿಜಯ ಭಾಸ್ಕರ್, ಇಂಟಕ್‌ನ ಶಾಮಣ್ಣ ರೆಡ್ಡಿ, ಎಚ್‌ಎಂಎಸ್‌ನ ನಾಗನಾಥ್, ಎಐಯುಟಿಯುಸಿ ಸಂಘಟನೆಯ ಕೆ.ವಿ. ಭಟ್, ಎಐಸಿಸಿಟಿಯುನ ಅಪ್ಪಣ್ಣ, ಟಿಯುಸಿಸಿಯ ಜಿ.ಆರ್. ಶಿವಶಂಕರ್, ಎಚ್‌ಎಂಕೆಪಿಯ ಕಾಳಪ್ಪ, ಕೆಐಇಎಫ್‌ನ ಗಂಗಣ್ಣ, ಕೆಡಬ್ಲ್ಯುಯುನ ಇ.ಕೆ.ಎನ್. ರಾಜನ್, ಎನ್‌ಸಿಎಲ್‌ನ ಪಿ.ಕೆ. ಸ್ವಾಮಿ ಸೇರಿದಂತೆ ಅನೇಕ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಬಾರದ ಲಾಡ್

ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಲಿದ್ದಾರೆ ಎಂದು ಪ್ರತಿಭಟನಕಾರರಿಗೆ ಮಾಹಿತಿ ನೀಡಲಾಗಿತ್ತು. ಆದರೆ, ಸಚಿವರು ಬಾರದೇ ನಿರಾಸೆಗೊಳಿಸಿದರು.

'ಸಚಿವರು ನಗರದಲ್ಲಿಯೇ ಇದ್ದಾರೆ. ಆದರೂ ಮನವಿ ಸ್ವೀಕರಿಸಲು ಬಾರದೇ ಕನಿಷ್ಠ ಸೌಜನ್ಯ ಕೂಡ ಇಲ್ಲ ಎಂಬುದನ್ನು ತೋರಿಸಿದ್ದಾರೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕ ಇಲಾಖೆಯ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ, ಹೆಚ್ಚುವರಿ ಆಯುಕ್ತ ಉಮೇಶ್ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಬುಧವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ 'ಅಖಿಲ ಭಾರತ ಸಾರ್ವತ್ರಿಕ ಮುಷ್ಕರ'ದಲ್ಲಿ ಪಾಲ್ಗೊಂಡಿದ್ದ ಕಾರ್ಮಿಕರು ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು
ಪ್ರಜಾವಾಣಿ ಚಿತ್ರ

ಕೃಷಿ ಜಮೀನು ಸ್ವಾಧೀನಕ್ಕೆ ವಿರೋಧ

ದೇವನಹಳ್ಳಿ ಸುತ್ತಮುತ್ತ 13 ಹಳ್ಳಿಗಳಲ್ಲಿ ಕೃಷಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿರುವುದನ್ನು ಸಭೆಯಲ್ಲಿ ಖಂಡಿಸಲಾಯಿತು.

'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತರು, ರೈತ ಮುಖಂಡರ ಮೇಲೆ ಪೊಲೀಸರನ್ನು ಬಳಸಿಕೊಂಡು ಸರ್ಕಾರ ದಬ್ಬಾಳಿಕೆ ನಡೆಸಿದೆ. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲರಿಗೆ ಇಲ್ಲಿನ ಕೃಷಿಕರ ಹಿತಕ್ಕಿಂತ ಉದ್ದಿಮೆದಾರರ ಹಿತಾಸಕ್ತಿಯೇ ಮುಖ್ಯವಾಗಿದೆ' ಎಂದು ಪ್ರತಿಭಟನಕಾರರು ಟೀಕಿಸಿದರು.

ಅತ್ಯಾಚಾರ: ನಾಲ್ವರ ಬಂಧನ

ಸ್ನೇಹಿತನ ಮನೆಯಲ್ಲಿದ್ದ ಸಂತ್ರಸ್ತೆ, ಮನೆಗೆ ನುಗ್ಗಿ ದುಷ್ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡ ನಾಗಮಂಗಲ ಸಮೀಪದ ಬಡಾವಣೆಯೊಂದರಲ್ಲಿ 35 ವರ್ಷದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಆರೋಪದ ಅಡಿ ನಾಲ್ವರನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಘು ಅಲಿಯಾಸ್ ಅಪ್ಪು (24), ಕೆಂಚೇಗೌಡ (26), ಮಾದೇಶ್ (27) ಹಾಗೂ ಶಶಿಕುಮಾರ್ (24) ಬಂಧಿತರು.

ತಮ್ಮ ಸ್ನೇಹಿತನ ಮನೆಗೆ ಸಂತ್ರಸ್ತೆ ಹೋಗಿದ್ದರು. ಈ ವೇಳೆ ಮನೆಯೊಳಗೆ ನುಗ್ಗಿದ ಆರೋಪಿಗಳು, ಪೊಲೀಸರಿಗೆ ದೂರು ನೀಡುವುದಾಗಿ ಹೆದರಿಸಿ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ದೂರು ನೀಡಲಾಗಿದೆ.

'ಅತ್ಯಾಚಾರ ಎಸಗಿದ ಬಳಿಕ ಆರೋಪಿಗಳು ಹಣ ನೀಡುವಂತೆ ಬೆದರಿಸಿದ್ದರು. ಆಗ, ಸಂತ್ರಸ್ತೆ ತನ್ನ ಸ್ನೇಹಿತೆ ಅಕೌಂಟ್‌ನಿಂದ ₹12 ಸಾವಿರ ಹಾಗೂ ತನ್ನ ಖಾತೆಯಿಂದ ₹8 ಸಾವಿರ ಹಾಕಿದ್ದರು. ಆ ಹಣವನ್ನು ಆರೋಪಿಗಳು ಬೆಟ್ಟಿಂಗ್ ಆ್ಯಪ್ ಖಾತೆಗೆ ಹಾಕಿಸಿಕೊಂಡಿದ್ದರು. ನಂತರ, ಮೊಬೈಲ್, ವಾಷಿಂಗ್ ಮಷಿನ್, ಟಿ.ವಿ ಹಾಗೂ ಫ್ರಿಡ್ಜ್ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ದೂರು ನೀಡಲಾಗಿದೆ. ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೃತ್ಯ ಎಸಗಿದ ಬಳಿಕ ಆರೋಪಿಗಳು ಪೊಲೀಸರಿಗೆ ಮಾಹಿತಿ ನೀಡದಂತೆ ಬೆದರಿಸಿದ್ದರು' ಎನ್ನಲಾಗಿದೆ.

'ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ ನಾಲ್ವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳ ವಿರುದ್ಧ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

3 ಹೊಸ ಪೊಲೀಸ್ ವಿಭಾಗ ಸೃಜನೆ

ಬೆಂಗಳೂರು: ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಹೊಸದಾಗಿ ವಾಯವ್ಯ, ನೈರುತ್ಯ ಹಾಗೂ ಎಲೆಕ್ಟ್ರಾನಿಕ್ ಸಿಟಿ ವಿಭಾಗಗಳನ್ನು ಸೃಜಿಸಲಾಗಿದೆ. ಇದುವರೆಗೂ ಎಂಟು ವಿಭಾಗಗಳು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಈಗ ಅವುಗಳ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

ಸದ್ಯ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ, ವೈಟ್‌ಫೀಲ್ಡ್, ಆಗ್ನೇಯ ಹಾಗೂ ಈಶಾನ್ಯ ವಿಭಾಗಗಳಿದ್ದವು. ಇದೀಗ ನಗರ ಪೊಲೀಸ್ ಘಟಕಕ್ಕೆ ವಾಯವ್ಯ, ನೈರುತ್ಯ ಹಾಗೂ ಎಲೆಕ್ಟ್ರಾನಿಕ್ ಸಿಟಿ ಹೊಸ ವಿಭಾಗಗಳು ಸೇರ್ಪಡೆ ಆಗಿವೆ.

ಮೂರು ಹೊಸ ವಿಭಾಗಗಳನ್ನು ಸೃಜಿಸಲಾಗುವುದು ಎಂದು 2025ರ ಬಜೆಟ್ ಮಂಡನೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದರು. ಅವರ ಸೂಚನೆಯಂತೆ ಮೂರು ಹೊಸ ವಿಭಾಗಗಳನ್ನು ಸೃಜಿಸಿ ಗೃಹ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಕೆ.ಎನ್.ವನಜಾ ಅವರು ಆದೇಶಿಸಿದ್ದಾರೆ.

ನಗರವು ಮಾಹಿತಿ ಮತ್ತು ತಂತ್ರಜ್ಞಾನದ ಪ್ರತಿಷ್ಠಿತ ಕೇಂದ್ರ. ದೇಶದ ನಾನಾ ಭಾಗಗಳಿಂದ ಉದ್ಯೋಗವನ್ನು ಅರಸಿ ನಾಗರಿಕರು ನಗರಕ್ಕೆ ಬರುತ್ತಿದ್ದಾರೆ. ನಗರವು ಎಲ್ಲ ದಿಕ್ಕಿನಲ್ಲೂ ವೇಗವಾಗಿ ಬೆಳೆಯುತ್ತಿದೆ. ಜನಸಂಖ್ಯೆ ಕೂಡ ಹೆಚ್ಚಳವಾಗುತ್ತಿದೆ. ನಗರೀಕರಣದ ಜತೆಗೆ ಅಪರಾಧ ಪ್ರಕರಣಗಳೂ ಹೆಚ್ಚುತ್ತಿವೆ. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು, ಕಳ್ಳತನ ಪ್ರಕರಣಗಳು ಹಾಗೂ ಸೈಬರ್ ಅಪರಾಧ ಪ್ರಕರಣಗಳು ನಗರದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗುತ್ತಿವೆ. ಕಾನೂನು ಸುವ್ಯವಸ್ಥೆ ಕಾಪಾಡಲು ಮೂರು ಪೊಲೀಸ್ ವಿಭಾಗ ಸೃಜಿಸುವಂತೆ ಕೋರಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು (ಡಿಜಿ ಹಾಗೂ ಐಜಿಪಿ) ಕಳೆದ ವರ್ಷ ಪ್ರಸ್ತಾವ ಸಲ್ಲಿಸಿದ್ದರು.

2008ರ ಅಂತ್ಯದವರೆಗೆ ನಗರದಲ್ಲಿ ಜನಸಂಖ್ಯೆ ಮತ್ತು ಅಪರಾಧ ಪ್ರಕರಣಗಳಿಗೆ ಅನುಸಾರವಾಗಿ ಐದು ಕಾನೂನು ಸುವ್ಯವಸ್ಥೆ ವಿಭಾಗಗಳು ಹಾಗೂ ಎರಡು ಸಂಚಾರ ವಿಭಾಗಗಳು ಮಾತ್ರ ಅಸ್ತಿತ್ವದಲ್ಲಿದ್ದವು. ನಗರದ ವ್ಯಾಪ್ತಿ ಕ್ರಮೇಣ ವಿಸ್ತಾರವಾದ ಕಾರಣದಿಂದ ನಗರ ಪೊಲೀಸ್ ಘಟಕದಲ್ಲಿ 8 ಕಾನೂನು ಮತ್ತು ಸುವ್ಯವಸ್ಥೆ ಮತ್ತು ನಾಲ್ಕು ಸಂಚಾರ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದವು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

P PREMAKUMAR #14,1st Floor, 1st C Cross, 14th Main,VP Road, old Madivala, Bengaluru-68, have changed my name to P PREM KUMAR vide affidavit dated-09/07/2025..........

CHANGE OF NAME
I, **Hitesh Jain,** residing at No. 327, 6th Main, Banashankari, Srinagar, Bengaluru-560 050. have changed my name to **HITESH BHANDARI** vide affidavit dated 20.02.2019 before notary B.N. Harsha Latha, Bengaluru. Henceforth I shall be called **HITESH BHANDARI** only.

CHANGE OF NAME
I, **M.Sridhar alias Sridhar M alias Sridhar Muthukrishnan,** r/at 201 Shreyas Enclave, 3rd Floor, 41, 2nd Main, Bikasipura, Bengaluru-560061, declare that all the above names pertain to me and henceforth I shall be known as **Sridhar Muthukrishnan** vide affidavit dated 26.05.2025 before Notary Mohammed Hussain .K, Bengaluru.

AUTOMOTIVE

Four Wheelers Selling

Others

SWARAJ MAZDA 2011 Model 32 Seater SCHOOL BUS SALE. Price: 5 Lakhs in Bangalore. 8867569333

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE
To Place your Classified Ads Contact
9731810277

PUBLIC NOTICE

JANATHA EDUCATION SOCIETY®
TENDER NOTIFICATION

Sealed item wise tenders are invited in duplicate from reputed Civil Enigineering Contractors for the following work under Janatha Education Society.
ಸಂಖ್ಯೆ:ವಿಶ್ರೀಕೃವಿಬ/ವಿ.ಮ.ವಿ/ಪಿಹೆಚ್.ಡಿ/ಅಧಿಸೂಚನೆ/2025–26/621 ದಿ:07.07.2025

ಪಿಹೆಚ್.ಡಿ ಪ್ರವೇಶಾತಿ ಅಧಿಸೂಚನೆ 2024–25

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ವಿವಿಧ ವಿಭಾಗಗಳಲ್ಲಿ ಪಿಹೆಚ್.ಡಿ ಅಧ್ಯಯನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿರುವ ಅರ್ಜಿಯನ್ನು ತೆಗೆದುಕೊಂಡು ವಿವರಗಳನ್ನು ನಮೂದಿಸಿ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಯ ಪ್ರತಿಯನ್ನು ಸೂಕ್ತ ದಾಖಲೆಗಳೊಂದಿಗೆ ಶುಲ್ಕ ಪಾವತಿಸಿದ ರಶೀದಿಯನ್ನು ಲಗತ್ತಿಸಿ ಆಯಾ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರ ಹಾಗೂ ಕಾಲಕಾಲಕ್ಕೆ ಹೊರಡಿಸುವ ಸದರಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ www.vskub.ac.inನ್ನು ವೀಕ್ಷಿಸಬಹುದು.

ಸಹಿ/– ಕುಲಸಚಿವರು,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/254/ಕೆಎಸ್‌ಎಂಸಿಎ/2025–26

ಕರ್ನಾಟಕ ಗೃಹ ಮಂಡಳಿ

4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

ಸಂಖ್ಯೆ:ಕಗೃಮಂ/ಕಾ/ಹಂಚಿಕೆ/ಪ.ಪ್ರ/2025–26 ದಿನಾಂಕ: 09–07–2025

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕು, ಕಸಬಾ–1 ಹೋಬಳಿ, ಕಾರೇಹಳ್ಳಿ ಗ್ರಾಮದಲ್ಲಿ ವಿವಿಧ ವರ್ಗಗಳ ಮನೆ/ನಿವೇಶನಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ **ದಿನಾಂಕ: 04.06.2025 ರಂದು** ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 08.07.2025** ಎಂದು ತಿಳಿಸಲಾಗಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕವನ್ನು 31.07.2025** ರವರೆಗೆ ವಿಸ್ತರಿಸಲಾಗಿರುತ್ತದೆ. ಉಳಿದಂತೆ **ದಿನಾಂಕ: 04.06.2025**ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಸಕ್ತಿ ಇರುವ ಸಾರ್ವಜನಿಕರು ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು (e-payment) ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.07.2025.**

ಸಹಿ/– ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO1733/AAPL/2025-26

बी ई एम एल BEML LIMITED

(CIN: L35202KA1964GOI001530)
(A Govt. of India Mini Ratna Company under Ministry of Defence)
BANGALORE COMPLEX, POST BOX: 7501,
NEW THIPPASANDRA POST, BANGALORE-560075

NOTICE INVITING TENDER
e tender through BEML SRM Portal

BEML LIMITED, BANGALORE COMPLEX invites Public Tender-E mode (TWO Bid System)

Civil works tender ref: 6300039698

Work Description : Establishing alternate source of water supply at factory- by drilling borewells, construction of RCC sump, horizontal drilling of GI pipe lines & connecting to main sump at Bangalore Complex, BEML Ltd, Bangalore

Approx. estimated value : Rs. 3,50,00,000 /- inclusive of GST

EMD amount : Rs. 7,00,000/-

Period of contract: 06 Months

Last date & time for submission of bids : 23.07.2025 at 14.00 Hrs

Further details of tender can be obtained from following website: **https://www.bemlindia.in/tenders/active-tenders/Bangalore complex SRM Portal: https://bemlindia.in/eprocurement index.php**

Bidders are advised to visit above websites frequently for any corrigendum, extension, etc.

The management has the right to accept or reject any or all the tenders without assigning any reasons thereon.

Sd/- Asst. General Manager

ಸಣ್ಣ ನೀರಾವರಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ–577204.

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)– ಕೆಡಬ್ಲೂ –4(ಟರ್ನ್–ಕೀ)

ಐ.ಎಫ್.ಟಿ. ಸಂ: 10/2025–26 ದಿನಾಂಕ: 07.07.2025.

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲೂ–4 (ಟರ್ನ್–ಕೀ)ರ ಅನ್ವಯ ತರೀಕೆರೆ ಉಪವಿಭಾಗ ವ್ಯಾಪ್ತಿಯಲ್ಲಿನ ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರ ತಾಲ್ಲೂಕು ಗಡಿ ರಂಗಾಪುರ ಮತ್ತು ಇತರೆ 19 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.3733.43 ಲಕ್ಷಗಳು, ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http:/kppp.karnataka.gov.in ದಿನಾಂಕ:15.07.2025 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ:30.07.2025. 17:00 ಘಂಟೆ. ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25–26/44/07/542

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ, ಬೊಮ್ಮನಹಳ್ಳಿ ವಲಯ, ಬೃ.ಬೆಂ.ಮ.ಪಾ, ಬೆಂಗಳೂರು

ಸಂಖ್ಯೆ: ಹಿಸನಿತೋ/(ಬೊಮ್ಮನಹಳ್ಳಿ)/ಟೆಂಡರ್/03/2025–26 ದಿನಾಂಕ: 09.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಆಹ್ವಾನ ಪತ್ರ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ) (ಎಸ್‌ಟಿಡಿ ಕೆಡಬ್ಲ್ಯೂ–1, 2, 3 & 4)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ ಬೊಮ್ಮನಹಳ್ಳಿ ವಲಯ, ಇವರು (ಈ ದಾಖಲಾತಿಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಅನುಷ್ಠಾನಗೊಳಿಸಲು ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ನುರಿತ ವ್ಯಕ್ತಿಗಳು/ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಉದ್ಯಾನವನಗಳಲ್ಲಿ ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು/ವರ್ಗೀಕರಣ
1.	ವಾರ್ಡ್ ಸಂಖ್ಯೆ–221ರ ಸ್ವಾಭಿಮಾನ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.200.00 ಲಕ್ಷಗಳು, ಇಎಂಡಿ ಮೊತ್ತ: 3,00,000/–**
2.	ವಾರ್ಡ್ ಸಂಖ್ಯೆ. 222ರ ಹೊಸಪಾಳ್ಯ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.200.00 ಲಕ್ಷಗಳು, ಇಎಂಡಿ ಮೊತ್ತ: 3,00,000/–**
3	ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.200.00 ಲಕ್ಷಗಳು, ಇಎಂಡಿ ಮೊತ್ತ: 3,00,000/–**
4	ವಾರ್ಡ್ ಸಂಖ್ಯೆ. 203ರ ಪೂರ್ಣಪ್ರಜ್ಞಾ ಬಡಾವಣೆಯ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.200.00 ಲಕ್ಷಗಳು, ಇಎಂಡಿ ಮೊತ್ತ: 3,00,000/–**
5.	ಬೊಮ್ಮನಹಳ್ಳಿ ವಲಯದ ಉದ್ಯಾನವನಗಳಲ್ಲಿ ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ ಕಾಮಗಾರಿಗಳು, ಕೊಳವೆಬಾವಿ ಕೊರೆಸುವುದು ಸೇರಿದಂತೆ ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.200.00 ಲಕ್ಷಗಳು, ಇಎಂಡಿ ಮೊತ್ತ: 3,00,000/–**

ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ 09.07.2025. (2) ಟೆಂಡರ್ ದಾಖಲೆಗಳನ್ನು ದಿನಾಂಕ 11.07.2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 25.07.2025ರ ಸಂಜೆ 4:30 ಗಂಟೆಯವರೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 28.07.2025ರ ಬೆಳಗ್ಗೆ 11:30 ಗಂಟೆಗೆ. (5) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.

ಸಹಿ/– ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ,
ಬೊಮ್ಮನಹಳ್ಳಿ ವಲಯ

ಚಿಟಿಕೆ ಸುದ್ದಿ

ಸೀಟು ಹಂಚಿಕೆ: ಅವ್ಯವಹಾರ ನಡೆದಿಲ್ಲ

ತರೀಕೆರೆ (ಚಿಕ್ಕಮಗಳೂರು): 'ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಅಧೀನದಲ್ಲಿ ಬರುವ ವಸತಿ ಶಾಲೆಗಳಿಗೆ ಮಕ್ಕಳ ಆಯ್ಕೆ ಸಂಬಂಧ ಯಾವುದೇ ಹಂತದಲ್ಲೂ ಅವ್ಯವಹಾರ ನಡೆದಿಲ್ಲ' ಎಂದು ಉಪ ವಿಭಾಗಾಧಿಕಾರಿ ಕೆ.ಜೆ. ಕಾಂತರಾಜ್ ಸ್ಪಷ್ಟಪಡಿಸಿದ್ದಾರೆ.

ತರೀಕೆರೆ ಉಪ ವಿಭಾಗದ ವ್ಯಾಪ್ತಿಯ 18 ಶಾಲೆಗಳಲ್ಲಿ ಖಾಲಿ ಉಳಿದಿದ್ದ 7ನೇ ತರಗತಿಯಲ್ಲಿ 46 ಸೀಟುಗಳು ಮತ್ತು 8ನೇ ತರಗತಿಯ 63 ಸೇರಿ 109 ಸೀಟುಗಳ ಭರ್ತಿಗೆ 638 ಅರ್ಜಿಗಳು ಬಂದಿದ್ದವು. ಸುತ್ತೋಲೆ ಪ್ರಕಾರ ಪಾರದರ್ಶಕವಾಗಿ ಸಿಸಿಟಿವಿ ಕಾವಲಿನಲ್ಲಿ ಪರೀಕ್ಷೆ ಹಾಗೂ ಮೌಲ್ಯಮಾಪನ ನಡೆಸಲಾಗಿದೆ. 7 ಮತ್ತು 8ನೇ ತರಗತಿಯ ಖಾಲಿ ಇದ್ದ ಸೀಟುಗಳನ್ನೂ ನಿಯಮಾನುಸಾರ ಭರ್ತಿ ಮಾಡಲಾಗಿದೆ. ಯಾವುದೇ ಲೋಪ ಆಗಿಲ್ಲ. ಆರೋಪದಲ್ಲಿ ಹುರುಳಿಲ್ಲ, ತನಿಖೆ ನಡೆಸಬಹುದು' ಎಂದಿದ್ದಾರೆ.

'ಸೀಟು ಭರ್ತಿಯಲ್ಲಿ ಅವ್ಯವಹಾರ ನಡೆದಿದೆ' ಎಂದು ಕಾಂಗ್ರೆಸ್ ಶಾಸಕ ಕೆ.ಎಸ್.ಆನಂದ್ ಆರೋಪಿಸಿದ್ದರು.

ಜನರ ತೀರ್ಮಾನದಂತೆ ಮುಂದಿನ ನಡೆ: ಜಿಟಿಡಿ

ಮೈಸೂರು: 'ಸದ್ಯಕ್ಕೆ ನನ್ನದು ತಟಸ್ಥ ನಿಲುವು. 'ಶಾಸಕನ ಕೆಲಸ ಮಾಡುತ್ತಿದ್ದೇನೆ. ಮುಂದೆ ಕ್ಷೇತ್ರದ ಜನರ ಸಭೆ ಕರೆದು ನಿರ್ಧಾರ ಮಾಡುತ್ತೇನೆ' ' ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಇಲ್ಲಿ ಬುಧವಾರ ಪತ್ರಕರ್ತ ರೊಂದಿಗೆ ಮಾತನಾಡಿದ ಅವರು, 'ನನ್ನ ಆಯ್ಕೆ ಮಾಡಿರುವುದು ಕ್ಷೇತ್ರದ ಜನ. ನೀನು ಬರದೇ ಇದ್ದರೆ ಸರ್ಕಾರ ಉಳಿಯುವುದಿಲ್ಲ ಬಂದು ಬಿಡು ಎಂದು ಸಿದ್ದರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್ ಅವರಾಗಲಿ ಕರೆದಿಲ್ಲ. ಬಿಜೆಪಿಯವರೂ ಕರೆದಿಲ್ಲ. ಜೆಡಿಎಸ್‌ನವರೂ ಕರೆದಿಲ್ಲ' ಎಂದರು.

'ಮುಂದಿನ ದಿನಗಳಲ್ಲಿ ಕ್ಷೇತ್ರದ ಜನರ ಸಭೆ ಕರೆಯುತ್ತೇನೆ. ನಾನು ವೈಯಕ್ತಿಕವಾಗಿ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಕ್ಷೇತ್ರದ ಜನರು ಹೇಳಿದಂತೆಯೇ ತೀರ್ಮಾನಿಸುತ್ತೇನೆ' ಎಂದರು.

ಯಲ್ಲಮ್ಮಗುಡ್ಡ: ₹3.81 ಕೋಟಿ ಕಾಣಿಕೆ

ಉಗರಗೋಳ (ಬೆಳಗಾವಿ ಜಿಲ್ಲೆ): ಯಲ್ಲಮ್ಮನಗುಡ್ಡದ ಯಲ್ಲಮ್ಮ ದೇವಸ್ಥಾನದ ಹುಂಡಿಗಳ ಎಣಿಕೆ ಬುಧವಾರ ಮುಗಿದಿದ್ದು, ಮೂರು ತಿಂಗಳಲ್ಲಿ ₹3.81 ಕೋಟಿ ಮೌಲ್ಯದ ಕಾಣಿಕೆ ಸಂಗ್ರಹವಾಗಿದೆ.

ಇದರಲ್ಲಿ ₹ 3.39 ಕೋಟಿ ನಗದು, ₹32.94 ಲಕ್ಷ ಮೌಲ್ಯದ 340 ಗ್ರಾಂ ಚಿನ್ನಾಭರಣ ಮತ್ತು ₹ 9.79 ಲಕ್ಷ ಮೌಲ್ಯದ 8 ಕೆ.ಜಿ ಬೆಳ್ಳಿ ಆಭರಣ ಸೇರಿವೆ. 2025ರ ಏಪ್ರಿಲ್ 1ರಿಂದ ಜೂನ್ 30ರ ಅವಧಿಯಲ್ಲಿ ಹಾಕಿದ್ದ ಕಾಣಿಕೆಯನ್ನು ಐದು ಸುತ್ತುಗಳಲ್ಲಿ ಎಣಿಕೆ ಮಾಡಲಾಯಿತು.

'2023ರಲ್ಲಿ ₹1.65 ಕೋಟಿ ಮತ್ತು 2024ರಲ್ಲಿ ₹1.96 ಕೋಟಿ ಕಾಣಿಕೆ ಸಂಗ್ರಹವಾಗಿತ್ತು' ಎಂದು ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಅಶೋಕ ದುಡಗುಂಟಿ ತಿಳಿಸಿದರು.

'ನುಡಿಜಾತ್ರೆ: ಮೂರು ಪಟ್ಟು ಬಿಲ್'

ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಬೇಕಾಬಿಟ್ಟಿ ವೆಚ್ಚ: ದಾಖಲೆಗಳಿಂದ ಬಹಿರಂಗ

• ರಾಜೇಶ್ ರೈ ಚಟ್ಲ

ಬೆಂಗಳೂರು: ಮಾರುಕಟ್ಟೆಯಲ್ಲಿ ಜರ್ಮನ್ ಹ್ಯಾಂಗರ್ ಟೆಂಟ್ ಸ್ಪರ್ಧಾತ್ಮಕ ಬಾಡಿಗೆ ದರ ಪ್ರತಿ ಚದರ ಅಡಿಗೆ ಗರಿಷ್ಠ ₹25ರಿಂದ ₹35. ಆದರೆ, ಗುತ್ತಿಗೆದಾರನಿಗೆ ಪಾವತಿಸಿದ್ದು ₹68.25. ಹಸಿರು ಜಾಲಿ ಮ್ಯಾಟ್ ಖರೀದಿ ದರ ಪ್ರತಿ ಚದರ ಅಡಿಗೆ ₹1.20 ರಿಂದ ₹2.80. ಆದರೆ, ಬಾಡಿಗೆಗೆ ಪಡೆದು ಸಂದಾಯ ಮಾಡಿರುವ ದರ ₹6.30. ನೀರು ನಿರೋಧಕ ಪೆಂಡಾಲ್ ಬಾಡಿಗೆ ದರ ಪ್ರತಿ ಚದರ ಅಡಿಗೆ ಗರಿಷ್ಠ ₹15ರಿಂದ ₹18. ಬಿಲ್ ಪಾವತಿಸಿದ್ದು ಪ್ರತಿ ಚದರ ಅಡಿಗೆ ₹48!

ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಣ ವೆಚ್ಚ ಮಾಡಿರುವ ಪರಿಯಿದು.

ಸಮ್ಮೇಳನದ ಖರ್ಚು ವೆಚ್ಚದ ಬಗ್ಗೆ ಮಾಹಿತಿ ಹಕ್ಕಿನಡಿ ಪಡೆದ 400ಕ್ಕೂ ಹೆಚ್ಚು ಪುಟಗಳ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಟಿಪಿ) ಕಾಯ್ದೆಯ 4ಜಿ ವಿನಾಯಿತಿ ಪಡೆದು, ಗುತ್ತಿಗೆದಾರರು ಹಾಗೂ ಏಜೆನ್ಸಿಗಳೊಂದಿಗೆ ಕೆಎಸ್‌ಎಂಸಿಎ, ಸಾಹಿತ್ಯ ಪರಿಷತ್ ಮತ್ತು ಸಮಿತಿಗಳು ಒಳ ಒಪ್ಪಂದ ಮಾಡಿಕೊಂಡು ಹಣ ದುರುಪಯೋಗ ಮಾಡಿರುವುದು ಈ ದಾಖಲೆಗಳಿಂದ ಬಹಿರಂಗವಾಗಿದೆ.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರಿಗೆ ಈ ಬಗ್ಗೆ ದೂರು ಸಲ್ಲಿಸಲಾಗಿದೆ. ಎಫ್.ಎಂ. ಇಟಗಿ ಎಂಬವರು ಎಂ.ಬಿ. ಪಾಟೀಲ ಅವರಿಗೆ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ವಿವರಣೆ ನೀಡುವಂತೆ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ವ್ಯವಸ್ಥಾಪಕ ನಿರ್ದೇಶಕರಿಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನಿರ್ದೇಶನ ನೀಡಿದ್ದಾರೆ. ಶಿವಮೊಗ್ಗದ ಬಿ. ಚಂದ್ರೇಗೌಡ ಅವರು ಆರ್ಥಿಕ ಇಲಾಖೆಗೆ ಸಲ್ಲಿಸಿದ ದೂರಿನ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ತಮ್ಮ ಇಲಾಖೆಯ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

2024ರ ಡಿಸೆಂಬರ್ 20ರಿಂದ 22ರವರೆಗೆ ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಸಮ್ಮೇಳನಕ್ಕೆ ಒಟ್ಟು ₹29.65 ಕೋಟಿ ವೆಚ್ಚವಾಗಿತ್ತು. ಅದರಲ್ಲಿ ₹3.17 ಕೋಟಿ ಜಿಎಸ್‌ಟಿ, ₹1.08 ಕೋಟಿ ಕೆಎಸ್‌ಎಂಸಿಎ ಸೇವಾ ಶುಲ್ಕ ಸೇರಿದೆ. ಸರ್ಕಾರ ಎರಡು ಹಂತಗಳಲ್ಲಿ ಒಟ್ಟು ₹30 ಕೋಟಿ ಅನುದಾನ ನೀಡಿತ್ತು. ಅಲ್ಲದೆ, ಇತರ ಮೂಲಗಳಿಂದ ಸೇರಿ ಒಟ್ಟು ₹32.74 ಕೋಟಿ ಸಂಗ್ರಹವಾಗಿತ್ತು.

'ಸಮ್ಮೇಳನದ ಅಗತ್ಯಕ್ಕೆಂದು ಶಾಮಿಯಾನ, ಮ್ಯಾಟ್... ಹೀಗೆ ವಿವಿಧ ಸಾಮಗ್ರಿಗಳ ಖರೀದಿ ಹಾಗೂ ಹಲವು ಸೇವೆಗಳಿಗೆ ಮಾರುಕಟ್ಟೆ ದರಕ್ಕಿಂತ ದುಪ್ಪಟ್ಟು, ಮೂರು ಪಟ್ಟು ದರ ವಿಧಿಸಿ ಸಲ್ಲಿಕೆಯಾಗಿದ್ದ ಬಿಲ್‌ಗಳಿಗೆ ಕೆಎಸ್‌ಎಂಸಿಎ ಹಣ ಪಾವತಿಸಿದೆ. ಸಾಹಿತ್ಯ ಸಮ್ಮೇಳನ ನಡೆಯುವ ಸ್ಥಳ ವರ್ಷದ ಮೊದಲೇ ನಿಗದಿಯಾಗಿದ್ದರೂ ಕೆಟಿಟಿಪಿ ಕಾಯ್ದೆಯಡಿ ಟೆಂಡರ್ ಕರೆಯದೆ, 4ಜಿ ವಿನಾಯಿತಿ ಪಡೆದು ಕೆಎಸ್‌ಎಂಸಿಎ ಮೂಲಕ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಈ ಸಂಸ್ಥೆಯು ಸರ್ಕಾರಿ ಸಂಸ್ಥೆಯಾಗಿದ್ದು, ಅದರ ಮೂಲಕ ಕೆಲಸ ಆಗಿದೆ ಎಂದು ತೋರಿಸಿ ತಮಗೆ ಬೇಕಾದ ವ್ಯಕ್ತಿ, ಸಂಸ್ಥೆಗಳಿಗೆ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರದಲ್ಲಿ ಗುತ್ತಿಗೆ ವಹಿಸಿ, ಕಾಮಗಾರಿ ನಿರ್ವಹಿಸದೆಯೂ ಬಿಲ್ ನೀಡಿರುವುದು ದಾಖಲೆಗಳಿಂದ ಗೊತ್ತಾಗುತ್ತಿದೆ' ಎಂದೂ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ತಾತ್ಕಾಲಿಕ ಶೌಚಾಲಯಕ್ಕೆ ₹66.32 ಲಕ್ಷ!

ಕೆಟಿಟಿಪಿ ಕಾಯ್ದೆಯ ನಿಯಮಗಳನ್ನು ಪಾಲಿಸಿಯೇ ಶಾಮಿಯಾನ, ಧ್ವನಿವರ್ಧಕಗಳು, ಅಲಂಕಾರ ವ್ಯವಸ್ಥೆ, ಬೆಳಕಿನ ವ್ಯವಸ್ಥೆ, ಆಹಾರ ಪೂರೈಕೆ, ಸಾಗಣೆ ಮತ್ತು ಇತರ ಸೇವೆಗಳ ಅವಶ್ಯಕತೆಗಳನ್ನು ಒದಗಿಸಬೇಕು. ತುರ್ತು ಸಂದರ್ಭದಲ್ಲಿ ಮಾತ್ರ 4ಜಿ ವಿನಾಯಿತಿ ಪಡೆಯಲು ಆರ್ಥಿಕ ಇಲಾಖೆ ಅವಕಾಶ ನೀಡಿದೆ. ಉತ್ತಮ ಗುಣಮಟ್ಟದ ಸೇವೆ ಹಾಗೂ ಸಮಜಾಯಿಷಿ ದರದಲ್ಲಿ ಸೇವೆ ನೀಡಬೇಕೆಂದು 4ಜಿ ವಿನಾಯಿತಿ ಆದೇಶದಲ್ಲಿ ವಿವರಿಸಲಾಗಿದೆ. ಆದರೆ, ತಮಗೆ ಬೇಕಾದವರಿಗೆ ಕಾಮಗಾರಿ ನೀಡಲು ಎಲ್ಲ ನಿಯಮಗಳನ್ನು ಕೆಎಸ್‌ಎಂಸಿಎ ಉಲ್ಲಂಘಿಸಿದೆ. ಸಾರ್ವಜನಿಕ ಬಳಕೆಗೆ ಶೌಚಾಲಯಗಳನ್ನು ಸ್ಟೀಲ್ ತಗಡು ಬಾಡಿಗೆಗೆ ಪಡೆದು ₹400ರಿಂದ ₹500ರಲ್ಲಿ ಅಚ್ಚುಕಟ್ಟಾಗಿ ನಿರ್ಮಿಸಬಹುದು. ಆದರೆ, ಅದೇ ತಗಡುಗಳಿಗೆ ಬಾಡಿಗೆ ₹4,500ರಂತೆ ಒಟ್ಟು 200 ಶೌಚಾಲಯಗಳನ್ನು ನಿರ್ಮಿಸಲು ₹66.32 ಲಕ್ಷ ಬಿಲ್ ಪಾವತಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

> ಸಮ್ಮೇಳನ ಆಯೋಜಿಸಲು 28 ಸಮಿತಿಗಳನ್ನು ಜಿಲ್ಲಾಡಳಿತ ರಚಿಸಿತ್ತು. ಈ ಸಮಿತಿಗಳಲ್ಲಿ 6-7 ಸ್ಥಳೀಯ ಅಧಿಕಾರಿಗಳೂ ಇದ್ದರು. ಖರ್ಚು ವೆಚ್ಚದ ಬಿಲ್‌ಗಳನ್ನು ಈ ಸಮಿತಿಗಳು ಅನುಮೋದಿಸಿವೆ. ಸಮಿತಿಗಳು ಅನುಮೋದನೆ ನೀಡಿದ ಬಳಿಕ ನಾವೇನು ಮಾಡಲು ಆಗುತ್ತದೆ. ನಮ್ಮ ಮೂಲಕ ಹಣ ಪಾವತಿಯಾಗಿದೆ. ನಮ್ಮದು 'ಪೋಸ್ಟ್ ಮ್ಯಾನ್' ಕೆಲಸ ಅಷ್ಟೆ
>
> **ಮೊಹಮ್ಮದ್ ಅತೀಕುಲ್ಲಾ ಷರೀಫ್,** ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಎಂಸಿಎ

ಸುದ್ದಿ 2 ನಿಮಿಷ

'ಕನ್ನಡದಲ್ಲೇ ನಪಾಸು: ಕಾರಣ ತಿಳಿಯಲು ಉಪ ಸಮಿತಿ ರಚನೆ'

ಧಾರವಾಡ: 'ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲಿ ಅನುತ್ತೀರ್ಣರಾಗುವ ಕಾರಣ ತಿಳಿಯಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಜುಲೈ 23ರಂದು ಸಭೆ ನಡೆಸಿ, ಉಪಸಮಿತಿ ರಚಿಸಲಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ತಿಳಿಸಿದರು.

'ಸಮಿತಿಯಲ್ಲಿ ಶಿಕ್ಷಣ ತಜ್ಞರು, ಶಿಕ್ಷಕರು ಸೇರಿ ಐವರು ಸದಸ್ಯರು ಇರುತ್ತಾರೆ. ವರದಿ ಸಲ್ಲಿಸಲು ಮೂರು ತಿಂಗಳ ಗಡುವು ವಿಧಿಸಲಾಗುವುದು. ಕನ್ನಡದಲ್ಲಿ ಅನುತ್ತೀರ್ಣರಾದವರ ತಾಲ್ಲೂಕುವಾರು ವಿವರ ನೀಡಲು ಶಾಲಾ ಶಿಕ್ಷಣ ಇಲಾಖೆಗೆ ಕೋರಲಾಗಿದೆ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.



'ಕನ್ನಡ ಶಿಕ್ಷಕರಿಗೆ ಅಗತ್ಯ ತರಬೇತಿ ಹಾಗೂ ಪಠ್ಯಕ್ರಮ, ಕಲಿಕೆಯನ್ನು ಸರಳಗೊಳಿಸಿದರೆ ಕನ್ನಡ ಪ್ರಥಮಭಾಷೆ ಅಂಕವನ್ನು 100ಕ್ಕೆ ಇಳಿಸಿದ್ದನ್ನು ಒಪ್ಪಬಹುದು' ಎಂದರು.

'ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಸಮಿತಿ ಜುಲೈ ಅಂತ್ಯದ ವೇಳೆಗೆ ಸರ್ಕಾರಕ್ಕೆ ವರದಿ ಸಲ್ಲಿಸುವ ನಿರೀಕ್ಷೆಯಿದೆ. ದ್ವಿಭಾಷಾ ಸೂತ್ರ ಕುರಿತ ಶಿಫಾರಸು ಕುರಿತು ಚರ್ಚಿಸಿ ಪ್ರಾಧಿಕಾರದ ತನ್ನ ನಿರ್ಧಾರ ತಿಳಿಸಲಿದೆ' ಎಂದರು.

ವಿಷ ಕುಡಿದು ಒಂದೇ ಕುಟುಂಬದ ಮೂವರ ಸಾವು

ಬೆಳಗಾವಿ: ಇಲ್ಲಿನ ಶಹಾಪುರದ ಜೋಶಿ ಮಾಳದಲ್ಲಿ ಬುಧವಾರ ಒಂದೇ ಕುಟುಂಬದ ನಾಲ್ವರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದು, ಮೂವರು ಮೃತಪಟ್ಟಿದ್ದಾರೆ.

'ಮಂಗಳಾ ಕುರಡೇಕರ್ (70) ಅವರ ಪುತ್ರ ಸಂತೋಷ (44), ಪುತ್ರಿ ಸುವರ್ಣ (42) ಮೃತರು. ಗಂಭೀರ ಸ್ಥಿತಿಯಲ್ಲಿರುವ ಇನ್ನೊಬ್ಬ ಪುತ್ರಿ ಸುನಂದಾರನ್ನು (40) ಆಸ್ಪತ್ರೆಗೆ ಸೇರಿಸಲಾಗಿದೆ.

ಮೂವರೂ ಮಕ್ಕಳು ಅವಿವಾಹಿತರು. ತಾಯಿ ಜೊತೆ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಸಂತೋಷ ಅವರು ನಡೆಸುತ್ತಿದ್ದ ಚಿನ್ನದ ಚೀಟಿಯಲ್ಲಿ ಉಂಟಾದ ಮೋಸವೇ ಈ ಅವಘಡಕ್ಕೆ ಕಾರಣವಾಗಿರಬಹುದು' ಎಂದು ಶಹಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಆತ್ಮಹತ್ಯೆಗೆ ಮುನ್ನ ಮರಾಠಿಯಲ್ಲಿ ಬರೆದಿರುವ ಪತ್ರ ಸಿಕ್ಕಿದೆ. ಚಿನ್ನದ ವ್ಯಾಪಾರಿ ರಾಜು ಕುಡತರಕರ್‌ರಿಂದ ಮೋಸವಾಗಿದೆ. ಕಿರುಕುಳವಾಗಿದೆ. ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ ಎಂದು ಸಂತೋಷ ಬರೆದಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಸ್ಥಳದಲ್ಲಿ ಡೆತ್‌ನೋಟ್ ಸಿಕ್ಕಿದ್ದು, ಅದನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಬೆಳಗಾವಿ ನಗರ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ತಿಳಿಸಿದರು.

ದಕ್ಷಿಣ ಕನ್ನಡ: ಗೃಹ ಸಚಿವ ಜಿ.ಪರಮೇಶ್ವರ ಅಧ್ಯಕ್ಷತೆಯಲ್ಲಿ ಸೌಹಾರ್ದ ಸಭೆ

ಶಾಂತಿ ಮಂತ್ರ ಜಪಿಸಿದ ಮುಖಂಡರು

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಮಾಜಿಕ ಮಾಧ್ಯಮಗಳಲ್ಲಿ ಧರ್ಮಗಳ ವಿರುದ್ಧ ದ್ವೇಷ ಹಬ್ಬಿಸುವುದು, ಬೇರೆ ಧರ್ಮಗಳ ಅವಹೇಳನ, ಸುಳ್ಳು ಸುದ್ದಿ ಹರಡುವುದು, ದ್ವೇಷ ಭಾಷಣ... ಜಿಲ್ಲೆಯ ಸಾಮರಸ್ಯ ಕದಡುವ ಪ್ರತಿಯೊಂದು ನಡೆಯನ್ನೂ ಮಟ್ಟ ಹಾಕಬೇಕು. ಡ್ರಗ್ಸ್, ಜೂಜು, ಮರಳು ದಂಧೆ ಮತ್ತಿತರ ಅಕ್ರಮ ದಂಧೆಗಳಿಗೆ ಕಡಿವಾಣ ಹಾಕಬೇಕು. ತಾರತಮ್ಯ ಮಾಡದೇ ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ಸೌಹಾರ್ದ ಕಾಪಾಡುವ ಕುರಿತು ಚರ್ಚಿಸಲು ಗೃಹ ಸಚಿವ ಜಿ.ಪರಮೇಶ್ವರ ನೇತೃತ್ವದಲ್ಲಿ ಇಲ್ಲಿ ಬುಧವಾರ ಏರ್ಪಡಿಸಿದ್ದ ಸಭೆಯಲ್ಲಿ ವ್ಯಕ್ತವಾದ ಒಟ್ಟಾಭಿಪ್ರಾಯವಿದು.

ರಾಜಕೀಯ ಪಕ್ಷದವರು, ಶಿಕ್ಷಣ-ಧಾರ್ಮಿಕ ಸಂಘ ಸಂಸ್ಥೆಗಳು ಮತ್ತು ವಿವಿಧ ಸಮುದಾಯಗಳ ಮುಖಂಡರು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸುವ ಅನಿವಾರ್ಯವನ್ನು ಒತ್ತಿ ಹೇಳಿದರು.

ಕೋಮು ಹಿಂಸೆಯಲ್ಲಿ ತೊಡಗುವವರ ಜೊತೆಗೆ ಅವರ ಮನಸ್ಸಿನಲ್ಲಿ ದ್ವೇಷ ತುಂಬುವುದಕ್ಕೆ ಕಾರಣವಾಗುವ ಸೂತ್ರಧಾರಿಗಳ ವಿರುದ್ಧವೂ ಕ್ರಮವಾಗಬೇಕು. ಕೋಮು ಹತ್ಯೆಗಳಿಗೆ ಹಣಕಾಸು ನೆರವು ನೀಡುವವರನ್ನು ಗುರುತಿಸಿ ಸದೆಬಡಿಯಬೇಕು ಎಂದೂ ಕೆಲವರು ಒತ್ತಾಯಿಸಿದರು. ಸರ್ಕಾರದ ಹಾಗೂ ಪೊಲೀಸರ ನಡೆಗಳು ತಾರತಮ್ಯದಿಂದ ಕೂಡಿದ್ದರೆ ಹೇಗೆ ಅದು ಅಪನಂಬಿಕೆ ಮೂಡಿಸುತ್ತದೆ. ಗೋಹತ್ಯೆಯಂತಹ ವಿಚಾರ ಹೇಗೆ ಘರ್ಷಣೆಗೆ ಕಾರಣವಾಗುತ್ತದೆ ಎಂದು ಬಿಜೆಪಿಯ ಕೆಲ ಶಾಸಕರು ಬೊಟ್ಟು ಮಾಡಿದರು.

ಸಂಸದ ಕ್ಯಾ.ಬ್ರಿಜೇಶ್ ಚೌಟ, 'ಕಾನೂನು ಸುವ್ಯವಸ್ಥೆ ಕಾಪಾಡುವ ವಿಚಾರದಲ್ಲಿ ಆದ ವೈಫಲ್ಯವನ್ನು ಜಿಲ್ಲೆಯ ಜನರ ಮೇಲೆ ಹೇರಬಾರದು. ದಕ್ಷಿಣ ಕನ್ನಡ ಕೋಮು ಸೂಕ್ಷ್ಮ ಜಿಲ್ಲೆ, ಹಿಂದುತ್ವದ ಪ್ರಯೋಗಶಾಲೆ ಎಂದೆಲ್ಲ ಚಿತ್ರಿಸುವ ಪ್ರಯತ್ನಗಳು ನಿಲ್ಲಬೇಕು' ಎಂದರು.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳ ಬಗ್ಗೆ ಚರ್ಚಿಸಿ ಕ್ರಮಕೈಗೊಳ್ಳುತ್ತೇವೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ಭರವಸೆ ನೀಡಿದರು.

'ದ್ವೇಷ ಭಾಷಣ, ಗೋಹತ್ಯೆ ನಿಯಂತ್ರಣಕ್ಕೆ ಈಗಿರುವ ಕಾನೂನು ಬಳಸುತ್ತೇವೆ. ಸುಳ್ಳು ಸುದ್ದಿ ಹರಡುವಿಕೆ ತಡೆಯಲು ಮುಂದಿನ ಅಧಿವೇಶನದಲ್ಲೇ ಹೊಸ ಮಸೂದೆ ಮಂಡಿಸುತ್ತೇವೆ' ಎಂದು ತಿಳಿಸಿದರು.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಶಾಸಕರಾದ ಡಾ.ವೈ.ಭರತ್ ಶೆಟ್ಟಿ, ಡಿ.ವೇದವ್ಯಾಸ ಕಾಮತ್, ಹರೀಶ್ ಪೂಂಜ, ರಾಜೇಶ್ ನಾಯ್ಕ್ ಉಳಿಪಾಡಿ, ಭಾಗಿರಥಿ ಮುರುಳ್ಯ, ಅಶೋಕ್ ಕುಮಾರ್ ರೈ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್, ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಒ ವಿನಾಯಕ್ ನರವಾಡೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ಭಾಗವಹಿಸಿದ್ದರು.

ಮುಖ್ಯಾಂಶಗಳು

- ಕೋಮು ಹಿಂಸಾಚಾರ-ಸೂತ್ರಧಾರರ ವಿರುದ್ಧ ಕ್ರಮಕ್ಕೆ ಒತ್ತಾಯ
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೌಹಾರ್ದ ಸಮಿತಿ ರಚನೆಗೆ ಸಲಹೆ
- ಬಜರಂಗ ದಳ, ಹಿಂದೂ ಜಾಗರಣ ವೇದಿಕೆಯನ್ನು ಆಹ್ವಾನಿಸದ್ದಕ್ಕೆ ಆಕ್ಷೇಪ

> ಎರಡು ಮೂರು ಹತ್ಯೆಗಳಿಂದಾಗಿ ಇಡೀ ದೇಶದ ಗಮನ ದಕ್ಷಿಣ ಕನ್ನಡ ಜಿಲ್ಲೆಯತ್ತ ಹರಿಯಿತು. ಜನರು ಭಯದಲ್ಲೇ ಬದುಕಬೇಕಾ?. ಇಂತಹ ಸ್ಥಿತಿ ಮುಂದುವರಿಯಬೇಕಾ?. ಇದನ್ನು ಸರಿಪಡಿಸಬೇಕಲ್ಲವೇ?
>
> **ಜಿ.ಪರಮೇಶ್ವರ,** ಗೃಹ ಸಚಿವ

ಮಂಗಳೂರಿನಲ್ಲಿ ಬುಧವಾರ ನಡೆದ ಸೌಹಾರ್ದ ಸಭೆಯಲ್ಲಿ ಜಿ.ಪರಮೇಶ್ವರ ಮಾತನಾಡಿದರು. ದಿನೇಶ್ ಗುಂಡೂರಾವ್, ಯು.ಟಿ. ಖಾದರ್, ಕ್ಯಾ.ಬ್ರಿಜೇಶ್ ಚೌಟ, ಸುಧೀರ್ ಕುಮಾರ್ ರೆಡ್ಡಿ, ಅರುಣ್ ಕೆ. ಭಾಗವಹಿಸಿದ್ದರು
ಪ್ರಜಾವಾಣಿ ಚಿತ್ರ

'ಡ್ರಗ್ಸ್ ಹಾವಳಿ– ಶಿಕ್ಷಣ ಸಂಸ್ಥೆಯೇ ಹೊಣೆ'

'ಪ್ರತಿ ಶಿಕ್ಷಣ ಸಂಸ್ಥೆಯಲ್ಲಿ ಮಾದಕ ಪದಾರ್ಥ ಹಾವಳಿ ತಡೆ ಸಮಿತಿ ರಚಿಸಲು ಸೂಚನೆ ನೀಡಿದ್ದೇನೆ. ಶಿಕ್ಷಣ ಸಂಸ್ಥೆಗಳಲ್ಲಿ ಮಾದಕ ಪದಾರ್ಥ ಪತ್ತೆಯಾದರೆ ಆ ಸಂಸ್ಥೆಯವರನ್ನೂ ಹೊಣೆ ಮಾಡುತ್ತೇವೆ' ಎಂದು ಜಿ.ಪರಮೇಶ್ವರ ತಿಳಿಸಿದರು.

'ಡ್ರಗ್ಸ್ ದಂಧೆ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಯುದ್ಧ ಘೋಷಿಸಿದ್ದಾರೆ. ರಾಜ್ಯವನ್ನು 'ಉಡ್ತಾ ಪಂಜಾಬ್' ಆಗಲು ಬಿಡುವುದಿಲ್ಲ. ಮಂಗಳೂರಿನಲ್ಲಿ ಮಾತ್ರವಲ್ಲ ಇಡಿ ರಾಜ್ಯದಾದ್ಯಂತ ಡ್ರಗ್ಸ್ ಹಾವಳಿಯನ್ನು ನಿಯಂತ್ರಿಸುತ್ತೇವೆ' ಎಂದು ಹೇಳಿದರು.

ಅನುದಾನ ನೀಡದ ಕೇಂದ್ರ: ಸಚಿವ ವೈದ್ಯ

ಯಲ್ಲಾಪುರ (ಉತ್ತರ ಕನ್ನಡ): 'ಹಿಂದಿನ ಬಿಜೆಪಿ ಸರ್ಕಾರ ₹2 ಲಕ್ಷ ಕೋಟಿ ಮೌಲ್ಯದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿತ್ತು. ಉಳಿದ ಕೆಲಸವನ್ನು ಮಾಡಿಲ್ಲ. ಆ ಅವಾಂತರ ಸರಿಪಡಿಸುವ ದರಲ್ಲೇ ಎರಡು ವರ್ಷ ಕಳೆದುಹೋಗಿದೆ' ಎಂದು ಸಚಿವ ಮಂಕಾಳ ವೈದ್ಯ ತಿಳಿಸಿದರು. ಇಲ್ಲಿ ಬುಧವಾರ 'ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಕೇಂದ್ರದಿಂದ ರಾಜ್ಯಕ್ಕೆ ನ್ಯಾಯಯುತ ಅನುದಾನ ದೊರೆತಲ್ಲಿ ಇನ್ನೂ ಹೆಚ್ಚಿನ ಜನಪರ ಕಾರ್ಯಕ್ರಮ ರೂಪಿಸಬಹುದು' ಎಂದರು.

'ಬಿಜೆಪಿ ದ್ರೋಹ: ಕಾರ್ಮಿಕರ ದಂಗೆ'

ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೇವಾಲಾ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಉದ್ಯೋಗ ಸೃಷ್ಟಿಸಲು ಬಿಜೆಪಿ ಸರ್ಕಾರ ವಿಫಲವಾಗಿದೆ. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ 30 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ ಕಾರ್ಮಿಕರಿಗೆ ಮಾಡಿರುವ ದ್ರೋಹವು ದೇಶದಾದ್ಯಂತ ಕಾರ್ಮಿಕ ದಂಗೆಯನ್ನು ಹುಟ್ಟುಹಾಕಿದೆ' ಎಂದರು.

'ಸಶಸ್ತ್ರ ಪಡೆಗಳಲ್ಲಿ ಸುಮಾರು 1.55 ಲಕ್ಷ, ರೈಲ್ವೆಯಲ್ಲಿ 2.5 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಐಟಿಬಿಪಿ ಸೇರಿದಂತೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ 85 ಸಾವಿರಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಸಾರ್ವಜನಿಕ ಸೇವಾ ಸಿಬ್ಬಂದಿಯ ತುರ್ತು ಅಗತ್ಯದ ಹೊರತಾಗಿಯೂ, ಕೇಂದ್ರ ಸರ್ಕಾರ ಈ 30 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲು ಮೀನಮೇಷ ಎಣಿಸುತ್ತಿರುವುದು ಏಕೆ' ಎಂದು ಅವರು ಪ್ರಶ್ನಿಸಿದರು.

'ನಿರುದ್ಯೋಗವು ಆತಂಕಕಾರಿ ಮಟ್ಟ ತಲುಪಿದೆ. ದೇಶದಲ್ಲಿ ನಿರುದ್ಯೋಗ ಬೆಳವಣಿಗೆ ದರ ಶೇ 7.5 ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ತಿಳಿಸಿದೆ. ಇದು 45 ವರ್ಷಗಳಲ್ಲಿಯೇ ದಾಖಲಾದ ಅತಿ ಹೆಚ್ಚು ನಿರುದ್ಯೋಗ ದರ. ಈ ಬಿಕ್ಕಟ್ಟಿನ ಹೊರತಾಗಿಯೂ, ಸರ್ಕಾರವು ಪರಿಣಾಮಕಾರಿ ಕ್ರಮ ಕೈಗೊಳ್ಳಲು ವಿಫಲವಾಗಿದೆ. ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಸರ್ಕಾರದ ನಿಷ್ಕ್ರಿಯತೆಯ ಬಗ್ಗೆ ಮೋದಿಯವರ ಗಮನ ಸೆಳೆಯಲು ಕಾರ್ಮಿಕ ಸಂಘಗಳು ಪ್ರತಿಭಟನೆ ನಡೆಸುತ್ತಿವೆ' ಎಂದರು.

'ನರೇಗಾ ಯೋಜನೆಯನ್ನು ಕೇಂದ್ರ ಸರ್ಕಾರ ಸರಿಯಾಗಿ ನಿರ್ವಹಿಸದ ಕಾರಣ ಸುಮಾರು 7 ಕೋಟಿ ಜನರು ಕೆಲಸವನ್ನೇ ಕಳೆದುಕೊಂಡಿದ್ದಾರೆ. ಈ ಯೋಜನೆಯು ಬಡವರಿಗೆ ಸಹಾಯ ಮಾಡುವ ಬದಲು ಅವರನ್ನು ಕೆಲಸದಿಂದ ಹೊರಗಿಡುವ ಸಾಧನವಾಗಿ ಬಳಕೆಯಾಗುತ್ತಿದೆ' ಎಂದೂ ಆರೋಪಿಸಿದರು.

> ಆಧಾರ್- ನರೇಗಾ ಜಾಬ್ ಕಾರ್ಡ್ ಲಿಂಕ್ ಮಾಡುವುದರಿಂದ ನೋಂದಾಯಿತ ಕಾರ್ಮಿಕರಿಗೆ ಅವರ ಸರಿಯಾದ ವೇತನ ಮತ್ತು ಉದ್ಯೋಗವೇ ಇಲ್ಲದಾಗಿದೆ
>
> **ರಣದೀಪ್ ಸಿಂಗ್ ಸುರ್ಜೇವಾಲಾ,** ಎಐಸಿಸಿ ಪ್ರಧಾನ ಕಾರ್ಯದರ್ಶಿ

ವಿದ್ಯಾರ್ಥಿನಿಯರ ಸಾವು: ತನಿಖೆಗೆ ಕ್ರೈಸ್ ಆದೇಶ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕೊಪ್ಪ ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮೃತಪಟ್ಟ ಇಬ್ಬರು ಬಾಲಕಿಯರ ಸಾವಿನ ಕುರಿತು ತನಿಖೆಗೆ ನಿವೃತ್ತ ನ್ಯಾಯಾಧೀಶೆ ಎಸ್.ಶೋಭಾ ಅವರನ್ನು ನೇಮಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಆದೇಶಿಸಿದೆ.

'ತನಿಖೆ ನಡೆಸಿ ಒಂದು ತಿಂಗಳಲ್ಲಿ ವರದಿ ನೀಡಬೇಕು' ಎಂದು ಕ್ರೈಸ್ ಕಾರ್ಯನಿರ್ವಾಹಕ ನಿರ್ದೇಶಕ ಕಾಂತರಾಜು ಪಿ.ಎಸ್. ಆದೇಶದಲ್ಲಿ ತಿಳಿಸಿದ್ದಾರೆ.

ಈ ವರ್ಷದ ಜೂನ್ 29ರಂದು ವಸತಿ ಶಾಲೆ ಸ್ನಾನದ ಮನೆಯಲ್ಲಿ 9ನೇ ತರಗತಿ ವಿದ್ಯಾರ್ಥಿನಿ ಶವ ನೇಣು ಬಿಗಿದ ಸ್ಥಿತಿಯಲ್ಲಿ ದೊರೆತಿತ್ತು. ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಪೋಷಕರು, ವಿವಿಧ ಸಂಘಟನೆಗಳ ಮುಖಂಡರು ಮತ್ತು ಸ್ಥಳೀಯರು ಪ್ರತಿಭಟಿಸಿದ್ದರು. ಪ್ರಾಂಶುಪಾಲರು, ನಿಲಯ ಪಾಲಕರ ಅಮಾನತು ಮತ್ತು ತನಿಖೆಗೆ ಆಗ್ರಹಿಸಿದ್ದರು.

2023ರ ಜುಲೈ 27ರಂದು 9ನೇ ತರಗತಿಯ ಮತ್ತೊಬ್ಬ ವಿದ್ಯಾರ್ಥಿನಿ ಶವ ನೇಣು ಬಿಗಿದ ಸ್ಥಿತಿಯಲ್ಲಿ ದೊರೆತಿತ್ತು. ಎರಡು ಪ್ರಕರಣಗಳ ತನಿಖೆಗೆ ಆದೇಶಿಸಲಾಗಿದೆ. ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಎಸ್.ಶೋಭಾ ಅವರನ್ನು ತನಿಖಾಧಿಕಾರಿಯಾಗಿ, ಕ್ರೈಸ್ ಜಿಲ್ಲಾ ಸಮನ್ವಯಾಧಿಕಾರಿ ಕೆ.ಪಿ.ಶೈಲಾ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

'ಮಹಿಳಾ ವಾರ್ಡನ್ ಇಲ್ಲ. ಮಕ್ಕಳು ಭಯದ ವಾತಾವರಣದಲ್ಲಿ ಇದ್ದಾರೆ. ಸಂಕಷ್ಟ ಹೇಳಿಕೊಳ್ಳಲು ಹೆದರುತ್ತಾರೆ' ಎಂದು ಪೋಷಕರು ದೂರಿದ್ದರು. ಸೋಮವಾರವೂ ಪ್ರತಿಭಟನೆ ನಡೆದಿತ್ತು..

ಪ್ರಾಂಶುಪಾಲೆ, ನಿಲಯ ಪಾಲಕ ಅಮಾನತು

ಈ ಪ್ರಕರಣದಲ್ಲಿ ಕರ್ತವ್ಯ ಲೋಪ ಆರೋಪದಲ್ಲಿ ಪ್ರಾಂಶುಪಾಲೆ ರಜಿನಿ ಮತ್ತು ನಿಲಯ ಪಾಲಕ (ಪ್ರಭಾರ) ಸುಂದರ ನಾಯ್ಕ ಅವರನ್ನು ಅಮಾನತು ಮಾಡಿ ಮತ್ತೊಂದು ಆದೇಶವನ್ನು ಕಾಂತರಾಜು ಪಿ.ಎಸ್. ಅವರು ಹೊರಡಿಸಿದ್ದಾರೆ. ಇಬ್ಬರ ಕರ್ತವ್ಯ ಲೋಪ ಮತ್ತು ನಿರ್ಲಕ್ಷ್ಯದಿಂದ ವಿದ್ಯಾರ್ಥಿನಿ ಮೃತಪಟ್ಟಿರುವುದು ಪ್ರಾಥಮಿಕ ತನಿಖೆಯಿಂದ ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ಇಬ್ಬರನ್ನೂ ಅಮಾನತು ಮಾಡಿ ವಿದ್ಯಾರ್ಥಿನಿಯರ ಸಾವಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ನಾವು ನಡೆಸಿದ ಹೋರಾಟಕ್ಕೆ ಫಲ ಸಿಕ್ಕಿದೆ. ನಿಷ್ಪಕ್ಷಪಾತ ತನಿಖೆ ನಡೆಯಬೇಕು' ಎಂದು ಕರ್ನಾಟಕ ಜನಶಕ್ತಿ ಸಂಘಟನೆ ರಾಜ್ಯ ಕಾರ್ಯದರ್ಶಿ ಕೆ.ಎಲ್. ಅಶೋಕ್ ಹೇಳಿದರು.

ಪರ್ಸೆಂಟೇಜ್ ವಿಡಿಯೊ: ಆರ್‌ಡಿಪಿಆರ್ ಜೆಇ ಅಮಾನತು

ಕಲಬುರಗಿ: 15ನೇ ಹಣಕಾಸು ಯೋಜನೆಯ ಕಾಮಗಾರಿ ಕೈಗೊಳ್ಳಲು ಪಿಡಿಒ, ಎಇಇ, ಜೆಇಗಳಿಗೆ ಸಲ್ಲಬೇಕಾದ ಲಂಚದ ಪರ್ಸೆಂಟೇಜ್ ಕುರಿತ ವಿಡಿಯೊ ಜಾಲತಾಣದಲ್ಲಿ ಹಂಚಿಕೆಯಾದ ಹಿಂದೆಯೇ ಪಂಚಾಯತ್‌ರಾಜ್ ಎಂಜಿನಿಯರಿಂಗ್‌ನ ಚಿತ್ತಾಪುರ ಉಪ ವಿಭಾಗದ ಕಿರಿಯ ಎಂಜಿನಿಯರ್‌ನನ್ನು (ಜೆಇ) ಬುಧವಾರ ಅಮಾನತು ಮಾಡಲಾಗಿದೆ.

ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಕ್ಷೇತ್ರ, ಚಿತ್ತಾಪುರದ ಕಿರಿಯ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಶ್ರೀಪಾದ ಬಾಪುರಾವ ಕುಲಕರ್ಣಿ ಅಮಾನತುಗೊಂಡವರು.

'ಪಿಡಿಒಗೆ 5 ಪರ್ಸೆಂಟೇಜ್, ಎಇಇ 3 ಪರ್ಸೆಂಟೇಜ್, ನಮ್ಮದು 5 ಪರ್ಸೆಂಟೇಜ್ ಹಿಡಿದಿದ್ದೇನೆ' ಎಂದು ಶ್ರೀಪಾದ ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಅಮಾನತು ಆದೇಶ: 'ಕರ್ತವ್ಯದಲ್ಲಿ ನಿರ್ಲಕ್ಷ್ಯ, ಬೇಜವಾಬ್ದಾರಿ ತೋರಿದ್ದು ಸ್ಪಷ್ಟವಾಗಿ ಕಂಡುಬರುತ್ತಿದೆ. ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತು ಮಾಡಲಾಗಿದೆ' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಭಂವರ್ ಸಿಂಗ್ ಮೀನಾ ಆದೇಶ ಹೊರಡಿಸಿದ್ದಾರೆ.

ಪಿಡಿಒ ಅಮಾನತು: ಅಧ್ಯಕ್ಷರ ಸಹಿ ನಕಲು ಮಾಡಿ ಅನುದಾನ ದುರ್ಬಳಕೆ ಮಾಡಿಕೊಂಡ ಆರೋಪದಡಿ ಚಿತ್ತಾಪುರ ತಾಲ್ಲೂಕಿನ ತಾಲ್ಲೂಕಿನ ಗುಂಡಗುರ್ತಿಯ ಪ್ರಭಾರ ಪಿಡಿಒ ಮಂಜುಶ್ರೀ ಜಹಾಗಿರದಾರ ಅವರನ್ನು ಸಿಇಒ ಅಮಾನತು ಮಾಡಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಸಿದ್ದರಾಮಯ್ಯ ನೇತೃತ್ವದ ನಿಯೋಗ ಮನವಿ

ಎರಡು ರಕ್ಷಣಾ ಕಾರಿಡಾರ್‌ಗೆ ಕೋರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಗ್ರಾಮಾಂತರ-ಕೋಲಾರ-ಚಿಕ್ಕಬಳ್ಳಾಪುರ ಮತ್ತು ಹುಬ್ಬಳ್ಳಿ ಧಾರವಾಡ-ಬೆಳಗಾವಿ-ವಿಜಯಪುರ ಜಿಲ್ಲೆಗಳಿಗೆ ಎರಡು ಪ್ರತ್ಯೇಕ ರಕ್ಷಣಾ ಕಾರಿಡಾರ್‌ಗಳನ್ನು ಮಂಜೂರು ಮಾಡಬೇಕೆಂದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ನಿಯೋಗವು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಬುಧವಾರ ಇಲ್ಲಿ ಮನವಿ ಸಲ್ಲಿಸಿತು.

ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಿಗೆ ಒಂದೊಂದು ರಕ್ಷಣಾ ಕಾರಿಡಾರ್ ಮಂಜೂರು ಮಾಡಿದರೆ, ಇದು ಮೇಕ್ ಇನ್ ಇಂಡಿಯಾ ಉಪಕ್ರಮಕ್ಕೂ ಬಲ ತುಂಬುತ್ತದೆ ಎಂದು ಸಿದ್ದರಾಮಯ್ಯ ಮನದಟ್ಟು ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಪೂರಕ ಮಾಹಿತಿ ನೀಡಿದರು.

ಉತ್ತರ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಬಾಲೂ ಪೋರ್ಜ್, ಏಕಸ್, ಬಿಕಾರ್ ಏರೋಸ್ಪೇಸ್, ವಾಲ್‌ಚಂದ್ ನಗರ್ ಇಂಡಸ್ಟ್ರೀಸ್ ಮುಂತಾದವು ನೆಲೆಯೂರಿವೆ. ಜತೆಗೆ ಬೆಳಗಾವಿಯಲ್ಲಿ 250 ಎಕರೆಯಲ್ಲಿ ಪ್ರಿಸಿಶನ್ ಉತ್ಪಾದನೆಯ ಎಸ್‌ಇಝಡ್ ಸಕ್ರಿಯವಾಗಿದೆ ಎಂದು ತಿಳಿಸಿದರು.

ದಕ್ಷಿಣ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಸಾರ್ವಜನಿಕ ವಲಯದ ಎಚ್‌ಎಎಲ್, ಕಾಲಿನ್ಸ್ ಏರೋಸ್ಪೇಸ್, ಡೈನಮ್ಯಾಟಿಕ್ ಟೆಕ್ನಾಲಜೀಸ್, ಸೆಂಟಮ್, ಸಾಸ್ಮೋಸ್, ಬೆಲ್ಲಾಟ್ರಿಕ್ಸ್ ಮುಂತಾದವು ಇವೆ. ಇವುಗಳೊಂದಿಗೆ ಟಿಎಎಸ್‌ಎಲ್ ತನ್ನ ಅಂತಿಮ ಜೋಡಣಾ ಘಟಕ ಆರಂಭಿಸುತ್ತಿದೆ. ಏರ್ ಇಂಡಿಯಾ ಮತ್ತು ಇಂಡಿಗೋ ಸಾವಿರಾರು ಕೋಟಿ ರೂಪಾಯಿ ಬಂಡವಾಳ ಹೂಡಿಕೆಯೊಂದಿಗೆ ತಮ್ಮ ಎಂಆರ್‌ಒ ಘಟಕಗಳನ್ನು ಬೆಂಗಳೂರಿನ ಸಮೀಪದಲ್ಲಿ ಸ್ಥಾಪಿಸುತ್ತಿವೆ. ದೇವನಹಳ್ಳಿಯಲ್ಲಿ 2 ಸಾವಿರ ಎಕರೆ ವಿಸ್ತಾರದ ಹೈಟೆಕ್ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್ ಇದೆ. ಈ ಭಾಗದಲ್ಲಿ ದೇಶದ ಏರ್‌ಕ್ರಾಫ್ಟ್ ಮತ್ತು ಸ್ಪೇಸ್‌ಕ್ರಾಫ್ಟ್ ವಲಯದ ಶೇಕಡ 25ರಷ್ಟು ತಯಾರಿಕೆ ನಡೆಯುತ್ತಿದೆ. ವಿಮಾನ ಮತ್ತು ಹೆಲಿಕಾಪ್ಟರ್ ತಯಾರಿಕೆಯಲ್ಲಿ ರಾಜ್ಯದ ಕೊಡುಗೆ ಶೇ 67ರಷ್ಟಿದೆ. ಇವೆಲ್ಲವನ್ನೂ ಪರಿಗಣಿಸಿ, ಕಾರಿಡಾರ್‌ಗಳನ್ನು ಮಂಜೂರು ಮಾಡಬೇಕೆಂದು ನಿಯೋಗ ಒತ್ತಾಯಿಸಿತು.

ನಿಯೋಗದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್, ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಇದ್ದರು.

ಕೇಂದ್ರದಿಂದ ಸಕಾರಾತ್ಮಕ ಸ್ಪಂದನೆ: ಸಿಎಂ

ಮೈಸೂರು ದಸರಾ ಉತ್ಸವದಲ್ಲಿ ವೈಮಾನಿಕ ಪ್ರದರ್ಶನ ಹಾಗೂ ಬೆಂಗಳೂರಿನಲ್ಲಿ ರಕ್ಷಣಾ ಕಾರಿಡಾರ್ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ರಕ್ಷಣಾ ಇಲಾಖೆಯ ಜಾಗ ನೀಡುವ ಸರ್ಕಾರದ ಮನವಿಗಳಿಗೆ ಕೇಂದ್ರ ರಕ್ಷಣಾ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಸಿದ್ದರಾಮಯ್ಯ ತಿಳಿಸಿದರು.

ರಾಜನಾಥ ಸಿಂಗ್ ಅವರೊಂದಿಗೆ ಸಿದ್ದರಾಮಯ್ಯ ಚರ್ಚಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗೆ ಸಮಯ ಕೋರಲಾಗಿದ್ದು, ಗುರುವಾರ ಭೇಟಿಯಾಗುವ ಸಾಧ್ಯತೆಯಿದೆ ಎಂದರು.

ಬೇಡಿಕೆ ಕುಸಿದ ಕೋರ್ಸ್‌ಗಳ ಶುಲ್ಕ ಶೇ 50 ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಕ್ಯಾನಿಕಲ್, ಸಿವಿಲ್ ಎಂಜಿನಿಯರಿಂಗ್ ಸೇರಿದಂತೆ ಕೆಲವು ಕೋರ್ಸ್‌ಗಳ ಶುಲ್ಕವನ್ನು 2025–26ನೇ ಸಾಲಿನಿಂದ ಅನ್ವಯವಾಗುವಂತೆ ಶೇ 50ರಷ್ಟು ಕಡಿತ ಮಾಡಿ, ಬೇಡಿಕೆ ಇರುವ ಕೋರ್ಸ್‌ಗಳ ಶುಲ್ಕವನ್ನು ಶೇ 7.5ರಷ್ಟು ಹೆಚ್ಚಳ ಮಾಡಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಬೇಡಿಕೆ ಕುಸಿದು, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಜವಳಿ ತಂತ್ರಜ್ಞಾನ, ರೇಷ್ಮೆ ತಂತ್ರಜ್ಞಾನ ಮತ್ತು ಆಟೋಮೊಬೈಲ್ ಕೋರ್ಸ್‌ಗಳಿಗೂ ಶುಲ್ಕ ಕಡಿತದ ಸೌಲಭ್ಯ ಸಿಗಲಿದೆ. ಶುಲ್ಕ ವಿನಾಯಿತಿ ಸೌಲಭ್ಯ ಪಡೆಯಲು ಬಯಸುವ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಕೆಇಎಗೆ ಮನವಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಕಳೆದ ವರ್ಷ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ 5,723 ಸೀಟುಗಳಿದ್ದು, ಅವುಗಳಲ್ಲಿ 2,883 ಸೀಟುಗಳು ಹಂಚಿಕೆಯಾಗಿದ್ದವು. ಮೆಕ್ಯಾನಿಕಲ್ ವಿಭಾಗದ 5,977 ಸೀಟುಗಳಲ್ಲಿ 2,783 ಸೀಟುಗಳು ಭರ್ತಿಯಾಗಿದ್ದವು.

ಕೆಲ ಕೋರ್ಸ್‌ಗಳ ಶುಲ್ಕ ಶೇ 7.5 ಹೆಚ್ಚಳ: ವಾಸ್ತುಶಿಲ್ಪ ಶಾಸ್ತ್ರ ಸೇರಿದಂತೆ ಕೆಲ ಕೋರ್ಸ್‌ಗಳ ಶುಲ್ಕವನ್ನು ಖಾಸಗಿ ಕಾಲೇಜುಗಳಿಗೆ ಶೇ 7.5ರಷ್ಟು, ಸರ್ಕಾರಿ ಕಾಲೇಜುಗಳಿಗೆ ಶೇ 5ರಷ್ಟು ಹೆಚ್ಚಿಸಲಾಗಿದೆ. ಈ ಶುಲ್ಕವು ವಿಶ್ವವಿದ್ಯಾಲಯ ನೋಂದಣಿ ಮತ್ತು ಇತರ ಸಂಸ್ಕರಣಾ ಶುಲ್ಕಗಳನ್ನು ಹೊರತುಪಡಿಸಿದೆ.

ಕಳೆದ ವರ್ಷ ಟೈಪ್-1 ಖಾಸಗಿ ಕಾಲೇಜುಗಳಲ್ಲಿ ಸಿಇಟಿ ಸೀಟುಗಳಿಗೆ ₹76,135, ಟೈಪ್-2 ಕಾಲೇಜುಗಳಿಗೆ ₹84,596, ಕಾಮೆಡ್-ಕೆ ಸೀಟುಗಳಿಗೆ ಟೈಪ್-1 ಕಾಲೇಜುಗಳಲ್ಲಿ ₹1,86,111 ಮತ್ತು ಟೈಪ್-2 ಕಾಲೇಜುಗಳಲ್ಲಿ ₹2,61,477 ಶುಲ್ಕವಿತ್ತು.

ಸೂಪರ್‌ನ್ಯೂಮರರಿ ಕೋಟಾದ ಅಡಿ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಅಂತಹ ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿ ₹20,000 ಶುಲ್ಕ ವಿಧಿಸಲು ಅವಕಾಶ ನೀಡಲಾಗಿದೆ.

ಸಿಇಟಿ: ಸೀಟು ಹಂಚಿಕೆ ಪ್ರಕ್ರಿಯೆ ಆರಂಭ

ಬೆಂಗಳೂರು: ಎಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ ಸೇರಿದಂತೆ ವಿವಿಧ ವೃತ್ತಿ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಜುಲೈ 9ರಿಂದ ಆರಂಭಿಸಿದ್ದು, ಆಯ್ಕೆಗಳನ್ನು (ಆಪ್ಷನ್ಸ್) ದಾಖಲಿಸಲು ಜುಲೈ 15ರವರೆಗೆ ಅವಕಾಶ ನೀಡಿದೆ.

ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ, ಬಿ.ಎಸ್‌ಸಿ ನರ್ಸಿಂಗ್, ವಾಸ್ತುಶಿಲ್ಪ ಶಾಸ್ತ್ರ, ಯೋಗ ಮತ್ತು ನ್ಯಾಚುರೋಪತಿ ಕೋರ್ಸ್‌ಗಳ ಸೀಟು ಲಭ್ಯತೆಯ ಪಟ್ಟಿ (ಸೀಟ್ ಮ್ಯಾಟ್ರಿಕ್ಸ್) ತಡವಾಗಿದ್ದು, ಪಟ್ಟಿ ದೊರೆತ ನಂತರ ಆ ಕೋರ್ಸ್‌ಗಳ ಸೀಟು ಹಂಚಿಕೆ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಅಣಕು ಫಲಿತಾಂಶವನ್ನು ಜುಲೈ 19ರಂದು ಪ್ರಕಟಿಸಲಾಗುವುದು. ಆದ್ಯತೆಗಳನ್ನು ಅದಲು-ಬದಲು ಮಾಡಿಕೊಳ್ಳಲು ಜುಲೈ 22ರವರೆಗೆ ಅವಕಾಶ ಇರುತ್ತದೆ. ಜುಲೈ 25ರಂದು ಅಂತಿಮ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಅಭ್ಯರ್ಥಿಗಳು ಸೀಟು ಲಭ್ಯತೆ ಪಟ್ಟಿ ನೋಡಿಕೊಂಡು ಆಯ್ಕೆಗಳನ್ನು ದಾಖಲಿಸುವಾಗ ಆದ್ಯತಾ ಕ್ರಮಗಳನ್ನು ಅನುಸರಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಿಇಟಿ-25ರ ಸೀಟು ಹಂಚಿಕೆಯ ಮಾಹಿತಿ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸಬೇಕು. ಕೆಇಎ ವಿಕಸನ ಯೂಟ್ಯೂಬ್ ಚಾನಲ್‌ನಲ್ಲಿ ಇರುವ ವಿಡಿಯೊ ನೋಡಬಹುದು ಎಂದು ಸಲಹೆ ನೀಡಿದ್ದಾರೆ.

ರಾಷ್ಟ್ರೀಯ ವೈದ್ಯಕೀಯ ಮಂಡಳಿ ಮತ್ತು ವೈದ್ಯಕೀಯ ಕೌನ್ಸೆಲಿಂಗ್, ವೈದ್ಯಕೀಯ ಶಿಕ್ಷಣ ಇಲಾಖೆ ಹೊರಡಿಸುವ ಸೂಚನೆಗಳ ಪ್ರಕಾರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ನಡೆಯಲಿದೆ ಎಂದು ಹೇಳಿದ್ದಾರೆ.

ಕಾಲೇಜುಗಳು	ಶುಲ್ಕದ ಮೊತ್ತ
ಟೈಪ್ -1 ಖಾಸಗಿ ಕಾಲೇಜು (ಸಿಇಟಿ)	₹81,800
ಟೈಪ್ -2 ಖಾಸಗಿ ಕಾಲೇಜು (ಸಿಇಟಿ)	₹91,000
ಟೈಪ್ -1 ಕಾಲೇಜು (ಕಾಮೆಡ್-ಕೆ)	₹2 ಲಕ್ಷ
ಟೈಪ್ -2 ಕಾಲೇಜು (ಕಾಮೆಡ್-ಕೆ)	₹2.81 ಲಕ್ಷ
ಅನುದಾನಿತ ಕಾಲೇಜು	₹44,200
ವಿಶ್ವೇಶ್ವರಯ್ಯ ತಾಂತ್ರಿಕ ವಿವಿ	₹49,600

ಪ್ರತ್ಯೇಕ ಪ್ರಕರಣ: 7 ಮಂದಿ ಹಠಾತ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕ ಪ್ರಕರಣಗಳಲ್ಲಿ ಬುಧವಾರ 4ನೇ ತರಗತಿ ವಿದ್ಯಾರ್ಥಿ ಸೇರಿ ಏಳು ಮಂದಿ ಹಠಾತ್ ಸಾವಿಗೀಡಾಗಿದ್ದಾರೆ. ಹೃದಯಾಘಾತ ಕಾರಣ ಎನ್ನಲಾಗಿದೆ.

ರಾಮನಗರ ವರದಿ: ಹೃದಯಾಘಾತದಿಂದ ಜಿಲ್ಲೆಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಕನಕಪುರ ತಾಲ್ಲೂಕಿನ ಸಂಗಮ ವನ್ಯಜೀವಿ ವಲಯದ ಸ್ಥಳೀಯ ಪರಿಸರ ಅಭಿವೃದ್ಧಿ ಸಮಿತಿ ನೌಕರ ಮಾದೇಶ ನಾಯಕ (38) ಮತ್ತು ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿಯ ಗೊಲ್ಲರದೊಡ್ಡಿಯ ಕೂಲಿ ಕಾರ್ಮಿಕ ಗಿರೀಶ್ (25) ಮೃತರು.



ಮೂವರ ಸಾವು (ದಾವಣಗೆರೆ ವರದಿ): ಜಿಲ್ಲೆಯಲ್ಲಿ ಎರಡು ದಿನಗಳ ಅವಧಿಯಲ್ಲಿ ಹೃದಯಸಂಬಂಧಿ ಕಾಯಿಲೆಗಳಿಂದ ಮೂವರು ಮೃತಪಟ್ಟಿದ್ದಾರೆ. ದಾವಣಗೆರೆಯ ಜಯನಗರದ ಅಕ್ಷಯ್ (22), ಚಿಕ್ಕನಹಳ್ಳಿಯ ಹರೀಶ್ (54) ಹಾಗೂ ತಾಲ್ಲೂಕಿನ ನಾಗರಕಟ್ಟೆ ಗ್ರಾಮದ ಮಂಜ್ಯಾ ನಾಯ್ಕ (38) ಮೃತರು.

ಬುಧವಾರ ಬೆಳಿಗ್ಗೆ ಮನೆಯಲ್ಲಿ ಅಕ್ಷಯ್ ಏಕಾಏಕಿ ಕುಸಿದು ಬಿದ್ದಿದ್ದರೆ. ಹರೀಶ್ ಅವರಿಗೆ ನಸುಕಿನಲ್ಲಿ ಎದೆನೋವು ಕಾಣಿಸಿಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.

ನಾಗರಕಟ್ಟೆಯ ಮಂಜ್ಯಾ ನಾಯ್ಕ ಅವರು ಮಂಗಳವಾರ ಗ್ರಾಮದ ಬಳಿ ಆಟೊ ಚಾಲನೆ ಮಾಡುವಾಗಲೇ ಹೃದಯಾಘಾತ ಸಂಭವಿಸಿ ಮೃತಪಟ್ಟಿದ್ದಾರೆ ಎಂದು ಮಂಜ್ಯಾ ನಾಯ್ಕ ಅವರ ಕುಟುಂಬದ ಸದಸ್ಯರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

4ನೇ ತರಗತಿ ಬಾಲಕ ಸಾವು

ಗುಂಡ್ಲುಪೇಟೆ (ಚಾಮರಾಜನಗರ): ಪಟ್ಟಣದ ಕುರಬಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 4ನೇ ತರಗತಿ ವಿದ್ಯಾರ್ಥಿ ಮನೋಜ್ ಕುಮಾರ್ (10) ಮೃತಪಟ್ಟಿದ್ದಾನೆ.

ಈತ ದೊಡ್ಡಹುಂಡಿ ಗ್ರಾಮದ ದಿ.ನಾಗರಾಜು– ನಾಗರತ್ನಾ ದಂಪತಿ ಪುತ್ರ.

ತರಗತಿಯಲ್ಲಿ ಬುಧವಾರ ಶಾಲೆಯಲ್ಲಿ ಪಾಠ ಕೇಳುವಾಗ ಕುಸಿದುಬಿದ್ದಿದ್ದು, ಆಸ್ಪತ್ರೆಗೆ ಒಯ್ಯುವ ಮಾರ್ಗದಲ್ಲಿ ಮೃತಪಟ್ಟನು. ಹೃದಯ ಸಂಬಂಧಿ ಕಾಯಿಲೆ ಇತ್ತು. ಮೈಸೂರಿನ ಜಯದೇವ, ಅಪೋಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು ಎಂದು ಸಂಬಂಧಿಕರು ತಿಳಿಸಿದ್ದಾರೆ.

ಕುಸಿದುಬಿದ್ದು ಯುವತಿ ಸಾವು

ಧಾರವಾಡ: ಮನೆಯಲ್ಲಿ ಕುಸಿದುಬಿದ್ದಿದ್ದ ಸ್ಥಳೀಯ ನಿವಾಸಿ ಜೀವಿತಾ ಕುಸುಗೂರ (26) ಎಂಬವರು ಆಸ್ಪತ್ರೆಗೆ ಒಯ್ಯುವ ಮಾರ್ಗದಲ್ಲಿ ಮೃತಪಟ್ಟಿದ್ದಾರೆ.

'ಜ್ವರ, ನೆಗಡಿಯಿಂದ ಬಳಲುತ್ತಿದ್ದ ಜೀವಿತಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಮಂಗಳವಾರ ಬೆಳಿಗ್ಗೆ ಮನೆಯಲ್ಲಿ ಕುಸಿದುಬಿದ್ದರು. ಮರಣೋತ್ತರ ಪರೀಕ್ಷೆ ವರದಿ ಬಳಿಕಷ್ಟೇ ಸಾವಿಗೆ ಕಾರಣ ಗೊತ್ತಾಗಲಿದೆ' ಎಂದು ಡಿಎಚ್‌ಒ ಡಾ.ಎಸ್.ಎಂ.ಹೊನಕೇರಿ ತಿಳಿಸಿದರು.

ಕೃಷಿವಿಜ್ಞಾನ ಸ್ನಾತಕೋತ್ತರ ಪದವೀಧರೆಯಾಗಿದ್ದರು. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸಿದ್ದರು.

ಜನೌಷಧಿ ಕೇಂದ್ರ: ಬಲವಂತದ ಕ್ರಮ ಸಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಎಲ್ಲ ಜನೌಷಧ ಕೇಂದ್ರಗಳನ್ನು ನಿಷೇಧಿಸಿ ಆರೋಗ್ಯ ಇಲಾಖೆ ಹೊರಡಿಸಿರುವ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಸಲ್ಲಿಸಲಾಗಿದ್ದ ರಿಟ್ ಅರ್ಜಿಗಳನ್ನು ಕಲಬುರಗಿ ಪೀಠದಲ್ಲಿನ ನ್ಯಾಯಮೂರ್ತಿ ಎಂ.ಐ.ಅರುಣ್ ಮತ್ತು ಬೆಂಗಳೂರು ಪ್ರಧಾನ ಪೀಠದಲ್ಲಿನ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯ ಪೀಠಗಳು ವಿಚಾರಣೆ ನಡೆಸಿವೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಅನಿರುದ್ಧ ಎ.ಕುಲಕರ್ಣಿ ವಾದ ಮಂಡಿಸಿ, 'ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧಿ ನಿಷೇಧಿಸಿ, ಇನ್ನು ಮುಂದೆ ಈ ಕೇಂದ್ರಗಳ ಹಂಚಿಕೆ ಸ್ಥಗಿತಗೊಳಿಬೇಕು ಎಂದು ರಾಜ್ಯ ಸರ್ಕಾರ 2025ರ ಮೇ 14ರಂದು ಹೊರಡಿಸಿರುವ ಆದೇಶವು ಏಕಪಕ್ಷೀಯ ವಾಗಿದ್ದು, ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಆದ್ದರಿಂದ, ಪ್ರತಿವಾದಿಗಳ ಪರವಾದ ಯಾವುದೇ ಏಜೆಂಟರು ಬಲವಂತದ ಕ್ರಮಕ್ಕೆ ಮುಂದಾಗದಂತೆ ಆದೇಶಿಸಬೇಕು' ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿರುವ ನ್ಯಾಯಪೀಠಗಳು, 'ಅರ್ಜಿದಾರರ ಜನೌಷಧಿ ಕೇಂದ್ರಗಳನ್ನು ಪ್ರತಿಬಂಧಿಸಬಾರದು' ಎಂದು ಆದೇಶಿಸಿ, ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿದೆ.

> **ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಜನೌಷಧ ಕೇಂದ್ರಗಳನ್ನು ಮುಚ್ಚುವ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ಇದೇ ಅಂತಿಮವಲ್ಲ. ವಕೀಲರು ಕೋರ್ಟ್‌ಗೆ ಮಾಹಿತಿ ನೀಡುವರು.**
> **ಡಾ.ಶರಣಪ್ರಕಾಶ ಪಾಟೀಲ**, ವೈದ್ಯಕೀಯ ಶಿಕ್ಷಣ ಸಚಿವ

> **ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದ್ದು, ಖಾಸಗಿ ಲಾಬಿಗೆ ಮಣಿದ ಸರ್ಕಾರದ ನಡೆಗೆ ಹಿನ್ನಡೆಯಾಗಿದೆ. ಜನೌಷಧ ಕೇಂದ್ರಗಳ ಸ್ಥಗಿತದ ವಿರುದ್ಧ ಬಿಜೆಪಿ ಹೋರಾಟ ಮಾಡಿತ್ತು.**
> **ಆರ್. ಅಶೋಕ,** ವಿಪಕ್ಷ ನಾಯಕ

रजिस्ट्री.सं. डी.एल.- 33004/99 REGD. NO. D. L.-33004/99

सत्यमेव जयते

भारत का राजपत्र
The Gazette of India

सी.जी.-डी.एल.-अ.- -02072025-264291
CG-DL-E- -02072025-264291

असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 2873] NEW DELHI, TUESDAY, JULY 1, 2025/ASHADHA 10, 1947

ಭಾರತ ಸರಕಾರದ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ ನವದೆಹಲಿ, ದಿನಾಂಕ: 30ನೇ ಜೂನ 2025

ಎಸ್.ಓ.ನಂ. 2940(ಇ) ಕೇಂದ್ರ ಸರಕಾರಕ್ಕೆ ಪ್ರಸ್ತುತ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–548ಬಿ ರಲ್ಲಿ (ವಿಜಯಪುರ–ಸಂಕೇಶ್ವರ ಸೆಕ್ಷನ್) ಕಿಮೀ. 140.200 (ಚಿಕ್ಕೋಡಿ ಹತ್ತಿರ) ರಿಂದ ಕಿಮೀ. 167.326 (ಗೋಟೂರ) ರವರೆಗೆ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂದು ಕಂಡುಬಂದಿರುತ್ತದೆ, ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ಕಲಂ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನ ಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂ–ಮಾಲೀಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಇದ್ದವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ಭೂ–ಸ್ವಾಧೀನಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ಉಪ ವಿಭಾಗ ಚಿಕ್ಕೋಡಿ ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಯಿಸಿ ಈ ಬಗ್ಗೆ ಇತರ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು. ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ನಿಯಮ 3ಸಿ (2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ. ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಇದ್ದವರು ಸಕ್ಷಮ ಪ್ರಾಧಿಕಾರಿಯವರ ಕಚೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ: ಈ ಕೆಳಕಂಡ ಶೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯ ವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಸಹಿ/–
ಭೂ–ಸ್ವಾಧೀನಾಧಿಕಾರಿಗಳು, ಹಾಗೂ ಸಹಾಯಕ ಆಯುಕ್ತರು
ಉಪ ವಿಭಾಗ ಚಿಕ್ಕೋಡಿ.

ಅನುಸೂಚಿ

ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ಹುಕ್ಕೇರಿ ತಾಲೂಕಿನಲ್ಲಿ ಹಾಯ್ದು ಹೋಗಿರುವ (ವಿಜಯಪುರ–ಸಂಕೇಶ್ವರ ವಿಭಾಗ) ರಾಷ್ಟ್ರೀಯ ಹೆದ್ದಾರಿ–548ಬಿ ರ ಕಿಮೀ.140.200 (ಚಿಕ್ಕೋಡಿ ಹತ್ತಿರ) ರಿಂದ 167.326 (ಗೋಟೂರ) ರ ವರೆಗೆ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ ಜಿಲ್ಲೆ : ಬೆಳಗಾವಿ

ಕ್ರ ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಚದರ ಮೀಟರಗಳಲ್ಲಿ)	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)
1	2	3	4	5	6
ತಾಲೂಕ: ಚಿಕ್ಕೋಡಿ					ಗ್ರಾಮ: ಚಿಕ್ಕೋಡಿ
1	117	ಖಾಸಗಿ	ಖುಷ್ಕಿ	2204.47	0.220447
2	122	ಖಾಸಗಿ	ಖುಷ್ಕಿ	2869.302	0.2869302
3	124	ಖಾಸಗಿ	ಖುಷ್ಕಿ	3.519	0.0003519
4	125	ಖಾಸಗಿ	ಖುಷ್ಕಿ	803.593	0.0803593
5	126	ಖಾಸಗಿ	ತರಿ	289.56	0.028956
6	196	ಖಾಸಗಿ	ಖುಷ್ಕಿ	270.04	0.027004
7	197	ಖಾಸಗಿ	ತರಿ	3978.03	0.397803
8	201	ಖಾಸಗಿ	ಖುಷ್ಕಿ	2839.856	0.2839856
9	217	ಖಾಸಗಿ	ತರಿ	255.511	0.0255511
10	226	ಖಾಸಗಿ	ಖುಷ್ಕಿ	460.421	0.0460421
11	241	ಖಾಸಗಿ	ತರಿ	9.089	0.0009089
12	38	ಸರಕಾರಿ	ತರಿ	915.49	0.091549
13	44	ಖಾಸಗಿ	ಖುಷ್ಕಿ	37.09	0.003709
14	54	ಖಾಸಗಿ	ಖುಷ್ಕಿ	6.508	0.0006508
15	61	ಖಾಸಗಿ	ಖುಷ್ಕಿ	365.55	0.036555
16	62	ಖಾಸಗಿ	ತರಿ	79.471	0.0079471
17	63	ಖಾಸಗಿ	ತರಿ	362.641	0.0362641
ತಾಲೂಕ: ಚಿಕ್ಕೋಡಿ					ಗ್ರಾಮ: ಕರೋಶಿ
18	112	ಖಾಸಗಿ	ಖುಷ್ಕಿ	33.281	0.0033281
19	114	ಖಾಸಗಿ	ಖುಷ್ಕಿ	117.452	0.0117452
20	115	ಖಾಸಗಿ	ಖುಷ್ಕಿ	28.84	0.002884
21	134	ಖಾಸಗಿ	ತರಿ	575.022	0.0575022
22	135	ಖಾಸಗಿ	ಖುಷ್ಕಿ	236.494	0.0236494
23	145	ಖಾಸಗಿ	ತರಿ	1226.15	0.122615
24	146	ಖಾಸಗಿ	ತರಿ	3070.45	0.307045
ತಾಲೂಕ: ಚಿಕ್ಕೋಡಿ					ಗ್ರಾಮ: ಜೈನಾಪುರ
25	106	ಖಾಸಗಿ	ಖುಷ್ಕಿ	1610.8	0.16108
26	107	ಖಾಸಗಿ	ಖುಷ್ಕಿ	662.828	0.0662828
27	117	ಖಾಸಗಿ	ಖುಷ್ಕಿ	30.532	0.0030532
28	118	ಖಾಸಗಿ	ಖುಷ್ಕಿ	91.059	0.0091059
29	119	ಖಾಸಗಿ	ತರಿ	22.19	0.002219
30	121	ಖಾಸಗಿ	ಖುಷ್ಕಿ	123.209	0.0123209
31	238	ಖಾಸಗಿ	ತರಿ	149.037	0.0149037
32	241	ಖಾಸಗಿ	ಖುಷ್ಕಿ	4.518	0.0004518
33	243	ಖಾಸಗಿ	ತರಿ	2666.57	0.266657
34	244	ಖಾಸಗಿ	ತರಿ	3458.49	0.345849
35	246	ಖಾಸಗಿ	ಖುಷ್ಕಿ	69.459	0.0069459
36	248	ಖಾಸಗಿ	ಖುಷ್ಕಿ	167.349	0.0167349
37	256	ಖಾಸಗಿ	ತರಿ	40.945	0.0040945
38	257	ಖಾಸಗಿ	ಖುಷ್ಕಿ	181.196	0.0181196
39	263	ಖಾಸಗಿ	ಖುಷ್ಕಿ	29.222	0.0029222
40	266	ಖಾಸಗಿ	ಖುಷ್ಕಿ	118.463	0.0118463
41	268	ಖಾಸಗಿ	ಖುಷ್ಕಿ	122.552	0.0122552
42	284	ಖಾಸಗಿ	ತರಿ	1.583	0.0001583
43	286	ಖಾಸಗಿ	ಖುಷ್ಕಿ	342.73	0.034273
44	288	ಖಾಸಗಿ	ಖುಷ್ಕಿ	18.18	0.001818
45	295	ಖಾಸಗಿ	ಖುಷ್ಕಿ	61.151	0.0061151
46	296	ಖಾಸಗಿ	ಖುಷ್ಕಿ	95.064	0.0095064
47	300	ಖಾಸಗಿ	ಖುಷ್ಕಿ	1310.48	0.131048
48	301	ಖಾಸಗಿ	ಖುಷ್ಕಿ	598.12	0.059812
49	54	ಸರಕಾರಿ	ಖುಷ್ಕಿ	1572.569	0.1572569
50	55	ಖಾಸಗಿ	ತರಿ	787.41	0.078741
51	67	ಖಾಸಗಿ	ಖುಷ್ಕಿ	137.372	0.0137372
52	73	ಖಾಸಗಿ	ತರಿ	232.124	0.0232124
53	74	ಖಾಸಗಿ	ತರಿ	199.052	0.0199052
54	94	ಖಾಸಗಿ	ಖುಷ್ಕಿ	1246.149	0.1246149
55	95	ಖಾಸಗಿ	ಖುಷ್ಕಿ	2377.224	0.2377224
ತಾಲೂಕ: ಚಿಕ್ಕೋಡಿ					ಗ್ರಾಮ: ಮಜಲಟ್ಟಿ
56	32	ಸರಕಾರಿ	ತರಿ	746.34	0.074634
ತಾಲೂಕ: ಚಿಕ್ಕೋಡಿ					ಗ್ರಾಮ: ಹಿರೇಕೊಡಿ
57	343	ಖಾಸಗಿ	ಖುಷ್ಕಿ	4057.35	0.405735
58	384	ಖಾಸಗಿ	ತರಿ	2205.12	0.220512
59	392	ಖಾಸಗಿ	ಖುಷ್ಕಿ/ವಾಣಿಜ್ಯ	23453.909	2.3453909
60	399	ಖಾಸಗಿ	ತರಿ/ವಾಣಿಜ್ಯ	5161.456	0.5161456
61	401	ಖಾಸಗಿ	ತರಿ/ವಾಣಿಜ್ಯ	13364.331	1.3364331
62	402	ಖಾಸಗಿ	ತರಿ/ವಾಣಿಜ್ಯ	19115.228	1.9115228
63	404	ಖಾಸಗಿ	ತರಿ/ವಾಣಿಜ್ಯ	8531.673	0.8531673
64	405	ಖಾಸಗಿ	ತರಿ	1919.952	0.1919952
ತಾಲೂಕ : ಹುಕ್ಕೇರಿ					ಗ್ರಾಮ: ಅಮ್ಮಣಗಿ
65	159	ಖಾಸಗಿ	ತರಿ	13.857	0.0013857
66	160	ಖಾಸಗಿ	ತರಿ	145.8	0.01458
67	161	ಖಾಸಗಿ	ತರಿ	585.34	0.058534
68	162	ಖಾಸಗಿ	ತರಿ	40.442	0.0040442
69	163	ಖಾಸಗಿ	ತರಿ	17.689	0.0017689
70	164	ಖಾಸಗಿ	ತರಿ	36.96	0.003696
71	187	ಖಾಸಗಿ	ತರಿ	60.808	0.0060808
72	188	ಖಾಸಗಿ	ತರಿ	78.202	0.0078202
73	190	ಖಾಸಗಿ	ತರಿ	44.857	0.0044857
74	193	ಖಾಸಗಿ	ತರಿ	9.866	0.0009866
75	194	ಖಾಸಗಿ	ತರಿ	151.854	0.0151854
76	197	ಖಾಸಗಿ	ತರಿ	23.645	0.0023645
77	201	ಖಾಸಗಿ	ತರಿ	424.230	0.042423
ತಾಲೂಕ: ಹುಕ್ಕೇರಿ					ಗ್ರಾಮ: ಕಮತನೂರ
78	1	ಖಾಸಗಿ	ತರಿ	209.089	0.0209089
79	11	ಖಾಸಗಿ	ತರಿ	11.363	0.0011363
80	12	ಖಾಸಗಿ	ತರಿ	51.175	0.0051175
81	182	ಖಾಸಗಿ	ತರಿ	325.949	0.0325949
82	183	ಖಾಸಗಿ	ತರಿ	65.342	0.0065342
83	184	ಖಾಸಗಿ	ತರಿ	16.452	0.0016452
84	194	ಖಾಸಗಿ	ತರಿ	293.11	0.029311
85	202	ಖಾಸಗಿ	ತರಿ	235.031	0.0235031
86	210	ಖಾಸಗಿ	ತರಿ	58.472	0.0058472
87	212	ಖಾಸಗಿ	ತರಿ	128.593	0.0128593
88	217	ಖಾಸಗಿ	ತರಿ	17.924	0.0017924
89	220	ಖಾಸಗಿ	ತರಿ	153.294	0.0153294
90	24	ಖಾಸಗಿ	ತರಿ	72.766	0.0072766
91	3	ಖಾಸಗಿ	ತರಿ	245.548	0.0245548
92	7	ಖಾಸಗಿ	ತರಿ	4.468	0.0004468
93	9	ಖಾಸಗಿ	ತರಿ	79.349	0.0079349
94	ಗಾಂವಠಾಣಾ			8655.329	0.8655329
ತಾಲೂಕ: ಹುಕ್ಕೇರಿ					ಗ್ರಾಮ: ಗವನಾಳ್
95	101	ಖಾಸಗಿ	ಖುಷ್ಕಿ	47.2	0.00472
96	102	ಖಾಸಗಿ	ತರಿ	128.62	0.012862
97	103	ಖಾಸಗಿ	ತರಿ	124.21	0.012421
98	104	ಖಾಸಗಿ	ತರಿ	126.19	0.012619
99	105	ಖಾಸಗಿ	ತರಿ	705.66	0.070566
100	38	ಖಾಸಗಿ	ಖುಷ್ಕಿ	1673.16	0.167316
101	39	ಖಾಸಗಿ	ತರಿ	146.47	0.014647
102	40	ಖಾಸಗಿ	ತರಿ	35.27	0.003527
103	41	ಖಾಸಗಿ	ಖುಷ್ಕಿ	187.410	0.018741
104	42	ಖಾಸಗಿ	ಖುಷ್ಕಿ	47	0.0047
105	63	ಖಾಸಗಿ	ಖುಷ್ಕಿ	182.98	0.018298
106	64	ಖಾಸಗಿ	ತರಿ	41.44	0.004144
107	65	ಖಾಸಗಿ	ಖುಷ್ಕಿ	89.5	0.00895
108	66	ಖಾಸಗಿ	ತರಿ	322.31	0.032231
109	82	ಖಾಸಗಿ	ಖುಷ್ಕಿ	2713.769	0.27137689
110	82 Paiki	ಖಾಸಗಿ	ತರಿ	3899.051	0.38990511
111	91	ಖಾಸಗಿ	ಖುಷ್ಕಿ	2110.78	0.211078
112	94	ಖಾಸಗಿ	ಖುಷ್ಕಿ	152.26	0.015226
113	95	ಖಾಸಗಿ	ತರಿ	158.99	0.015899
114	96	ಖಾಸಗಿ	ಖುಷ್ಕಿ	105.74	0.010574
ತಾಲೂಕ: ಹುಕ್ಕೇರಿ					ಗ್ರಾಮ: ಗೋಟೂರ್
115	1	ಖಾಸಗಿ	ತರಿ	1054.17	0.105417
116	109	ಖಾಸಗಿ	ತರಿ	65.11	0.006511
117	110	ಖಾಸಗಿ	ತರಿ	6.85	0.000685
118	13	ಖಾಸಗಿ	ಖುಷ್ಕಿ	1722.97	0.172297
119	14	ಖಾಸಗಿ	ಖುಷ್ಕಿ	918.55	0.091855
120	15	ಖಾಸಗಿ	ಖುಷ್ಕಿ	1058.17	0.105817
121	16	ಖಾಸಗಿ	ತರಿ	3022.38	0.302238
122	17	ಖಾಸಗಿ	ತರಿ	672.31	0.067231
123	18	ಖಾಸಗಿ	ತರಿ	1196.67	0.119667
124	19	ಖಾಸಗಿ	ಖುಷ್ಕಿ	457.14	0.045714
125	2	ಖಾಸಗಿ	ತರಿ	613.22	0.061322
126	20	ಖಾಸಗಿ	ಖುಷ್ಕಿ	250.78	0.025078
127	221	ಖಾಸಗಿ	ತರಿ	64.33	0.006433
128	222	ಖಾಸಗಿ	ತರಿ	93.74	0.009374
129	223	ಖಾಸಗಿ	ತರಿ	1131.17	0.113117
130	224	ಖಾಸಗಿ	ತರಿ	567.61	0.056761
131	225	ಖಾಸಗಿ	ತರಿ	418.23	0.041823
132	226	ಸರಕಾರಿ	ತರಿ	199.51	0.019951
133	227	ಖಾಸಗಿ	ತರಿ	230.96	0.023096
134	23	ಖಾಸಗಿ	ತರಿ	551.21	0.055121
135	232	ಖಾಸಗಿ	ತರಿ	269.51	0.026951
136	233	ಖಾಸಗಿ	ತರಿ	72.55	0.007255
137	234	ಖಾಸಗಿ	ತರಿ	105.89	0.010589
138	235	ಖಾಸಗಿ	ತರಿ	72.36	0.007236
139	236	ಖಾಸಗಿ	ತರಿ	77.03	0.007703
140	237	ಖಾಸಗಿ	ತರಿ	108.56	0.010856
141	238	ಖಾಸಗಿ	ತರಿ	115.59	0.011559
142	239	ಖಾಸಗಿ	ತರಿ	148.7	0.01487
143	27	ಖಾಸಗಿ	ಖುಷ್ಕಿ	1080.73	0.108073
144	28	ಖಾಸಗಿ	ಖುಷ್ಕಿ	746.25	0.074625
145	29	ಖಾಸಗಿ	ತರಿ	168.41	0.016841
146	8	ಖಾಸಗಿ	ತರಿ	149.7	0.01497
147	ಗಾಂವಠಾಣಾ			932.489	0.0932489
ತಾಲೂಕ: ಹುಕ್ಕೇರಿ					ಗ್ರಾಮ: ಬೋರಗಲ್
148	282	ಖಾಸಗಿ	ತರಿ	116.3	0.01163
149	290	ಸರಕಾರಿ	ತರಿ	187.829	0.0187829
150	291	ಖಾಸಗಿ	ತರಿ	53.581	0.0053581
151	309	ಖಾಸಗಿ	ತರಿ	64.073	0.0064073
152	310	ಖಾಸಗಿ	ತರಿ	383.68	0.038368
153	311	ಸರಕಾರಿ	ತರಿ	192.866	0.0192866
154	449	ಖಾಸಗಿ	ತರಿ	50.012	0.0050012
155	459	ಖಾಸಗಿ	ಖುಷ್ಕಿ	4.739	0.0004739
156	465	ಖಾಸಗಿ	ತರಿ	316.28	0.031628
157	471	ಖಾಸಗಿ	ತರಿ	225.865	0.0225865
158	506	ಖಾಸಗಿ	ತರಿ	119.511	0.0119511
159	507	ಖಾಸಗಿ	ತರಿ	5.428	0.0005428
160	51	ಖಾಸಗಿ	ತರಿ	1.151	0.0001151
161	55	ಖಾಸಗಿ	ತರಿ	330.919	0.0330919
ತಾಲೂಕ: ಹುಕ್ಕೇರಿ					ಗ್ರಾಮ: ಅಮ್ಮೀನಭಾವಿ
162	20	ಖಾಸಗಿ	ತರಿ	22.489	0.0022489
163	24	ಖಾಸಗಿ	ತರಿ	28.493	0.0028493
164	27	ಖಾಸಗಿ	ತರಿ	13.237	0.0013237
165	28	ಖಾಸಗಿ	ತರಿ	46.114	0.0046114
166	31	ಖಾಸಗಿ	ತರಿ	7.060	0.000706
167	32	ಖಾಸಗಿ	ತರಿ	32.95	0.003295
168	33	ಖಾಸಗಿ	ತರಿ	38.651	0.0038651
169	34	ಖಾಸಗಿ	ತರಿ	9.612	0.0009612
170	34	ಖಾಸಗಿ	ತರಿ	353.41	0.035341
171	35	ಖಾಸಗಿ	ತರಿ	530.46	0.053046
172	36	ಖಾಸಗಿ	ತರಿ	174.34	0.017434
173	38	ಖಾಸಗಿ	ತರಿ	16.509	0.0016509
174	39	ಖಾಸಗಿ	ತರಿ	35.013	0.0035013
175	40	ಖಾಸಗಿ	ತರಿ	2.03	0.000203
176	42	ಖಾಸಗಿ	ತರಿ	14.594	0.0014594
177	43	ಖಾಸಗಿ	ತರಿ	16.374	0.0016374
178	44	ಖಾಸಗಿ	ತರಿ	99.11	0.009911
179	45	ಖಾಸಗಿ	ಖುಷ್ಕಿ	446.96	0.044696
180	46	ಖಾಸಗಿ	ತರಿ	500.38	0.050038
181	47	ಖಾಸಗಿ	ತರಿ	68.618	0.0068618
182	48	ಖಾಸಗಿ	ತರಿ	3.742	0.0003742
183	49	ಖಾಸಗಿ	ತರಿ	50.34	0.005034
184	52	ಖಾಸಗಿ	ತರಿ	212.633	0.0212633
ತಾಲೂಕ: ಹುಕ್ಕೇರಿ					ಗ್ರಾಮ: ನಿಡಸೋಶಿ
185	22	ಖಾಸಗಿ	ಖುಷ್ಕಿ	1243.7	0.12437
186	37	ಖಾಸಗಿ	ತರಿ	1145.12	0.114512
187	40	ಖಾಸಗಿ	ತರಿ	1622.61	0.162261
188	41	ಖಾಸಗಿ	ಖುಷ್ಕಿ	2486.73	0.248673
189	43	ಖಾಸಗಿ	ತರಿ	281.03	0.028103
190	44	ಖಾಸಗಿ	ತರಿ	1720.02	0.172002
191	45	ಖಾಸಗಿ	ತರಿ	1257.47	0.125747
192	46	ಖಾಸಗಿ	ತರಿ	1773.03	0.177303
			ಒಟ್ಟು:	**178023.474**	**17.8023474**

[F.No.RW/NH/S48B,160/KNT/2022)/3A]
SHAIKHAMINKHAN, Director

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ವಿದ್ಯಾವಂತ ಮೂಢ ನಂಬಿಕಸ್ಥನು ಅವಿದ್ಯಾವಂತ ಮೂಢ ನಂಬಿಕಸ್ಥನಿಗಿಂತ ಹೆಚ್ಚು ಅಪಾಯಕಾರಿ.

–ಎಚ್. ನರಸಿಂಹಯ್ಯ

ಸಂಪಾದಕೀಯ

‘ಡಿಜಿಟಲ್ ಇಂಡಿಯಾ’ಗೆ ಹತ್ತು ವರ್ಷ ಪರಿವರ್ತನೆ ಸಾಕಷ್ಟು, ಬೇಕಿದೆ ಇನ್ನಷ್ಟು

‘ಡಿಜಿಟಲ್ ಇಂಡಿಯಾ’ ಅಭಿಯಾನ ಶುರುವಾಗಿ ಈ ತಿಂಗಳಿಗೆ 10 ವರ್ಷಗಳು ಪೂರ್ಣಗೊಂಡಿವೆ. ಈ ಅಭಿಯಾನವು ವ್ಯಾಪಾರ ವಹಿವಾಟು ನಡೆಯುವ ಬಗೆಯನ್ನು ಹಾಗೂ ದೇಶದ ಕೋಟ್ಯಂತರ ಜನರ ಬದುಕಿನ ರೀತಿಯನ್ನು ಬದಲಾಯಿಸಿದೆ. ಆಡಳಿತದಲ್ಲಿ ಸುಧಾರಣೆ ತರುವ ಉದ್ದೇಶದಿಂದ, ಸರ್ಕಾರ ಮತ್ತು ಜನರ ನಡುವಿನ ಅಂತರವನ್ನು ತಂತ್ರಜ್ಞಾನದ ಮೂಲಕ ತಗ್ಗಿಸಲು ನೆರವಾಗುವ ಗುರಿಯೊಂದಿಗೆ ಈ ಅಭಿಯಾನವನ್ನು ಆರಂಭಿಸಲಾಯಿತು. ಆ ಕೆಲಸ ಈಗಲೂ ಚಾಲ್ತಿಯಲ್ಲಿದೆ. ಆದರೆ, ‘ಡಿಜಿಟಲ್ ಇಂಡಿಯಾ’ ಅಭಿಯಾನವು, ಸರ್ಕಾರದ ನೀತಿಗಳ ಬೆಂಬಲದೊಂದಿಗೆ ಜಾರಿಗೆ ಬಂದ ಇತರ ಹಲವು ಯೋಜನೆಗಳಿಗಿಂತ ಹೆಚ್ಚಿನ ಪರಿಣಾಮವನ್ನು ಬಹಳ ಕಡಿಮೆ ಅವಧಿಯಲ್ಲಿ ಜನರ ಮೇಲೆ ಬೀರಿದೆ ಎಂದರೆ ಅತಿಶಯೋಕ್ತಿ ಆಗಲಾರದು. 2014ರಲ್ಲಿ, ದೇಶದಲ್ಲಿ 25 ಕೋಟಿ ಜನರಿಗೆ ಇಂಟರ್‌ನೆಟ್ ಸೇವೆ ಲಭ್ಯವಿತ್ತು. ಆದರೆ, ಎರಡು ವರ್ಷಗಳ ಹಿಂದೆ, 97 ಕೋಟಿಗೂ ಹೆಚ್ಚು ಜನರಿಗೆ ಇಂಟರ್‌ನೆಟ್ ಸೌಲಭ್ಯ ಲಭ್ಯವಾಗಿದೆ. ಎಲ್ಲ ಬಗೆಯ ಡಿಜಿಟಲ್ ಪಾವತಿಗಳು ಭಾರಿ ಪ್ರಮಾಣದಲ್ಲಿ ಹೆಚ್ಚಳ ಕಂಡಿವೆ. 2022–23ರಲ್ಲಿ ಯುಪಿಐ ವ್ಯವಸ್ಥೆ ಮೂಲಕ ₹139 ಲಕ್ಷ ಕೋಟಿ ಮೊತ್ತದ ಒಟ್ಟು 8,375 ಕೋಟಿ ಪಾವತಿಗಳನ್ನು ಮಾಡಲಾಗಿದೆ. 2017–18ರಲ್ಲಿ ಯುಪಿಐ ವ್ಯವಸ್ಥೆಯ ಮೂಲಕ ಆದ ಪಾವತಿಗಳ ಸಂಖ್ಯೆ 92 ಕೋಟಿ ಮಾತ್ರವೇ ಆಗಿತ್ತು. ಈಗ ಯುಪಿಐ ವ್ಯವಸ್ಥೆ ಮೂಲಕ ಆಗುವ ಪಾವತಿಗಳ ಸಂಖ್ಯೆಯು ಇನ್ನೂ ಹೆಚ್ಚಾಗಿರಬಹುದು.

ಹತ್ತು ವರ್ಷಗಳ ಅವಧಿಯಲ್ಲಿ, ‘ಡಿಜಿಟಲ್ ಇಂಡಿಯಾ’ ಅಭಿಯಾನ ಸಾಕಷ್ಟು ಮೈಲಿಗಲ್ಲುಗಳನ್ನು ತನ್ನದಾಗಿಸಿಕೊಂಡಿದೆ. ಆದರೆ, ಸವೆಸಬೇಕಾದ ಹಾದಿ ಇನ್ನೂ ದೀರ್ಘವಾಗಿದೆ ಹಾಗೂ ಸವಾಲಿನಿಂದ ಕೂಡಿದೆ.

ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನವು ಅರ್ಹರಿಗೆ ‘ನೇರ ನಗದು ವರ್ಗಾವಣೆ’ (ಡಿಬಿಟಿ) ರೂಪದಲ್ಲಿ ದೊರೆತ ಕಾರಣದಿಂದಾಗಿ ಈ ಅಭಿಯಾನವು ಬಹಳಷ್ಟು ಜನರಿಗೆ ಪ್ರಯೋಜನಕಾರಿ ಆಯಿತು. ₹44 ಲಕ್ಷ ಕೋಟಿ ಮೊತ್ತವು ಅರ್ಹ ಫಲಾನುಭವಿಗಳಿಗೆ ಸರ್ಕಾರದಿಂದ ನೇರವಾಗಿ ವರ್ಗಾವಣೆ ಆಗುವುದಕ್ಕೆ ‘ಡಿಬಿಟಿ’ ಸಹಾಯ ಮಾಡಿತು. ಇದರಿಂದಾಗಿ, ಯೋಜನೆಗಳ ಲಾಭವನ್ನು ತಲುಪಿಸುವ ಪ್ರಕ್ರಿಯೆಯಲ್ಲಿ ಆಗುತ್ತಿದ್ದ ₹3.48 ಲಕ್ಷ ಕೋಟಿ ಸೋರಿಕೆ ತಡೆಯಲು ಸಾಧ್ಯವಾಗಿದೆ. ಸರ್ಕಾರದ ಕೆಲಸವು ಹೆಚ್ಚು ಪರಿಣಾಮಕಾರಿ ಆಯಿತು, ನಷ್ಟ ಮತ್ತು ಸೋರಿಕೆಯ ಪ್ರಮಾಣ ಕಡಿಮೆ ಆಯಿತು, ಹಣಕಾಸು ವ್ಯವಸ್ಥೆಯು ಹೆಚ್ಚು ಜನರನ್ನು ತಲುಪಿತು. ಹಣಕಾಸು ಮಾತ್ರವೇ ಅಲ್ಲದೆ, ‘ಡಿಜಿಟಲ್ ಇಂಡಿಯಾ’ ಅಭಿಯಾನವು ಸಾರಿಗೆ ಮತ್ತು ಸಂವಹನ, ಆರೋಗ್ಯ, ಶಿಕ್ಷಣ, ಕೈಗಾರಿಕೆ, ಕೃಷಿ ಮತ್ತು ಮನರಂಜನಾ ವಲಯದಲ್ಲಿ ಬಹಳಷ್ಟು ಬದಲಾವಣೆಗಳನ್ನು ತಂದಿದೆ. ಈ ಎಲ್ಲ ವಲಯಗಳಲ್ಲಿನ ಚಟುವಟಿಕೆಗಳನ್ನು ನಡೆಸುವುದಕ್ಕೆ ಹೊಸದೊಂದು ವಿಧಾನ ದೊರಕಿದೆ. ದೇಶದಾದ್ಯಂತ 42 ಲಕ್ಷ ಕಿ.ಮೀ.ಗಿಂತ ಹೆಚ್ಚಿನ ಉದ್ದದ ಆಪ್ಟಿಕಲ್ ಫೈಬರ್ ಕೇಬಲ್ ಜಾಲದ ಅಳವಡಿಕೆ ಆಗಿದೆ; 4.8 ಲಕ್ಷ 5ಜಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಹಿಂದೆ ಇಂಟರ್‌ನೆಟ್ ಲಭ್ಯವಾಗದಿದ್ದ ಹಲವು ಸ್ಥಳಗಳಲ್ಲಿ ಈಗ ವೇಗದ ಇಂಟರ್‌ನೆಟ್ ಸಂಪರ್ಕ ಸಿಗುತ್ತಿದೆ. ಇ–ಆಡಳಿತ ಮತ್ತು ಡಿಜಿಟಲ್ ಸಾಕ್ಷರತೆಯ ಕಾರಣದಿಂದಾಗಿ ಹೆಚ್ಚಿನ ಮಟ್ಟದ ಪಾರದರ್ಶಕತೆ ಹಾಗೂ ದಕ್ಷತೆಯು ಸಾಧ್ಯವಾಗಿದೆ.

ಗಮನಾರ್ಹ ಯಶಸ್ಸಿನ ನಂತರವೂ ಡಿಜಿಟಲ್ ರಸ್ತೆಯಲ್ಲಿ ದೇಶವು ಸಾಗಬೇಕಾದ ಹಾದಿಯು ಇನ್ನೂ ಸುದೀರ್ಘವಾಗಿಯೇ ಇದೆ. ಮುಂದಿನ ದಿನಗಳಲ್ಲಿ ಎದುರಿಸಬೇಕಿರುವ ಸವಾಲುಗಳು ಕೂಡ ಬಹಳಷ್ಟಿವೆ. ಡಿಜಿಟಲ್ ಸೇವೆಗಳ ಲಭ್ಯತೆಯಲ್ಲಿ, ಗುಣಮಟ್ಟದ ಸೇವೆಗಳ ಲಭ್ಯತೆಯಲ್ಲಿ ಗ್ರಾಮೀಣ ಪ್ರದೇಶಗಳು ಹಾಗೂ ನಗರ ಪ್ರದೇಶಗಳ ನಡುವಿನ ಅಂತರವು ದೊಡ್ಡದಾಗಿಯೇ ಇದೆ. ಸಮೀಕ್ಷೆಯೊಂದರ ಪ್ರಕಾರ, ನಗರ ಪ್ರದೇಶಗಳ ಶೇ 66ರಷ್ಟು ಮನೆಗಳಿಗೆ ಗುಣಮಟ್ಟದ ಇಂಟರ್‌ನೆಟ್ ಲಭ್ಯತೆ ಇದೆ. ಗ್ರಾಮೀಣ ಪ್ರದೇಶಗಳ ಶೇ 24ರಷ್ಟು ಮನೆಗಳಿಗೆ ಮಾತ್ರ ಈ ಲಭ್ಯತೆ ಇದೆ. ಗ್ರಾಮೀಣ ಪ್ರದೇಶ ಗಳಲ್ಲಿ ಇರುವ ಮಹಿಳೆಯರ ಪೈಕಿ ಶೇ 50ರಷ್ಟು ಮಂದಿಯ ಬಳಿ ಮೊಬೈಲ್ ಫೋನ್ ಇಲ್ಲ, ಶೇ 57ರಷ್ಟು ಶಾಲೆಗಳಲ್ಲಿ ಮಾತ್ರ ಕೆಲಸ ಮಾಡುತ್ತಿರುವ ಕಂಪ್ಯೂಟರ್‌ಗಳು ಇವೆ, ಶೇ 53ರಷ್ಟು ಶಾಲೆಗಳಿಗೆ ಮಾತ್ರ ಇಂಟರ್‌ನೆಟ್ ಸಂಪರ್ಕ ಇದೆ. ಹಳ್ಳಿಗಳಿಗೆ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸೌಲಭ್ಯ ಒದಗಿಸುವ ‘ಭಾರತ್‌ನೆಟ್’ ಯೋಜನೆಯು ನಿಗದಿತ ಗುರಿಯನ್ನು ತಲುಪಿಲ್ಲ. ಸೈಬರ್ ಅಪರಾಧಗಳು ಹಾಗೂ ವಂಚನೆಗಳು ಹೆಚ್ಚುತ್ತಿವೆ, ಇಂತಹ ವಂಚನೆಗಳಿಗೆ ಸಿಲುಕಿ ಜನರು ಭಾರಿ ಪ್ರಮಾಣದಲ್ಲಿ ಹಣ ಕಳೆದುಕೊಂಡಿದ್ದಾರೆ. ವೈಯಕ್ತಿಕ ದತ್ತಾಂಶ ಹಾಗೂ ಖಾಸಗೀತನದ ರಕ್ಷಣೆಗೆ ಪರಿಣಾಮಕಾರಿ ಕಾನೂನು ಚೌಕಟ್ಟು ಇಲ್ಲದ ಕಾರಣದಿಂದಾಗಿ ಅವುಗಳ ಸುರಕ್ಷತೆಯ ಬಗ್ಗೆ ಗಂಭೀರ ಕಳವಳಗಳೂ ಇವೆ.

ಜಾಣನುಡಿ

ಸಿನಿಮಾ ಸವಾಲು

ಈಗಿನ ನಿಜವಾದ ಸವಾಲು ಸೃಷ್ಟಿಸುವುದಲ್ಲ; ಸೃಷ್ಟಿ ಮಾಡಿದ್ದನ್ನು ಜನರಿಗೆ ತಲುಪಿಸುವುದು ಹಾಗೂ ಮಾರುವುದು. ಮಾರಲು ತಿಳಿಯದೆ ಮಾಡುವ ಸಿನಿಮಾ ವ್ಯರ್ಥ.

ನಾಗತಿಹಳ್ಳಿ ಚಂದ್ರಶೇಖರ್, ಚಿತ್ರ ನಿರ್ದೇಶಕ, ‘ಎಕ್ಸ್’ನಿಂದ

ಕಿಡಿನುಡಿ

ಕೇಂದ್ರ ಸರ್ಕಾರದ ‘ಬೇಟಿ ಬಚಾವೋ’ ಯೋಜನೆ ಇರುವುದೇ ಬಿಜೆಪಿ ನಾಯಕರಿಂದ ಮಹಿಳೆಯರು ತಮ್ಮನ್ನು ರಕ್ಷಿಸಿಕೊಳ್ಳಲು ಅಲ್ಲವೇ? ಅಸಲಿಗೆ, ನಾರಿಶಕ್ತಿಯಿಂದ ಬೆದರಿ ಬೆಂಡಾಗಿರುವುದು ಆ ಪಕ್ಷದ ನಾಯಕರೇ ಹೊರತು ಜನಸಾಮಾನ್ಯರಲ್ಲ. ಬಿಜೆಪಿಯ 19 ಘಟಾನುಘಟಿ ನಾಯಕರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರಲು ಯಾವ ನಾರಿಶಕ್ತಿ ಅಡ್ಡ ಬಂದಿದೆ? ಒಮ್ಮೆ ಜನರಿಗೆ ಹೇಳುವ ಧೈರ್ಯ ಮಾಡಿ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 10-7-2000

• **ರಾಜ್ಯ ಸರ್ಕಾರದ ವಿರುದ್ಧ ಸಂಚು: ಕೃಷ್ಣ**

ಬೆಂಗಳೂರು, ಜುಲೈ 9– ‘ನಮ್ಮ ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂಬ ದುರುದ್ದೇಶದಿಂದ ಸಂಚು ನಡೆಸಿ ಹುಬ್ಬಳ್ಳಿಯ ಸೇಂಟ್ ಜಾನ್ಸ್ ಲೂಥರಾನ್ ಚರ್ಚ್ ಮೇಲೆ ಶನಿವಾರ ಬಾಂಬ್ ಹಾಕಲಾಗಿದೆ’ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಇಂದು ಇಲ್ಲಿ ಆಪಾದಿಸಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಪರಿಸ್ಥಿತಿ ಸುಧಾರಿಸುತ್ತಿರುವುದು ಬಹಳ ಜನರಿಗೆ ಸಂತೋಷ ತಂದಿಲ್ಲ. ಆದ್ದರಿಂದ ಈ ಸಂಚು ನಡೆಸಲಾಗಿದೆ. ಆದರೆ, ಇದಕ್ಕೆ ನಾವು ಸಾಕ್ಷ್ಯಾಧಾರಗಳಿಲ್ಲದೆ ಸಂಘ ಪರಿವಾರ ಅಥವಾ ಬೇರೆ ಯಾರನ್ನೂ ದೂಷಿಸುವುದಿಲ್ಲ ಎಂದರು.

• **ಡಕಾಯಿತರಿಂದ ಮನೆಗಳ ದರೋಡೆ**

ಹಾಸನ, ಜುಲೈ 9– ಡಕಾಯಿತರ ತಂಡವೊಂದು ಇಂದು ನಸುಕಿನಲ್ಲಿ ನಗರದ ಎರಡು ಮನೆಗಳಿಗೆ ನುಗ್ಗಿ ಮನೆಯಲ್ಲಿದ್ದವರನ್ನು ಚಾಕು ತೋರಿಸಿ ಬೆದರಿಸಿ, ಧರಿಸಿದ್ದ ಆಭರಣಗಳು, ಮನೆಯಲ್ಲಿದ್ದ ಚಿನ್ನಾಭರಣಗಳು ಹಾಗೂ ನಗದು ಕಸಿದುಕೊಂಡು ಪರಾರಿಯಾಗಿದೆ.

ಎರಡು ಮನೆಗಳಿಂದ ಒಟ್ಟು ಅರ್ಧ ಕೆ.ಜಿ. ಚಿನ್ನ, 11 ಸಾವಿರ ರೂಪಾಯಿ ನಗದನ್ನು ಡಕಾಯಿತರು ಕಸಿದುಕೊಂಡು ಪರಾರಿಯಾಗಿದ್ದಾರೆ.

75 ವರ್ಷಗಳ ಹಿಂದೆ

ಸೋಮವಾರ, 10-7-1950

• **‘ಪೂರ್ಣ ಸೌಖ್ಯದ ಗುರಿಗಾಗಿ ಕಮ್ಯುನಿಸಂ ತಿರಸ್ಕರಿಸಿ’**

ಮದರಾಸ್, ಜುಲೈ 9– ರಕ್ತಪಾತವಿಲ್ಲದೆ ಸಂಪೂರ್ಣ ಸೌಖ್ಯದ ಗುರಿಯನ್ನು ಮುಟ್ಟಬೇಕಾದರೆ ಭಾರತದ ಜನರು, ಅದರಲ್ಲೂ ಯುವಕರು ‘ಕಮ್ಯುನಿಸಂ’ ಅನ್ನು ತಿರಸ್ಕರಿಸಬೇಕೆಂದು, ಭಾರತ ಸೋಷಲಿಸ್ಟ್ ಪಕ್ಷದ ಮಹಾ ಕಾರ್ಯದರ್ಶಿ ಶ್ರೀ ಜೈ ಪ್ರಕಾಶ್ ನಾರಾಯಣರು ಇಂದು ಕರೆ ಇತ್ತರು. ತಮ್ಮ ಎರಡೂವರೆ ಗಂಟೆ ಕಾಲದ ಭಾಷಣದಲ್ಲಿ ರಾಷ್ಟ್ರೀಯ ಪುನರುಜ್ಜೀವನಕ್ಕಾಗಿ ಸೋಷಲಿಸ್ಟರು ಮುಂದಿಟ್ಟಿರುವ 18 ಅಂಶಗಳ ಕಾರ್ಯಕ್ರಮವನ್ನು ಪ್ರಸ್ತಾಪಿಸಿದರು.

• **ಷಾಹ್‌ಪುರದ ರಾಜಮಾತೆಗೆ ಗೇಣಿದಾರನ ಸಮನ್ಸ್ ಜಾರಿ**

ಜೋಧಪುರ, ಜುಲೈ 9– ಷಾಹ್‌ಪುರದ ಗೇಣಿದಾರನಿಂದ ಬಂದ ಫಿರ್ಯಾದಿನ ರೀತ್ಯಾ, ಷಾಹ್‌ಪುರದ ರಾಜಮಾತೆಗೆ, ರಾಜಸ್ಥಾನ ಹೈಕೋರ್ಟಿನವರು ಸಮನ್ಸ್‌ಗಳನ್ನು ಜಾರಿ ಮಾಡಿದ್ದಾರೆ.

ಕ್ವಾಂಟಮ್ ಕಣಿವೆಯ ಕನಸುಗಳು

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಇದನ್ನು ಮೊದಲೇ ಹೇಳಿಬಿಡೋಣ: ಈ ಕ್ವಾಂಟಮ್ ಜಗತ್ತು ಸುಲಭಕ್ಕೆ ಅರ್ಥವಾಗುವ ವಿಷಯವಲ್ಲ. ಆದರೆ, ವಿಜ್ಞಾನಿಗಳಿಂದ ಹಿಡಿದು ಅಧ್ಯಾತ್ಮ ಚಿಂತಕರವರೆಗೆ ಎಲ್ಲರನ್ನೂ ಪರವಶಗೊಳಿಸುವ ಶಕ್ತಿ ಅದಕ್ಕಿದೆ. ಈ ಜಗತ್ತಿನೊಳಗೆ ನಮಗೆ ಕಾಣದ ಇನ್ನೊಂದು ಪರಮ ಸೂಕ್ಷ್ಮ ಜಗತ್ತು ಇದೆ. ಅಲ್ಲಿನ ವಿದ್ಯಮಾನಗಳು ನಮ್ಮ ಮಾಮೂಲು ತರ್ಕಕ್ಕೆ ನಿಲುಕುವುದಿಲ್ಲ. ಉದಾ: ಹೀಲಿಯಂ ಅನಿಲವನ್ನು ಅತಿ ಶೀತಲ ಸ್ಥಿತಿಗೆ, ಅಂದರೆ ದ್ರವರೂಪಕ್ಕೆ ತಂದು ಅದನ್ನು ಚಕ್ರಾಕಾರವಾಗಿ ಕಲಕಿದಾಗ ಒಂದಲ್ಲ, ಎರಡು ಮೂರು ನಾಲ್ಕು ಸುಳಿಗಳನ್ನು ಕಾಣಬಹುದು. ಕಲಕದೇ ಬಿಟ್ಟರೆ, ಅದನ್ನಿಟ್ಟ ಪಾತ್ರೆಯ ಅಂಚಿನಗುಂಟ ದ್ರವವು ಮೇಲಕ್ಕೇರಿ ಆಚೆ ಹರಿಯುತ್ತದೆ. ಪರಮಾಣುವಿನ ಒಳಗಿರುವ ಕಣಗಳ ವರ್ತನೆ ಅದೆಷ್ಟು ವಿಚಿತ್ರವೆಂದರೆ, ಒಂದೇ ಕಣ ಎರಡು ಕಿಟಕಿಗಳ ಮೂಲಕ ಏಕಕಾಲಕ್ಕೆ ದಾಟಿ ಹೋಗುತ್ತದೆ– ಒಂದು ಅಲೆಯ ಹಾಗೆ. ಆದರೆ ಅಳೆಯಲು ಹೋದರೆ, ಒಂದೇ ಕಿಟಕಿಯ ಮೂಲಕ ಅದು ಕಣರೂಪದಲ್ಲಿ ಸಾಗಿದ ಚಿತ್ರಣ ಸಿಗುತ್ತದೆ. ಒಂದು ಕಣವನ್ನು ವಿಭಜಿಸಿ ಒಂದು ಭಾಗವನ್ನು ಇಲ್ಲೇ ಇಟ್ಟು, ಇನ್ನೊಂದನ್ನು ಮಂಗಳಲೋಕಕ್ಕೆ ಕಳಿಸಿದರೂ ಎರಡರ ವರ್ತನೆಯೂ ಏಕಕಾಲಕ್ಕೆ ಏಕರೂಪದಲ್ಲಿರುತ್ತದೆ. ಇದನ್ನು ಬಲಕ್ಕೆ ತಿರುಗಿಸಿದಾಗ ಅದೂ ತಿರುಗುತ್ತದೆ! ಬೆಳಕಿನ ವೇಗವನ್ನೂ ಮೀರಿಸಿ ಅವೆರಡೂ ಪರಸ್ಪರ ಸಂಪರ್ಕದಲ್ಲಿರುತ್ತವೆ ಎಂಬುದು 1925ರಲ್ಲಿ ಗೊತ್ತಾದಾಗ ಸ್ವತಃ ಐನ್‌ಸ್ಟೀನ್ ತಬ್ಬಿಬ್ಬಾಗಿದ್ದ. ‘ಹಾಗೆಲ್ಲ ಅವು ದೆವ್ವದಂತೆ ವರ್ತಿಸಲು ಸಾಧ್ಯವೇ ಇಲ್ಲ, ಏನೋ ಐಬಿದೆ’ ಎಂದು ಐನ್‌ಸ್ಟೀನ್ ಸಾಬೀತು ಮಾಡಲು ಹೋದಾಗ, ಆತ ಹೇಳಿದ್ದು ಸರಿಯೆಂದೂ, ಆದರೆ ವಾದ ತಪ್ಪೆಂದೂ ಹೇಳಿ ವಿಜ್ಞಾನಲೋಕ ಎಡಬಿಡಂಗಿಯಾಗಿತ್ತು.

ಅವೆಲ್ಲ ಹಳೇ ಕತೆ. ಈಗ, 30ಕ್ಕೂ ಹೆಚ್ಚು ನೊಬೆಲ್ ಗಳಿಕೆಯ ನಂತರ, ಕ್ವಾಂಟಮ್ ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥ್ಸ್, ಬಯಾಲಜಿ ಎಲ್ಲ ಕ್ಷೇತ್ರಗಳಲ್ಲೂ ಸೂಕ್ಷ್ಮಲೋಕದ ಅಲೌಕಿಕ ಸಾಧ್ಯತೆಗಳನ್ನು ದುಡಿಸಿಕೊಳ್ಳಲಾಗುತ್ತಿದೆ. ಹೈಟೆಕ್ ಆಸ್ಪತ್ರೆಗಳ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರದಲ್ಲಿ ಕ್ವಾಂಟಮ್ ಲೆಕ್ಕಾಚಾರ ಅಡಗಿದೆ. ಚಂದ್ರಲೋಕಕ್ಕೂ ಲೇಸರ್ ಕಿರಣಗಳನ್ನು ಕಳಿಸುತ್ತಿದ್ದೇವೆ. ನಮ್ಮ ಮೊಬೈಲ್‌ನಲ್ಲಿರುವ ಟ್ರಾನ್ಸಿಸ್ಟರ್‌ಗಳು, ಜಿಪಿಎಸ್ ಸಾಧನ ಮತ್ತು ಗುಪ್ತಕೀಲಿಗಳು ಕ್ವಾಂಟಮ್ ತತ್ವಗಳನ್ನು ಆಧರಿಸಿವೆ. ಆದರೆ, ಇವೆಲ್ಲ ಕ್ವಾಂಟಮ್ ವಿಶ್ವದತ್ತ ಅಂಬೆಗಾಲು ಅಷ್ಟೆ. ಇಡಿಯಾಗಿ ಕ್ವಾಂಟಮ್ ಕಂಪ್ಯೂಟರನ್ನು ಸೃಷ್ಟಿಸಲು ನಾಲ್ಕಾರು ಮುಂಚೂಣಿ ಕಂಪನಿಗಳು ಏಳೆಂಟು ರಾಷ್ಟ್ರಗಳಲ್ಲಿ ಭಾರಿ ಪೈಪೋಟಿ ನಡೆಸಿವೆ. ಅದನ್ನು ಸಾಧಿಸಿದರೆ ಹೊಸ ವಿಶ್ವವೇ ಮುಷ್ಟಿಗೆ ಸಿಕ್ಕಿದಂತೆ ಎನ್ನಲಾಗುತ್ತದೆ.

ಆಂಧ್ರಪ್ರದೇಶದ ಅಮರಾವತಿಯಲ್ಲಿ ‘ಕ್ವಾಂಟಮ್ ವ್ಯಾಲಿ’ ಹೆಸರಿನ ಕ್ಯಾಂಪಸ್ ರೂಪುಗೊಳ್ಳುತ್ತಿದೆ. ಅಲ್ಲಿ ಐಬಿಎಂ, ಟಿಸಿಎಸ್ ಮತ್ತು ಎಲ್‌ಎಂಡ್‌ಟಿ ಕಂಪನಿಗಳು ಜಂಟಿಯಾಗಿ ಕ್ವಾಂಟಮ್ ಕಂಪ್ಯೂಟರ್ ಸಂಕೀರ್ಣವನ್ನು ನಿರ್ಮಿಸುತ್ತಿವೆ. ಶತಕೋಟಿ ಡಾಲರ್ ಬಂಡವಾಳದಲ್ಲಿ ಅಲ್ಲಿ ಈ ರಂಗದ ಸಂಶೋಧನೆ, ತರಬೇತಿ ಮತ್ತು ಶಿಕ್ಷಣ ವ್ಯವಸ್ಥೆ ಅಸ್ತಿತ್ವಕ್ಕೆ ಬರುತ್ತಿದೆ. ಕ್ವಾಂಟಮ್ ವ್ಯವಸ್ಥೆಗೆ ಬೇಕಾದ ವಿಶೇಷ ಬಗೆಯ ಚಿಪ್ಸ್ ಮತ್ತು ಸೈಬರ್ ಜಾಲವೂ ಅಲ್ಲಿ ಸೃಷ್ಟಿಯಾಗಲಿವೆ. ಆರಂಭದಲ್ಲಿ ಇಪ್ಪತ್ತು ನವೋದ್ಯಮ ಕಂಪನಿಗಳು ಈ ಕ್ವಾಂಟಮ್ ಕಣಿವೆಯಲ್ಲಿ ಕಾಲೂರಲಿವೆ. ಕ್ರಮೇಣ ನೂರು ಕಂಪನಿಗಳಿಗೆ ಜಾಗ ಸಿಗಲಿದೆ. 2026ರಿಂದ ಪ್ರತಿವರ್ಷವೂ ಅಲ್ಲಿ ಜಾಗತಿಕ ಕ್ವಾಂಟಮ್ ಎಕ್ಸ್‌ಪೋ ನಡೆಯಲಿದ್ದು, 2035ರ ಹೊತ್ತಿಗೆ ಅಮರಾವತಿ ‘ಕ್ವಾಂಟಮ್ ಕ್ಯಾಪಿಟಲ್’ ಎನ್ನಿಸಿಕೊಳ್ಳಲಿದೆ.

ಚಂದ್ರಬಾಬು ನಾಯ್ಡು ಅವರ ಈ ಮಹಾಕನಸಿಗೆ ಕೇಂದ್ರ ಸರ್ಕಾರವೂ ನೀರೆರೆಯುತ್ತಿದ್ದು, ಇದಕ್ಕೆಂದು ಅನೇಕ ರಾಷ್ಟ್ರಗಳಿಂದ ಬಂಡವಾಳ ಹರಿದು ಬರಲಿದೆ. ಕರ್ನಾಟಕ ಸರ್ಕಾರ ಚುರುಕಾಗಿ ಯೋಜನೆಯನ್ನು ರೂಪಿಸಿದ್ದಿದ್ದರೆ ಸಿಲಿಕಾನ್ ಸಿಟಿ ಮಾದರಿಯಲ್ಲಿ ನಮ್ಮಲ್ಲೇ ಈ ‘ಕಣಿವೆ’ ರೂಪುಗೊಳ್ಳಬಹುದಿತ್ತು. ಈಗಾಗಲೇ ಬೆಂಗಳೂರಿನ ನಾಗವಾರದ ಹೈಟೆಕ್ ಸಿಟಿಯಲ್ಲಿ ‘ಕ್ಯೂಪೈಎಐ– ಇಂಡಸ್ ಕ್ವಾಂಟಮ್ ಕಂಪ್ಯೂಟರ್’ ಕಾರ್ಯಾಚರಣೆ ನಡೆಸುತ್ತಿದೆ. ದೇಶದ ಮೊದಲ 25 ಕ್ಯೂಬಿಟ್ ಮಷಿನ್ ಎಂಬ ಹೆಗ್ಗಳಿಕೆಯೊಂದಿಗೆ ಇದು ಮೊನ್ನೆ ಮೇ ತಿಂಗಳಲ್ಲಷ್ಟೇ ಶೇ 99.7 ಕ್ಷಮತೆಯನ್ನು ಸಾಧಿಸಿ ಜಗತ್ತಿನ ಗಮನವನ್ನು ಸೆಳೆದಿದೆ. ಭಾರತದ ‘ರಾಷ್ಟ್ರೀಯ ಕ್ವಾಂಟಮ್ ಮಿಷನ್’ನ ಭಾಗವಾಗಿ ಇದು ಈಗಾಗಲೇ ಹನ್ನೊಂದು ಪೇಟೆಂಟ್‌ಗಳನ್ನು ಗಳಿಸಿದೆ. ತುಸು ತಡವಾಗಿ ಎಚ್ಚರಗೊಂಡಂತೆ ಕರ್ನಾಟಕ ಇದೇ 31ರಂದು ‘ಕ್ವಾಂಟಮ್ ಇಂಡಿಯಾ’ ಸಮಾವೇಶ ನಡೆಸುವುದಾಗಿ ನಿನ್ನೆ ಹೇಳಿದೆ.

ಕ್ವಾಂಟಮ್ ಕಂಪ್ಯೂಟರ್ ನೋಡಲು ಚಂದ. ಐಷಾರಾಮಿ ಬಂಗ್ಲೆಗಳಲ್ಲೋ ಚರ್ಚ್‌ಗಳಲ್ಲೋ ತಾರಸಿಯಿಂದ ಇಳಿಬಿಟ್ಟ ಗಾಜಿನ ತೂಗುದೀಪವನ್ನೇ ಹೋಲುವ ಯಂತ್ರಾಗಾರ ಅದು. ಗಾಜಿನ ಬದಲು ಚಿನ್ನ, ಟೈಟಾನಿಯಂ, ನಿಯೋಬಿಯಂ, ರುಬೀಡಿಯಂ, ಟಂಟಾಲಮ್ ಮುಂತಾದ ಭಾರೀ ಬೆಲೆಬಾಳುವ ಲೋಹಗಳ ಗೊಂಚಲು ಅದು. ಮೇಲಿನ ಸ್ತರದಲ್ಲಿ ಸಾಮಾನ್ಯ ಉಷ್ಣತೆ ಇದ್ದರೆ, ಕೆಳಕ್ಕೆ ಬಂದಂತೆ ಹೀಲಿಯಂ ದ್ರವದಲ್ಲಿ ಶಾಖ ಕಡಿಮೆ ಆಗುತ್ತ ಆಗುತ್ತ ಕೆಳತುದಿಯ ಮೂತಿಯಲ್ಲಿ ನಿಖರ ಶೂನ್ಯದ ಘನಘೋರ ಚಳಿಯಲ್ಲಿ (ಮೈನಸ್ 273.14 ಡಿಗ್ರಿ ಸೆಲ್ಸಿಯಸ್) ಕ್ವಾಂಟಮ್ ಕಣಗಳು ನರ್ತಿಸುತ್ತವೆ. ಅವುಗಳನ್ನು ಕ್ಯೂಬಿಟ್‌ಗಳಾಗಿ...

> ಐನ್‌ಸ್ಟೀನ್‌ನಂಥ ಮಹಾನ್ ವಿಜ್ಞಾನಿಯನ್ನೇ ಗೊಂದಲಕ್ಕೆ ಕೆಡವಿದ್ದ ‘ಕ್ವಾಂಟಮ್ ಮೆಕ್ಯಾನಿಕ್ಸ್’ನ 100ನೇ ವರ್ಷದಲ್ಲಿ ನಾವಿದ್ದೇವೆ. ಆಂಧ್ರಪ್ರದೇಶದ ಅಮರಾವತಿಯಲ್ಲಿ ಭಾರತದ ಮೊದಲ ‘ಕ್ವಾಂಟಮ್ ವ್ಯಾಲಿ’ಯ ನಿರ್ಮಾಣ ಆರಂಭವಾಗಿದೆ. ಕರ್ನಾಟಕವೂ ಈಗ ದಿಢೀರ್ ಎಚ್ಚೆತ್ತು ಕ್ವಾಂಟಮ್ ಮೇಳಕ್ಕೆ ಸಜ್ಜಾಗಿದೆ. ಅಣ್ವಸ್ತ್ರ, ಬಾಹ್ಯಾಕಾಶ ಸಾಧನೆಗಳಂತೆ ಐದಾರು ದೇಶಗಳ ಪೈಪೋಟಿಯಲ್ಲಿ ಭಾರತವೂ ಎಂಟ್ರಿ ಕೊಟ್ಟಿದೆ. ಏನಿದು ಕ್ವಾಂಟಮ್ ತುರುಸು?

ಇವೆಲ್ಲ ನಮ್ಮ ತಿಳಿವಳಿಕೆಗೆ ನಿಲುಕುವುದಿಲ್ಲ ಖರೆ. ಆದರೆ ಒಂದು ಮಹಾಕ್ರಾಂತಿಯ ಆರಂಭದ ಹೆಜ್ಜೆಗಳು ಭಾರತದಲ್ಲೂ ಮೂಡುತ್ತಿವೆ. ಬಾಹ್ಯಾಕಾಶ ದತ್ತ ದಾಪು ಹೆಜ್ಜೆಗಳ ಹಾಗೆ ಇಲ್ಲೂ ಅಮೆರಿಕ ಮತ್ತು ಚೀನಾ ಈಗಾಗಲೇ ಸಾಕಷ್ಟು ಮುಂದಕ್ಕಿವೆ. ಜರ್ಮನಿ, ಜಪಾನ್, ಕೆನಡಾ ಮತ್ತು ಬ್ರಿಟನ್ ಓಟದಲ್ಲಿ ಭಾಗವಹಿಸಿವೆ. ಆದರೆ, ಚೀನಾ ಒಂದನ್ನು ಬಿಟ್ಟರೆ ಎಲ್ಲೆಲ್ಲೂ ಇವೇ ಐಬಿಎಂ, ಗೂಗಲ್, ಮೈಕ್ರೊಸಾಫ್ಟ್ ಮುಂತಾದ ಕಂಪನಿಗಳು ಹೂಡಿಕೆ ಮಾಡಿರುವಾಗ ಇದರಲ್ಲಿ ನಮ್ಮ ಭಾಗ್ಯ ಏನಿದೆ ಕೇಳಿದಿರಾ? ಭಾರತದ ನೆಲದಲ್ಲಿ ಬೇರು ಬಿಡಲು ಇವಕ್ಕೆ ಅವಕಾಶ ಮಾಡಿಕೊಟ್ಟಾಗ ಕಂಪನಿಗಳ ಬೆಳವಣಿಗೆಯ ಜೊತೆ ಜೊತೆಗೇ ಭಾರತದ್ದೇ ಯುವಪೀಳಿಗೆಯ ವಿಕಾಸ ಸಾಧ್ಯವಿದೆ. ಉದ್ಯೋಗಾವಕಾಶ ಮತ್ತು ಅಂತರ ರಾಷ್ಟ್ರೀಯ ಮಟ್ಟದ ದಕ್ಷತೆಯುಳ್ಳ ಮೂಲಸೌಕರ್ಯಗಳು ಸೃಷ್ಟಿಯಾಗುತ್ತವೆ.

ಕ್ವಾಂಟಮ್ ತಂತ್ರಜ್ಞಾನಕ್ಕೆ ಹೋಲಿಸಿದರೆ ಮನುಕುಲದ ಇದುವರೆಗಿನ ಸಾಧನೆಗಳು ಏನೇನೂ ಅಲ್ಲ. ಬೆಂಕಿಯನ್ನು ಪಳಗಿಸಿ ಹಣತೆಯ ದೀಪವನ್ನು ಬೆಳಗಿಸಿದ್ದೇ ಒಂದು ಮಹಾಸಾಧನೆ ಎಂದುಕೊಂಡರೆ, ಅದರ ಎದುರು ವಿದ್ಯುತ್ ಬಲ್ಬ್ ಬೆಳಗಿಸಿದ್ದು ಎಷ್ಟು ದೊಡ್ಡ ಕ್ರಾಂತಿ ಎನಿಸುತ್ತದೋ ಅಂಥದೊಂದು ಕ್ರಾಂತಿಯ ಹೊಸ್ತಿಲಲ್ಲಿ ನಾವಿದ್ದೇವೆ ಎನ್ನಲಾಗುತ್ತಿದೆ. ನಾವೀಗ ಸೂಪರ್ ಕಂಪ್ಯೂಟರ್ ಯುಗದಲ್ಲಿದ್ದೇವೆ ಎಂದರೆ, ಕ್ವಾಂಟಮ್ ಕಂಪ್ಯೂಟರಿನ ಹೋಲಿಕೆಯಲ್ಲಿ ಅದೊಂದು ದೊಡ್ಡ ಗಾತ್ರದ ಹಣತೆ ಅಷ್ಟೆ. ಹಣತೆಯ ಗಾತ್ರವನ್ನು ಅದೆಷ್ಟೇ ಹಿಗ್ಗಿಸಿದರೂ ಅದು ವಿದ್ಯುತ್ ಬಲ್ಬ್‌ಗೆ ಎಂದೂ ಸಮನಾಗಲಾರದು. ಕ್ವಾಂಟಮ್ ತಂತ್ರಜ್ಞಾನ ಅಷ್ಟೊಂದು ದೊಡ್ಡ ನೆಗೆತಕ್ಕೆ ಸಜ್ಜಾಗುತ್ತಿದೆ. ಆ ಮಹಾಜಿಗಿತಕ್ಕೆ ‘ಕ್ವಾಂಟಮ್ ಲೀಪ್’ ಎಂಬ ಹೆಸರೇ ಇದೆ! ಆ ಜಿಗಿತ ಹೇಗಿರುತ್ತದೆಂದರೆ, ಕ್ವಾಂಟಮ್ ಸುರಂಗದಲ್ಲಿ ತೂರಿಕೊಂಡು ನಾವು ಕ್ಷಣಾರ್ಧದಲ್ಲಿ ಸೂರ್ಯನಾಚಿನ ಇನ್ನೊಂದು ನಕ್ಷತ್ರಕ್ಕೋ ಅಥವಾ ಇನ್ನೊಂದು ವಿಶ್ವಕ್ಕೋ ಕಾಲಿಡಬಹುದು.

ಊಹೆಗೆ ಈಗಲೂ ನಿಲುಕುತ್ತಿಲ್ಲವೆ? ತಾರಾಲೋಕದ ಪಯಣವನ್ನು ಬದಿಗಿಟ್ಟು ನಮ್ಮದೇ ಹಿತ್ತಲಿನ ಕಡೆ ನೋಡಿ: ನಿಸರ್ಗದ ಸಾದಾ ಸಹಜ ವಿದ್ಯಮಾನಗಳು ನಮಗೆ ಈಗಲೂ ನಿಗೂಢವಾಗಿಯೇ ಇವೆ. ಸೂರ್ಯನ ಬೆಳಕನ್ನು ಮತ್ತು ಗಾಳಿಯಲ್ಲಿನ ಇಂಗಾಲವನ್ನು ಹೀರಿಕೊಂಡು ಸಸ್ಯಗಳು ಶರ್ಕರಪಿಷ್ಟವನ್ನು ಉತ್ಪಾದಿಸುತ್ತವೆ ಎಂಬುದು ಗೊತ್ತಿದೆ; ಆದರೆ ಹೇಗೆ ಉತ್ಪಾದಿಸುತ್ತವೆ? ವಿಜ್ಞಾನಿಗಳಿಗೆ ಗೊತ್ತಿಲ್ಲ. ತೊಗರಿಯ ಬೇರಿನ ಗಂಟುಗಳಲ್ಲಿರುವ ಏಕಾಣು ಜೀವಿಗಳು ಗಾಳಿಯಲ್ಲಿನ ಸಾರಜನಕವನ್ನು ಹೀರಿಕೊಂಡು ಹೇಗೆ ಯೂರಿಯಾ, ಡಿಎಪಿ ತಯಾರಿಸುತ್ತವೆಯೋ ಗೊತ್ತಿಲ್ಲ. ನಾವು ಅದೇ ಕೆಲಸಕ್ಕೆ ಭೀಮ ಗಾತ್ರದ ಕ್ಲಿಷ್ಟ ಯಂತ್ರಾಗಾರವನ್ನು ಹೂಡಿ, ಅತ್ಯುಗ್ರ ಉಷ್ಣತೆಯಲ್ಲಿ ಮೀಥೇನ್ ಅನಿಲವನ್ನು ಗಾಳಿಯೊಂದಿಗೆ ಉರಿಸಿ, ಸುತ್ತೆಲ್ಲ ಮಾಲಿನ್ಯ ಹಬ್ಬಿಸಿ ಯೂರಿಯಾವನ್ನು ಪಡೆಯುತ್ತೇವೆ. ಇನ್ನೂ ಸ್ಪಷ್ಟವಾದ ಹೋಲಿಕೆ ಬೇಕೆಂದರೆ, ದಟ್ಟ ಕಾಡಿನಲ್ಲಿ ಒಂದು ರೋಬಾಟ್ ಜೀರುಂಡೆಯನ್ನು ಮತ್ತು ಒಂದು ಸಾದಾ ಜೀರುಂಡೆಯನ್ನೂ ಬಿಡಿ. ಬ್ಯಾಟರಿ ಮುಗಿದ ಮೇಲೆ ರೋಬಾಟ್ ಜೀರುಂಡೆ ಅಲ್ಲೇ ಬಿದ್ದಿರುತ್ತದೆ. ಆದರೆ ಸಹಜ ಜೀರುಂಡೆ ತನಗೆ ಬೇಕಿದ್ದ ಆಹಾರವನ್ನು ಸಂಪಾದಿಸಿಕೊಂಡು, ತನ್ನ ವೈರಿಗಳನ್ನು ನಿಭಾಯಿಸಿಕೊಂಡು, ಸಂಗಾತಿಯನ್ನು ಹುಡುಕಿಕೊಂಡು ವಂಶೋದ್ಧಾರ ಮಾಡಿಕೊಳ್ಳುತ್ತದೆ. ಪ್ರಕೃತಿಯ ಆ ಜಾಣ್ಮೆಯ ಒಂದಂಶವನ್ನೂ ನಾವು ಪಡೆದಿಲ್ಲ.

ವೈದ್ಯಕೀಯದಲ್ಲಿ ಇಷ್ಟೊಂದು ಸಾಧನೆ ಮಾಡಿದ್ದರೂ, ಅವೆಲ್ಲವೂ ದಶಕಗಳ ಕಾಲದ ಕತ್ತಲ ಹುಡುಕಾಟ ಮತ್ತು ಕೋಟ್ಯಂತರ ಡಾಲರ್ ವೆಚ್ಚದ ನಂತರ ಬಂದಿವೆ; ಇಲ್ಲವೆ ಪೆನಿಸಿಲಿನ್‌ನಂಥ ರಾಮಬಾಣಗಳು ಅದೃಷ್ಟವಶಾತ್ ಲಭಿಸಿವೆ. ಕ್ವಾಂಟಮ್ ಎಂಬ ಕನಸಿನ ಲೋಕದಲ್ಲಿ ನಿಸರ್ಗದ ನಿಗೂಢಗಳೆಲ್ಲ ಚಿಟಿಕೆಯಷ್ಟು ಸುಲಭದಲ್ಲಿ ತೆರೆದುಕೊಳ್ಳುತ್ತವೆ. ಈಗಿನ ಸೂಪರ್ ಕಂಪ್ಯೂಟರ್‌ಗಳು ಹದಿನೈದು ವರ್ಷಗಳಲ್ಲಿ ಮಾಡಬಹುದಾದ ಕೆಲಸವನ್ನು ಕ್ವಾಂಟಮ್ ಕಂಪ್ಯೂಟರ್‌ಗಳು 15 ನಿಮಿಷಗಳಲ್ಲಿ ಮಾಡಿ ಮುಗಿಸುತ್ತವೆ; ಕ್ಯಾನ್ಸರ್ ರೋಗಕ್ಕೆ, ಮರೆಗುಳಿ ಕಾಯಿಲೆಗೆ ಖಚಿತ ಔಷಧವನ್ನೂ ತಿಳಿಸುತ್ತವೆ; ಜಾಗತಿಕ ತಾಪಮಾನ ಏರಿಕೆಯನ್ನು ತಡೆಗಟ್ಟುವ ಉಪಾಯವನ್ನೂ ಕೊಡುತ್ತವೆ; ಯಾರೂ ಭೇದಿಸಲಾಗದ ಗುಪ್ತ ಸಂದೇಶಗಳನ್ನು ಮಿಲಿಟರಿಗೆ ಮತ್ತು ಬಿಸಿನೆಸ್ ಕಂಪನಿಗಳಿಗೆ ರೂಪಿಸುತ್ತವೆ; ಮನೋವೇಗದಲ್ಲಿ ವಿಶ್ವ ಪರ್ಯಟನೆಗೂ ನಮ್ಮನ್ನು ಹೊರಡಿಸಬಹುದು.

ಅದೆಲ್ಲ ಸರಿ, ಆದರೆ ಇದರಿಂದ ಜನಸಾಮಾನ್ಯರಿಗೇನು ಲಾಭ? ಶುಭಾಂಶು ಶುಕ್ಲರ ಬಾಹ್ಯಾಕಾಶ ಪಯಣಕ್ಕೆ ನಮ್ಮ ಸರ್ಕಾರ ₹550 ಕೋಟಿ ನೀಡಿತೆಂಬ ಸುದ್ದಿ ಬಂದಾಗಲೂ ಈ ಪ್ರಶ್ನೆ ಎದ್ದಿತ್ತು. ಭಾರತದ ಇದುವರೆಗಿನ ಹೈಟೆಕ್ ಸಾಧನೆಗಳೆಲ್ಲ ಪಿರಮಿಡ್ಡನ್ನು ಹೋಲುತ್ತವೆ. ತಳದಲ್ಲಿರುವವರಿಗೆ ಬರೀ ಹೊರೆ ಎನಿಸುವಂತೆ ಮೇಲುಸ್ತರಗಳ ಮಂದಿಗೇ ಎಲ್ಲ ಸೌಲಭ್ಯಗಳೂ ಸಿಗುತ್ತಿವೆ. ಕ್ವಾಂಟಮ್ ತಂತ್ರಜ್ಞಾನದ ಫಲಶ್ರುತಿ ಇದನ್ನು ತಲೆಕೆಳಗು ಮಾಡೀತೆಂದು ಆಶಿಸೋಣ. ಇಷ್ಟಕ್ಕೂ ಈ ಕಂಪ್ಯೂಟರಿನ ಆಕೃತಿಯೇ ಉಲ್ಟಾ ಪಿರಮಿಡ್ ಇದ್ದಂತಿದೆ.

ವಾಚಕರ ವಾಣಿ

ಶಾಂತಮ್ಮ ಅಂಥವರಿಂದಲೇ ಮಳೆ–ಬೆಳೆ

ಪಾವಗಡ ತಾಲ್ಲೂಕಿನ ಓಬೇನಹಳ್ಳಿಯ ಅಂಗನವಾಡಿ ಕಾರ್ಯಕರ್ತೆ ಶಾಂತಮ್ಮ, ಅಂಗನವಾಡಿ ಕಟ್ಟಡಕ್ಕೆ ತಮ್ಮ ಸ್ವಂತ ನಿವೇಶನ ನೀಡಿರುವುದು ಶ್ಲಾಘನೀಯ (ಪ್ರ.ವಾ., ಜುಲೈ 9). ಇಂತಹವರಿಂದಲೇ ಒಂದಿಷ್ಟು ಮಳೆ– ಬೆಳೆ ಎನ್ನುವ ವಾಡಿಕೆ ಮಾತು ಸತ್ಯ ಇರಬಹುದು. ಅವರು ನೀಡಿರುವ ಜಾಗದಲ್ಲಿ ಸರ್ಕಾರವು ವಿಳಂಬ ಮಾಡದೆ ಕಟ್ಟಡ ನಿರ್ಮಿಸಿ, ಚಿಣ್ಣರ ಕಲಿಕೆಗೆ ಅನುಕೂಲ ಕಲ್ಪಿಸಬೇಕು.

ಸರ್ಕಾರಿ ಶಾಲೆಗಳ ಹಳೆಯ ವಿದ್ಯಾರ್ಥಿಗಳು ತಮ್ಮೂರಿನ ಶಾಲಾ ಕಟ್ಟಡಗಳಿಗೆ ಸುಣ್ಣ-ಬಣ್ಣ ಬಳಿದು ದುರಸ್ತಿ ಮಾಡಿಸುವ ವಿದ್ಯಮಾನಗಳು ಇತ್ತೀಚೆಗೆ ಹೆಚ್ಚುತ್ತಿರುವುದು ಮನಸ್ಸಿಗೆ ನೆಮ್ಮದಿ ನೀಡುವ ಸಂಗತಿ.

ಬಿ. ಮೊಹಿದ್ದೀನ್ ಖಾನ್, ಚಿತ್ರದುರ್ಗ

ಯುವಜನರಿಗೆ ವ್ಯವಸಾಯ ಏಕೆ ಬೇಡ?

‘ಬೇಸಾಯ: ಯುವಜನ ಬೇಕಾಗಿದ್ದಾರೆ’ ಲೇಖನವು (ಪ್ರ.ವಾ., ಜುಲೈ 6) ಕೃಷಿ ಕ್ಷೇತ್ರದ ಈಗಿನ ವಾಸ್ತವಕ್ಕೆ ಹಿಡಿದಿರುವ ಕನ್ನಡಿ. ಛಿದ್ರವಾಗುತ್ತಿರುವ ಕೃಷಿ ಭೂಮಿಯನ್ನು ಉಳಿಸಿಕೊಳ್ಳುತ್ತ, ಜಾಗತಿಕ ತಾಪಮಾನದ ವೈಪರೀತ್ಯಗಳನ್ನು ಎದುರಿಸುವ ಸವಾಲು ಸಣ್ಣದಲ್ಲ. ಅಗಿದು ಬಿಸಾಕುವ ಚೂಯಿಂಗ್‌ಗಮ್ ಬೆಲೆ ಭವಿಷ್ಯದಲ್ಲಿ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ರೈತರ ಆದಾಯಕ್ಕೆ ಚೂಯಿಂಗ್‌ಗಮ್‌ನಷ್ಟೂ ಖಾತರಿಯಿಲ್ಲ. ಹಾಗಿದ್ದ ಮೇಲೆ ವ್ಯವಸಾಯವೇಕೆ?

ರೈತನಿಗೆ ಸಿಗಬೇಕಾದ ಗೌರವ– ಮನ್ನಣೆ ಕಡಿಮೆ. ಹಸನಾಗಿ ಬದುಕುವ ಖಾತರಿಯೂ ಇಲ್ಲ. ಆದ್ದರಿಂದಲೇ, ಹಳ್ಳಿಯ ಪೋಷಕರೇ ತಮ್ಮ ಹೆಣ್ಣುಮಕ್ಕಳನ್ನು ಹಳ್ಳಿಯ ಹುಡುಗನಿಗೆ ಕೊಡಲು ಹಿಂಜರಿಯುತ್ತಾರೆ. ನಮ್ಮ ಮನೋಭಾವ ಬದಲಾಗದೆ ಹೋದಲ್ಲಿ, ಕೃಷಿಯು ಕೇವಲ ಮುದಿ ಜೀವಗಳು ಮಾತ್ರ ಮಾಡುವ ಕೆಲಸವಾಗಿ ಬಿಡುತ್ತದೆ.

ಶಾಂತರಾಜು ಎಸ್., ಮಳವಳ್ಳಿ

ಪೋಸ್ಟ್‌ಮಾರ್ಟಂ: ಕಡ್ಡಾಯ ಸಾಧ್ಯವೇ ?

ಹೃದಯಾಘಾತದಿಂದ ಮೃತಪಟ್ಟವರ ಮರಣೋತ್ತರ ಪರೀಕ್ಷೆ ಕಡ್ಡಾಯ ಎಂದು ರಾಜ್ಯ ಸರ್ಕಾರ ಹೇಳಿದೆ. ಆದರೆ, ಹೃದಯಾಘಾತದಿಂದ ಸಾವಿಗೀಡಾಗುವ ಪ್ರತಿ ವ್ಯಕ್ತಿಯ ಮರಣೋತ್ತರ ಪರೀಕ್ಷೆ ಮಾಡಲು ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಸೌಲಭ್ಯ ಇದೆಯೇ?

ಅಂತ್ಯಸಂಸ್ಕಾರದ ಸಿದ್ಧತೆ ನಡೆಸಬೇಕಾದ ಸಮಯದಲ್ಲಿ, ಮೃತದೇಹವನ್ನು ನಿಗದಿತ ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ವಾಹನದ ವ್ಯವಸ್ಥೆ ಆಗಬೇಕು. ಸಮಯಕ್ಕೆ ಸರಿಯಾಗಿ ಮರಣೋತ್ತರ ಪರೀಕ್ಷೆ ನಡೆಸಲು ವೈದ್ಯರ ಲಭ್ಯತೆ ಹಾಗೂ ಪರೀಕ್ಷೆ ನಡೆಸಿದ ನಂತರ ದೇಹವನ್ನು ಸಂಬಂಧಪಟ್ಟವರಿಗೆ ಹಸ್ತಾಂತರಿಸಲು ಸಿಬ್ಬಂದಿಯೂ ಅಗತ್ಯ. ಬೇಗನೆ ಪೋಸ್ಟ್‌ಮಾರ್ಟಂ ಮಾಡಲು ಇಲ್ಲವೇ ಮಾಡಿಸಲು ಅಡ್ಡದಾರಿಗಳೂ ಹುಟ್ಟಿಕೊಳ್ಳಬಹುದು. ಇವೆಲ್ಲವನ್ನೂ ಯೋಚಿಸಿದರೆ, ಹೊಸ ಆದೇಶವು ಸೂತಕದ ಮನೆಯಲ್ಲಿ ನೋವನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆ ಇಲ್ಲದಿಲ್ಲ.

ಜಯಚಂದ್ ಜೈನ್, ದಾವಣಗೆರೆ

ರೌಡಿ ರೈಮ್ಸ್! ಎಲ್ಲಿಗೆ ಬಂತು ಕನ್ನಡ?

‘ಏ ಫಾರ್ ಅಡ್ಡ, ಬಿ ಫಾರ್ ಬ್ಲೇಡ್, ಸಿ ಫಾರ್ ಚಮಕ್ಕು, ಡಿ ಫಾರ್ ಡೀಲಿಂಗ್ಸ್’ ಎನ್ನುವುದು ‘ಎಕ್ಕ’ ಸಿನಿಮಾದ ಒಂದು ಹಾಡು. ಇಂಗ್ಲಿಷ್‌ನ ವರ್ಣಮಾಲೆ ಬದಲಿಸಲು ಹೊರಟಂತಿರುವ ಈ ಗೀತೆಯನ್ನು ‘ರೌಡಿ ರೈಮ್ಸ್’ ಎಂದು ಚಿತ್ರತಂಡ ಕರೆದಿದೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಜುಗರ ಉಂಟು ಮಾಡುವ ಗೀತೆಯಿದು.

ಸಾರ್ವಜನಿಕ ಸ್ಥಳದಲ್ಲಿ ‘ಅಪ್ಪ ಲೂಸಾ, ಅಮ್ಮ ಲೂಸಾ’ ಎಂದು ಪುಟಾಣಿಯೊಬ್ಬಳು ಜೋರಾಗಿ ಹಾಡಿದಾಗ ಮುಜುಗರಗೊಂಡ ತಾಯಿ, ಮಗುವಿನ ಬಾಯಿ ಮುಚ್ಚಿ ಹಿಡಿದಿದ್ದನ್ನು ನಾನು ನೋಡಿರುವೆ. ‘ರೌಡಿ ರೈಮ್ಸ್’ ಹಾಡುವ ಮಕ್ಕಳ ಬಾಯನ್ನು ಶಿಕ್ಷಕರು ಮುಚ್ಚುವ ಸಂದರ್ಭ ಬಂದರೆ ಆಶ್ಚರ್ಯವಿಲ್ಲ. ಇಂತಹ ರಚನೆಗಳು ಕನ್ನಡವನ್ನು ಎಲ್ಲಿಗೆ ಕರೆದೊಯ್ಯುತ್ತವೆ? ಯೋಚಿಸಿದರೆ ದಿಗಿಲಾಗುತ್ತದೆ.

ರಮೇಶ್, ಬೆಂಗಳೂರು

ಶಿಕ್ಷಣ ಪ್ರೇಮದ ಅನನ್ಯ ಮಾದರಿ

‘ಹುಟ್ಟೂರಿನ ಸರ್ಕಾರಿ ಶಾಲೆಗೆ ₹14 ಕೋಟಿ ವೆಚ್ಚದ ಕಟ್ಟಡ’ ವರದಿ ಓದಿ ಖುಷಿಯಾಯಿತು (ಪ್ರ.ವಾ., ಜುಲೈ 8). ಡಾ. ಎಚ್.ಎಂ. ವೆಂಕಟಪ್ಪ ಅವರು, ತಮ್ಮದೇ ಕಣ್ವ ಫೌಂಡೇಷನ್‌ನಿಂದ ಚನ್ನಪಟ್ಟಣ ತಾಲ್ಲೂಕು ಹೊಂಗನೂರಿನ ಶಾಲೆಗೆ ಹೈಟೆಕ್ ಸ್ಪರ್ಶ ನೀಡಿದ್ದಾರೆ.

‘ವಿದ್ಯಾರ್ಥಿಗಳು ಚೆನ್ನಾಗಿ ಓದಿ ಉನ್ನತ ಹುದ್ದೆಗೆ ಹೋಗಬೇಕು; ಅದೇ ನನಗೆ ಸಿಗುವ ದೊಡ್ಡ ಲಾಭ’ ಎನ್ನುವ ಅವರ ಮಾತು ಒಳ್ಳೆಯ ಸಂದೇಶ. ತನಗೆ ಏನನ್ನೂ ಬಯಸದೆ ಸಮಾಜದ ಮಕ್ಕಳು ವಿದ್ಯಾವಂತರಾಗಬೇಕು ಎಂಬ ಮನೋಭಾವ ದೊಡ್ಡದು. ಸೇವಾ ಮನೋಭಾವ ಇದ್ದರೆ ಯಾವುದೂ ಅಸಾಧ್ಯವಲ್ಲ ಎಂಬುದಕ್ಕೆ ವೆಂಕಟಪ್ಪ ಅವರೇ ಸಾಕ್ಷಿ.

ಕುಂದೂರು ಮಂಜಪ್ಪ, ಹರಿಹರ

ಬೆಳೆಯಲು ನೆರವಾದ ಬೇರು ಕತ್ತರಿಸದಿರಿ

ಹೆತ್ತವರನ್ನು ಮಕ್ಕಳು ವೃದ್ಧಾಶ್ರಮದಲ್ಲಿ ಬಿಟ್ಟು ಬರುವ ಪ್ರಕರಣಗಳು ವರದಿಯಾಗುತ್ತಿವೆ. ಇಂತಹ ಸುದ್ದಿ ಓದಿದಾಗ ನಾವು ಯಾವ ಕಾಲಘಟ್ಟದಲ್ಲಿದ್ದೇವೆ ಎನಿಸುತ್ತದೆ. ನಾವು ನಿಂತಿರುವುದು ಬೇರುಗಳ ಸಹಾಯದಿಂದ ಎನ್ನುವುದನ್ನು ಮರೆಯಬಾರದು. ಬೆಳೆಯಲು ನೆರವಾದ ಬೇರುಗಳನ್ನು ತುಂಡರಿಸುವ ಅಹಂ ಒಳ್ಳೆಯದಲ್ಲ. ಬರೀ ಅಕ್ಷರ ಕಲಿತರೆ ಸಾಲದು; ಮಾನವೀಯತೆ ಇಲ್ಲದೇ ಹೋದರೆ ನಾವು ಕಲಿತ ಅಕ್ಷರ ಬರೀ ಸಾಕ್ಷರತೆಗೆ ಸಮ.

ಎಂ. ಪರಮೇಶ್ವರ, ಹಿರಿಯೂರು

ಚುರುಮುರಿ

ಇಂಗ್ಲಿಷ್ ಅವಮಾನ!

• ಗುರು ಪಿ.ಎಸ್.

‘ಛೇ, ಇವರಿಗೆಲ್ಲ ಸೂಕ್ಷ್ಮಗಳೇ ಗೊತ್ತಾಗಲ್ಲ’ ಫ್ಲಾರಿಡಾದ ದೊಡ್ಡ ಬಂಗಲೆಯಿಂದ ಹೀಗೆ ಗೊಣಗುತ್ತಾ ಹೊರಬಂದ ‘ಯಂಗ್’ ಸಂಸದ.

‘ಸಾರ್, ನೀವೇನ್ ಇಲ್ಲಿ? ಎಷ್ಟ್ ದಿನ ಆಯ್ತು ನಿಮ್ಮನ್ನ ನೋಡಿ. ಕೊನೆಗೂ ಅಮೆರಿಕದಲ್ಲಿ ನಿಮ್ಮ ದರ್ಶನ ಭಾಗ್ಯ ಸಿಗೋ ಹಾಗಾಯ್ತು’ ಖುಷಿಯಿಂದ ಹೇಳಿದ ಅನಿವಾಸಿ ಭಾರತೀಯ ಫ್ರೆಂಡ್.

‘ಏನ್ ಬಿಡ್ರೀ, ಈ ದೇಶದ ಅಧ್ಯಕ್ಷ ಟ್ರಂಪ್‌ಗೆ ಸ್ವಲ್ಪವೂ ಸಮಾಧಾನ ಅನ್ನೋದೇ ಇಲ್ವಲ್ರೀ...’

‘ಏನಾಯ್ತು ಸರ್?’

‘ನಮ್ ಲೀಡರ್ ಶಶಿ ತರೂರ್ ನೇತೃತ್ವದಲ್ಲಿ ನಾವೆಲ್ಲ ಇಲ್ಲಿಗೆ ಬಂದಿದ್ವಿ. ಬೆಳಿಗ್ಗೆ ಅವರ ಜೊತೆ ಮಾತಾಡ್ತಿದ್ದೆ. ಆ ಸಾಹೇಬ್ರು ಅದ್ಯಾವ ಇಂಗ್ಲಿಷ್ ಮಾತಾಡ್ತಾರೋ ನನಗಂತೂ ತಲೆ–ಬುಡ ಅರ್ಥ ಆಗಲಿಲ್ಲ. ನನ್ನ ಮಿತಿಯಲ್ಲಿ ನಾನೇ ಏನೋ ಅರ್ಥ ಮಾಡಿಕೊಂಡೆ. ಅದನ್ನ ಪರ್ಸನಲ್ ಆಗಿ ಭೇಟಿಯಾಗೇ ಹೇಳೋಣ ಅಂತ ಅಧ್ಯಕ್ಷರ ಮನೆಗೆ ಬಂದೆ. ಮಾತು ಸ್ಟಾರ್ಟ್ ಮಾಡ್ತಿದ್ದಂಗೆ ನನ್ನನ್ನ ಹೊರಗೆ ಕಳಿಸಿಬಿಟ್ರು...’

‘ಅಂಥದ್ದೇನ್ ಹೇಳಿದ್ರಿ ಸಾರ್?’

‘ನೊಬೆಲ್ ಶಾಂತಿ ಅವಾರ್ಡ್‌ಗೆ ನಿಮ್ಮ ಹೆಸರನ್ನ ಶಿಫಾರಸು ಮಾಡಿ ಅಂತ ನೆತನ್ಯಾಹುಗೆ ಹೇಳಿದ್ದೇ ನಾನು ಅಂದೆ ಅಷ್ಟೇ, ಬೈದೇ ಬಿಡೋದಾ... ಆಯಪ್ಪ ಇಂಡಿಯಾ– ಪಾಕ್ ವಾರ್ ನಿಲ್ಸಿದ್ದು ನಾನೇ ಅಂತ ಸುಳ್ ಸುಳ್ ಹೇಳಿದಾಗ ನಾವು ಕೇಳಿಸಿಕೊಂಡಿರಲಿಲ್ವಾ...’

‘ಈಗೇನ್ ಮಾಡ್ತೀರಿ ಸರ್?’

‘ಹಿಂದಿಯಲ್ಲಿ ಖಂಡನಾ ಪತ್ರ ಬರೆದು ಅದನ್ನ ಎಕ್ಸ್‌ನಲ್ಲಿ ಪೋಸ್ಟ್ ಮಾಡ್ತೀನಿ’.

‘ಟ್ರಂಪ್‌ಗೆ ಹಿಂದಿ ಬರೋದೇ ಇಲ್ವಲ್ಲ?’

‘ಅದಕ್ಕೇ ಹಿಂದಿಯಲ್ಲಿ ಪೋಸ್ಟ್ ಮಾಡ್ತೀನಿ ಅಂದಿದ್ದು. ಟ್ರಂಪ್‌ಗೆ ಇಂಗ್ಲಿಷ್ ಮಾತ್ರ ಬರೋದಕ್ಕೆ ಮತ್ತು ಹಿಂದಿ ಬಾರದ ಕಾರಣಕ್ಕೆ ಅವರು ಅವಮಾನದಿಂದ ತಲೆ ತಗ್ಗಿಸಬೇಕು!’ ಕಾಲರ್ ಏರಿಸಿಕೊಂಡು ಹೊರಟರು ಯಂಗ್ ಎಂಪಿ.

ಸಂಗತ

ತಾಯ್ನುಡಿ: ಭರವಸೆಯ ಮೊದಲ ಹೆಜ್ಜೆ

ತಾಯ್ನುಡಿಯು ಶಿಕ್ಷಣ ಮಾಧ್ಯಮ ಆಗಿರಬೇಕು ಎನ್ನುವುದು ‘ಸಿಬಿಎಸ್‌ಇ’ ನಿಲುವು. ಇದು ಕನ್ನಡ ಮಾಧ್ಯಮದ ಹಂಬಲಕ್ಕೆ ಜೀವ ತುಂಬುವಂತಹದ್ದು.

• ಸ.ರ. ಸುದರ್ಶನ

ಮಾತೃಭಾಷೆ ಶಿಕ್ಷಣದ ಮಾಧ್ಯಮವಾಗಬೇಕು ಎಂದು ಹೇಳಿದರೆ, ‘ಅದು ಮುಗಿದುಹೋದ ಕಥೆ’ ಎನ್ನುತ್ತಾರೆ ನನ್ನ ಕನ್ನಡ ಪರ ಹೋರಾಟದ ಮಿತ್ರರು. ಶಿಕ್ಷಣ ಮಾಧ್ಯಮದ ಆಯ್ಕೆ ಪೋಷಕರ ಹಕ್ಕು ಎಂದು ಸುಪ್ರೀಂ ಕೋರ್ಟ್ ತೀರ್ಪಿತ್ತಿರುವುದೇ ಅದಕ್ಕೆ ಕಾರಣ.

‘ಶಿಕ್ಷಣ ಮಾಧ್ಯಮ ಪೋಷಕರ ಹಕ್ಕು’ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಮೇಲೆ, ಅದರಿಂದಾದ ಬಾಧಕಗಳನ್ನು ನಿವಾರಿಸಲು– ಪ್ರಾಥಮಿಕ ಶಿಕ್ಷಣದಲ್ಲಿ (ಒಂದರಿಂದ ಐದನೇ ತರಗತಿವರೆಗೆ) ಮಾತೃಭಾಷೆ ಅಥವಾ ರಾಜ್ಯಭಾಷೆಯನ್ನು ಶಿಕ್ಷಣ ಮಾಧ್ಯಮ ಆಗಿಸುವ ‘ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ಕರ್ನಾಟಕ ತಿದ್ದುಪಡಿ) ಮಸೂದೆ 2015’ ಅನ್ನು ಸಿದ್ದರಾಮಯ್ಯ ನೇತೃತ್ವದ ಹಿಂದಿನ ಸರ್ಕಾರ ಉಭಯ ಸದನಗಳಲ್ಲೂ ಮಂಡಿಸಿ, ರಾಷ್ಟ್ರಪತಿ ಅವರ ಅಂಗೀಕಾರಕ್ಕಾಗಿ ಕಳಿಸಿತ್ತು. ಅಂತಹ ಮಸೂದೆಯನ್ನು ಅಂಗೀಕರಿಸಿದ ಏಕೈಕ ರಾಜ್ಯ ಕರ್ನಾಟಕ ಆಗಿತ್ತು. ಆದರೆ, ನಂತರದಲ್ಲಿ ರಾಜ್ಯ ಸರ್ಕಾರ ಅದನ್ನು ಸಂಪೂರ್ಣವಾಗಿ ಮರೆಯಿತು. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿ ಅವರನ್ನು ಭೇಟಿ ಮಾಡಿ ಅಂಗೀಕಾರ ನೀಡಬೇಕೆಂದು ಮಂಡಿಸಿರುವ ಪಟ್ಟಿಯಲ್ಲಿ ‘ಉಚಿತ ಕಡ್ಡಾಯ ಶಿಕ್ಷಣ ಮಸೂದೆ 2015’ ಮೊದಲ ಸ್ಥಾನ ಪಡೆದಿರುವುದು ಕಗ್ಗತ್ತಲಲ್ಲಿ ಮಿಂಚಿನ ಹೊಳಹು ಕಂಡಂತಾಗಿದೆ.

ಕೇಂದ್ರ ಸರ್ಕಾರದ ಅಧೀನದಲ್ಲಿರುವ ‘ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ’ (ಸಿಬಿಎಸ್‌ಇ) ಕಳೆದ ಮೇ 22ರಂದು ಹೊಸ ಆದೇಶವನ್ನು ಹೊರಡಿಸಿದೆ. ಅದರ ಪ್ರಕಾರ, ಈ ಶೈಕ್ಷಣಿಕ ವರ್ಷದಿಂದಲೇ ‘ಸಿಬಿಎಸ್‌ಇ’ ಶಾಲೆಗಳಲ್ಲಿ ಮಗುವಿನ ಮೂರರಿಂದ ಎಂಟು ವರ್ಷದವರೆಗಿನ (ಪೂರ್ವ ಪ್ರಾಥಮಿಕದಿಂದ ಎರಡನೇ ತರಗತಿವರೆಗಿನ) ಶಿಕ್ಷಣದಲ್ಲಿ ಕಲಿಕೆಯ ಮಾಧ್ಯಮ ಮನೆಯ ಭಾಷೆ, ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯೇ ಆಗಿರಬೇಕು.



ಕಲಿಕೆಯ ಮೂಲಕ ಗ್ರಹಿಕೆ, ಶಬ್ದ ಸಂಪತ್ತಿನ ಗಳಿಕೆ, ಅಂಕಿಗಳ ಪರಿಜ್ಞಾನ, ಇತ್ಯಾದಿ ಅಂಶಗಳೇ ಈ ಆದೇಶದ ಹಿಂದಿರುವ ಉದ್ದೇಶ.

ಮಗುವಿನ ಸಂಪರ್ಕಕ್ಕೆ ಮೊದಲು ಬರುವ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು. ಅಂದರೆ, ಅದು ಮಾತೃಭಾಷೆ ಆಗಿರುತ್ತದೆ. ಈ ನೀತಿ, ಮಗು ಇನ್ನೊಂದು ಭಾಷೆಯಲ್ಲಿ ಸಾಕ್ಷರತೆ ಗಳಿಸುವವರೆಗೆ ಮುಂದುವರಿಯಬೇಕು ಎಂದು ಆದೇಶ ಪ್ರತಿಪಾದಿಸುತ್ತದೆ. ಆದರೆ, ಭಾರತದಂತಹ ಬಹುಭಾಷಾ ದೇಶದಲ್ಲಿ ಒಂದು ಶಾಲೆಯಲ್ಲಿ ಹಲವು ಮಾತೃಭಾಷೆಗಳಲ್ಲೂ ಕಲಿಕಾ ಮಾಧ್ಯಮ ಒದಗಿಸುವುದು ಸಾಧ್ಯವಾಗದೆ ಹೋಗಬಹುದು. ಆಗ ಮಗುವಿಗೆ ಮಾತೃಭಾಷೆ ನಂತರ ಹೆಚ್ಚು ಪರಿಚಿತವಾಗುವ ಪ್ರಾದೇಶಿಕ ಭಾಷೆ ಅಂದರೆ ರಾಜ್ಯಭಾಷೆ ಬದಲಿ ಶಿಕ್ಷಣ ಮಾಧ್ಯಮ ಆಗಬೇಕು ಎಂದು ‘ಸಿಬಿಎಸ್‌ಇ’ ಹೇಳುತ್ತದೆ.

ಭಾರತದಲ್ಲಿ ಇಂಗ್ಲಿಷ್ ಯಾರ ಮಾತೃಭಾಷೆಯೂ ಅಲ್ಲ, ರಾಜ್ಯ ಭಾಷೆಯೂ ಅಲ್ಲ. ಕೆಲವರು ತಮ್ಮ ಮಾತೃಭಾಷೆ ಇಂಗ್ಲಿಷ್ ಎಂದು ಸುಪ್ರೀಂ ಕೋರ್ಟ್‌ನಲ್ಲಿ ನಾಲ್ಕೈದು ದಶಕಗಳ ಹಿಂದೆ ದಾವೆ ಹೂಡಿದಾಗ, ಆಂಗ್ಲೋ ಇಂಡಿಯನ್ನರ ಹೊರತು ಬೇರೆ ಯಾರಿಗೂ ಇಂಗ್ಲಿಷ್ ಮಾತೃಭಾಷೆಯಲ್ಲ ಎಂದು ಕೋರ್ಟ್ ತೀರ್ಪು ನೀಡಿದೆ.

ಸಿಬಿಎಸ್‌ಇ ಆದೇಶಕ್ಕೆ ಖಾಸಗಿ ಸಂಸ್ಥೆಗಳಿಂದ ಟೀಕೆಗಳು ವ್ಯಕ್ತವಾಗಿವೆ. ಬಹುಭಾಷಾ ಪರಿಸರದ ನಗರದ ಶಾಲೆಯೊಂದರಲ್ಲಿ ಬಹು ಭಾಷಾ ಮಾಧ್ಯಮದ ತರಗತಿಗಳನ್ನು ನಡೆಸಲು ಸಾಧ್ಯವೇ ಎನ್ನುವುದು ಅವರ ಪ್ರಶ್ನೆ. ತೊಡಕಿನ ನಿವಾರಣೆಗೆ ಇಂಗ್ಲಿಷ್ ಮಾಧ್ಯಮವೇ ಪರಿಹಾರ ಎಂಬುದು ಖಾಸಗಿ ಸಂಸ್ಥೆಗಳ ವಾದ. ಆದರೆ, ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಸಿಇಒ ಅನುರಾಗ್ ಬೆಹರ್, ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ ನಿರ್ದೇಶನವನ್ನು ಟೀಕಿಸುವವರು ಅದನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಬಹುಭಾಷೆಗಳ ಸಂಕೀರ್ಣತೆಯ ಹೆಸರಿನಲ್ಲಿ ಮಾತೃಭಾಷೆಯ ಬದಲಿಗೆ ಇಂಗ್ಲಿಷ್ ಮಾಧ್ಯಮ ಕಲ್ಪಿಸುವುದು ಅವೈಜ್ಞಾನಿಕ ಎನ್ನುವುದು ಅವರ ಅಭಿಪ್ರಾಯ.

ಶಾಲೆ ಇರುವ ರಾಜ್ಯದ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರುವುದು ವ್ಯಾವಹಾರಿಕವೂ ಹೌದು, ಶೈಕ್ಷಣಿಕ ಪರಿಹಾರವೂ ಹೌದು. ಮಗುವಿನ ಮಾತೃಭಾಷೆ ಯಾವುದೇ ಇದ್ದರೂ, ಇಂಗ್ಲಿಷ್‌ಗಿಂತಲೂ ರಾಜ್ಯಭಾಷೆ ಹೆಚ್ಚು ಹತ್ತಿರವಾದ ಭಾಷೆಯಾಗಿರುತ್ತದೆ ಎನ್ನುವುದು ಅನುರಾಗ್ ಅವರ ಪ್ರತಿಪಾದನೆ.

ಮಾತೃಭಾಷೆಯ ಬದಲಿಗೆ ಮನೆಯಲ್ಲೂ ಇಂಗ್ಲಿಷ್‌ನಲ್ಲಿ ಮಾತನಾಡುವವರು ದೇಶದ ಜನಸಂಖ್ಯೆಯಲ್ಲಿ ಹೆಚ್ಚೆಂದರೆ ಶೇ 2ರಷ್ಟು ಇರಬಹುದು. ಉಳಿದ ಶೇ 98ರಷ್ಟು ಜನರಿಗೆ, ಇಂಗ್ಲಿಷ್ ಪರಕೀಯ ಭಾಷೆಯಾಗಿರುತ್ತದೆ. ಆದ್ದರಿಂದ, ಸಿಬಿಎಸ್‌ಇ ನಿರ್ದೇಶನವು ನಮ್ಮ ಬಹುಭಾಷಾ ವಾಸ್ತವದಲ್ಲಿ, ಬಾಯಿಪಾಠ ಮಾಡಿ ಕಲಿಯುವ ವಿಧಾನಕ್ಕಿಂತ, ಪರಿಣಾಮಕಾರಿ ಕಲಿಕೆ ಅಥವಾ ಸಾಕ್ಷರತೆಗೆ ಶೈಕ್ಷಣಿಕವಾಗಿ ಅತ್ಯುತ್ತಮ ವಿಧಾನವಾಗಿದೆ.

ತಾಯ್ನುಡಿ ಮಾಧ್ಯಮದ ಆದೇಶವನ್ನು ಹೊರಡಿಸುವ ಮೊದಲು ‘ಸಿಬಿಎಸ್‌ಇ’ ಮಾಡಿಕೊಂಡಿರುವ ಪೂರ್ವ ಸಿದ್ಧತೆ ಮೆಚ್ಚುವಂತಹದ್ದು. ಹಿಂದಿ ಹಾಗೂ ಉರ್ದುವಿನಲ್ಲಿ ಆದೇಶದ ಅನುಷ್ಠಾನಕ್ಕೆ ಬೇಕಾಗುವ ಪಠ್ಯಪುಸ್ತಕಗಳನ್ನು ಮುದ್ರಿಸಿದೆ. ಆ ಪುಸ್ತಕಗಳನ್ನು 22 ಭಾರತೀಯ ಭಾಷೆಗಳಲ್ಲಿ ಡಿಜಿಟಲ್ ರೂಪದಲ್ಲಿ ಒದಗಿಸಿದೆ. ಅಷ್ಟೇ ಅಲ್ಲ, ಕೇಂದ್ರೀಯ ಶಾಲೆಗಳಲ್ಲಿ ವಿವಿಧ ಭಾಷಾ ವಿದ್ಯಾರ್ಥಿಗಳ ಗಣತಿ ಮಾಡಿ ಮುಂದಿನ ಕ್ರಮ ಕೈಗೊಳ್ಳಲು ಆದೇಶಿಸಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಲಿಕಾ ಸಾಮರ್ಥ್ಯ

ರಾಜ್ಯದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹೇಗಿದೆ?



'ಪರಖ್' ರಾಷ್ಟ್ರೀಯ ಸಮೀಕ್ಷಾ ವರದಿ 2024

ಕರ್ನಾಟಕದ ಮಕ್ಕಳು ಹಿಂದೆ

'ಪರಖ್' (PARAKH) ರಾಷ್ಟ್ರೀಯ ಸಮೀಕ್ಷೆ 2024 ವರದಿಯ ಭಾಗವಾಗಿ ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿರುವ ಕೇಂದ್ರ ಸರ್ಕಾರದ ಶಾಲೆಗಳು, ರಾಜ್ಯ ಸರ್ಕಾರದ ಶಾಲೆಗಳು, ಖಾಸಗಿ ಹಾಗೂ ಅನುದಾನಿತ ಶಾಲೆಗಳ 3, 6 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳ ವಿಷಯವಾರು ಕಲಿಕಾ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲಾಗಿದೆ. ಸಮೀಕ್ಷೆಯಲ್ಲಿ ಕರ್ನಾಟಕದ ಮಕ್ಕಳ ಕಲಿಕಾ ಸಾಮರ್ಥ್ಯದ ಸರಾಸರಿ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದ್ದು, ಕಲಿಕೆಯಲ್ಲಿ ಮಕ್ಕಳು ಹಿಂದುಳಿದಿದ್ದಾರೆ. ರಾಜ್ಯದ ಜಿಲ್ಲೆಗಳು ವಿವಿಧ ವಿಷಯಗಳ ಕಲಿಕೆಯಲ್ಲಿ ಯಾವ ಯಾವ ಸ್ಥಾನದಲ್ಲಿವೆ ಎನ್ನುವುದನ್ನೂ ವರದಿ ಒಳಗೊಂಡಿದೆ

• ಸೂರ್ಯನಾರಾಯಣ ವಿ., ಶ್ರೀನಾಥ್ ಬಿ.ವಿ.

ಕಾರ್ಯಕ್ಷಮತೆಯ ಮೌಲ್ಯಮಾಪನ, ಸಮಗ್ರ ಅಭಿವೃದ್ಧಿಗಾಗಿ ಜ್ಞಾನದ ಪರಾಮರ್ಶೆ ಮತ್ತು ವಿಶ್ಲೇಷಣೆ ಎಂಬುದು 'ಪರಖ್'ನ ವಿಸ್ತೃತ ರೂಪ. ಈ ದೃಷ್ಟಿಯಿಂದ ವಿವಿಧ ರಾಜ್ಯಗಳು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಮತ್ತು ಅವುಗಳ ಭವಿಷ್ಯದ ಸವಾಲುಗಳ ಬಗ್ಗೆ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ಅಧ್ಯಯನ ಮಾಡಿದೆ. ಇದರ ಭಾಗವಾಗಿ ಕಳೆದ ವರ್ಷದ ಡಿಸೆಂಬರ್‌ನಲ್ಲಿ ದೇಶದ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿರುವ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಖಾಸಗಿ ಹಾಗೂ ಅನುದಾನಿತ ಶಾಲೆಗಳ ಪ್ರಾಥಮಿಕ (3ನೇ ತರಗತಿ), ಹಿರಿಯ ಪ್ರಾಥಮಿಕ (6 ನೇ ತರಗತಿ) ಮತ್ತು ಪ್ರೌಢ ಶಾಲಾ (9ನೇ ತರಗತಿ) ಹಂತದ ವಿದ್ಯಾರ್ಥಿಗಳ ವಿಷಯವಾರು ಕಲಿಕಾ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲಾಗಿದೆ.

> ಕರ್ನಾಟಕ ಸೇರಿದಂತೆ ಬಹುತೇಕ ಎಲ್ಲ ರಾಜ್ಯಗಳ ಮಕ್ಕಳಿಗೆ ಗಣಿತ, ವಿಜ್ಞಾನಗಳು ಅತ್ಯಂತ ಕ್ಲಿಷ್ಟಕರ ವಿಷಯಗಳಾಗಿವೆ

ಈ ಸಮೀಕ್ಷೆಯ ಅಂಕಿ ಅಂಶಗಳು ವಿವಿಧ ರಾಜ್ಯಗಳ ಶೈಕ್ಷಣಿಕ ಸ್ಥಿತಿಗತಿಗಳ ಚಿತ್ರಣ ನೀಡುತ್ತವೆ. ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ಕೇರಳ ಸೇರಿದಂತೆ ಕೆಲವು ರಾಜ್ಯಗಳ ಮಕ್ಕಳ ಕಲಿಕಾ ಸಾಮರ್ಥ್ಯವು ರಾಷ್ಟ್ರೀಯ ಸರಾಸರಿಗಿಂತ ಉನ್ನತ ಮಟ್ಟದಲ್ಲಿದ್ದರೆ, ಕರ್ನಾಟಕದ ಮಕ್ಕಳು ರಾಷ್ಟ್ರೀಯ ಸರಾಸರಿಗಿಂತ ಹಿಂದುಳಿದಿದ್ದಾರೆ ಎಂದು ಸಮೀಕ್ಷೆ ಹೇಳಿದೆ.

ಆರಂಭಿಕ ಹಂತದಲ್ಲಿ ಅಂದರೆ, ಮೂರನೇ ತರಗತಿಯಲ್ಲಿ, ಕರ್ನಾಟಕವು ಭಾಷಾ ವಿಷಯದಲ್ಲಿ ರಾಷ್ಟ್ರೀಯ ಸರಾಸರಿಗಿಂತ ಶೇ 4ರಷ್ಟು, ಗಣಿತದಲ್ಲಿ ಶೇ 3ರಷ್ಟು ಹಿಂದುಳಿದಿದೆ. ಭಾಷೆಯಲ್ಲಿ ದಿನನಿತ್ಯದ ವ್ಯವಹಾರ, ಒಡನಾಟ, ಹೊಸ ಪದಗಳ ಅರ್ಥ ಊಹಿಸುವುದು ಸೇರಿದಂತೆ ಇನ್ನಿತರ ವಿಚಾರಗಳಲ್ಲಿ ರಾಷ್ಟ್ರೀಯ ಮಟ್ಟದ ಸರಾಸರಿ ಶೇ 67ರಷ್ಟಿದ್ದರೆ, ರಾಜ್ಯದ್ದು ಶೇ 64ರಷ್ಟಿದೆ.

ಗಣಿತದ ವಿಷಯಕ್ಕೆ ಬಂದರೆ, ಒಂದಕ್ಕಿಂತ ಹೆಚ್ಚು ವಸ್ತುಗಳಿದ್ದಾಗ, ಅವುಗಳನ್ನು ಗುಂಪು, ಉಪಗುಂಪುಗಳಾಗಿ ವರ್ಗೀಕರಿಸುವ ಸಾಮರ್ಥ್ಯದಲ್ಲಿ ರಾಷ್ಟ್ರೀಯ ಸರಾಸರಿ ಶೇ 68ರಷ್ಟಿದ್ದರೆ, ಕರ್ನಾಟಕದ ಸರಾಸರಿ ಶೇ 55 ಆಗಿದೆ. 99ರವರೆಗಿನ ಅಂಕಿಗಳನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಜೋಡಿಸುವ ಸಾಮರ್ಥ್ಯ ರಾಷ್ಟ್ರೀಯ ಮಟ್ಟದಲ್ಲಿ ಶೇ 55ರಷ್ಟಿದ್ದರೆ, ಕರ್ನಾಟಕದಲ್ಲಿ ಶೇ 52ರಷ್ಟಿದೆ. ₹100ವರೆಗಿನ ಹಣದಿಂದ ಸರಳ ವ್ಯವಹಾರ ಮಾಡುವ ಕೌಶಲ ರಾಷ್ಟ್ರ ಮಟ್ಟದಲ್ಲಿ ಶೇ 50ರಷ್ಟಿದ್ದರೆ, ಕರ್ನಾಟಕದಲ್ಲಿ ಶೇ 47ರಷ್ಟಿದೆ.

ಆರನೇ ತರಗತಿಯ ಭಾಷೆ, ಗಣಿತ ಮತ್ತು ಪ್ರಾಪಂಚಿಕ ಜ್ಞಾನ ವಿಷಯಗಳ ಪೈಕಿ ಭಾಷೆ, ಮತ್ತು ಪ್ರಾಪಂಚಿಕ ಜ್ಞಾನದಲ್ಲಿ ಕರ್ನಾಟಕವು ರಾಷ್ಟ್ರೀಯ ಸರಾಸರಿಗಿಂತ ಶೇ 2ರಷ್ಟು ಕಡಿಮೆ ಇದ್ದರೆ, ಗಣಿತದಲ್ಲಿ ಶೇ 1ರಷ್ಟು ಹಿಂದುಳಿದಿದೆ. ಭಾಷೆ ಮತ್ತು ಗಣಿತದ ಕಲಿಕೆಯಲ್ಲಿ ಬಾಲಕರು ರಾಷ್ಟ್ರೀಯ ಸರಾಸರಿಗಿಂತ ಶೇ 3ರಷ್ಟು ಹಿಂದುಳಿದಿದ್ದರೆ, ಬಾಲಕಿಯರು ರಾಷ್ಟ್ರೀಯ ಸರಾಸರಿಗೆ ಸಮನಾಗಿದ್ದಾರೆ. ಪ್ರಾಪಂಚಿಕ ಜ್ಞಾನದಲ್ಲಿ ಬಾಲಕರು ರಾಷ್ಟ್ರೀಯ ಸರಾಸರಿಗಿಂತ ಶೇ 4ರಷ್ಟು, ಬಾಲಕಿಯರು ಶೇ 2ರಷ್ಟು ಹಿಂದುಳಿದಿದ್ದಾರೆ.

9ನೇ ತರಗತಿಯ ಭಾಷೆ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲೂ ಕರ್ನಾಟಕದ ಮಕ್ಕಳು ಹಿಂದುಳಿದಿದ್ದಾರೆ. ಭಾಷಾ ಕಲಿಕೆ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಗಳಲ್ಲಿ ರಾಜ್ಯದ ಸರಾಸರಿ ರಾಷ್ಟ್ರೀಯ ಸರಾಸರಿಗಿಂತ ಶೇ 3ರಷ್ಟು ಹಾಗೂ ಗಣಿತದಲ್ಲಿ ಶೇ 4ರಷ್ಟು ಕಡಿಮೆ ಇದೆ.

ಸಮೀಕ್ಷೆಯಲ್ಲಿ ಭಾಗವಹಿಸಿದ್ದವರು

	ಶಾಲೆಗಳು	ಶಿಕ್ಷಕರು	ವಿದ್ಯಾರ್ಥಿಗಳು
ಭಾರತ	74,229	2,70,424	21,15,022
ಕರ್ನಾಟಕ	4,219	13,261	1,07,868

	ಶಾಲೆಗಳು	ಶಿಕ್ಷಕರು	ವಿದ್ಯಾರ್ಥಿಗಳು
3ನೇ ತರಗತಿ	1,359	3,543	31,666
6ನೇ ತರಗತಿ	1,298	3,696	32,419
9ನೇ ತರಗತಿ	1,562	6,022	43,783

ಜಿಲ್ಲಾವಾರು ವಿಂಗಡಣೆ

ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಆಧರಿಸಿ, ಜಿಲ್ಲೆಗಳನ್ನು ಅತ್ಯುತ್ತಮ (ಉದಿತ್), ಉತ್ತಮ (ಉದಯ್), ಪ್ರಗತಿಶೀಲ (ಉನ್ನತಿ) ಮತ್ತು ಪ್ರವರ್ಧಮಾನ ಜಿಲ್ಲೆಗಳು ಎಂದು ವಿಂಗಡಿಸಲಾಗಿದೆ. ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯಕ್ಕೆ ಅನುಸಾರವಾಗಿ ರಾಜ್ಯದ ಒಂದೊಂದು ಜಿಲ್ಲೆ ಒಂದೊಂದು ಗುಂಪಿನಲ್ಲಿದೆ.

ಶಿಫಾರಸುಗಳು

- ವಿದ್ಯಾರ್ಥಿಗಳ ಕೌಶಲ ಹೆಚ್ಚಳಕ್ಕೆ ನಿರ್ದಿಷ್ಟ ಕಾರ್ಯಕ್ರಮಗಳ ಮೂಲಕ ನೆರವು
- ನವೀನ ಮೌಲ್ಯಮಾಪನ ತಂತ್ರಗಳು, ಕಾರ್ಯಯೋಜನೆಗಳ ಮೂಲಕ ಪರಿಣಾಮಕಾರಿ ಕಲಿಕೆಗೆ ಒತ್ತು
- ಚಟುವಟಿಕೆ ಆಧಾರಿತ, ಗುಂಪು ಆಧಾರಿತ.. ಹೀಗೆ ವಿಭಿನ್ನ ಕಲಿಕಾ ತಂತ್ರಗಳ ಅಳವಡಿಕೆ
- ಕೌಶಲ ಆಧಾರಿತ ಶಿಕ್ಷಣ, ವೃತ್ತಿಶಿಕ್ಷಣಕ್ಕೆ ಒತ್ತು
- ದೃಶ್ಯ, ಶ್ರವಣ, ಪುಸ್ತಕ ಹೀಗೆ ಭಿನ್ನ ಕಲಿಕಾ ಪರಿಕರಗಳ ಬಳಕೆ
- ಕಲೆ, ಸಂಸ್ಕೃತಿ, ಕ್ರೀಡೆ, ಸಾಹಿತ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳ ಮೂಲಕ ಕಲಿಕೆ
- ಶೌಚಾಲಯ, ಕುಡಿಯುವ ನೀರು, ಫ್ಯಾನ್, ಪ್ರಯೋಗಾಲಯ ಮುಂತಾದ ಸೌಕರ್ಯಗಳನ್ನು ಒದಗಿಸುವುದು
- ಸಮುದಾಯದ ಸಹಭಾಗಿತ್ವ (ಸ್ವಯಂಸೇವಾ ಸಂಸ್ಥೆಗಳು, ಕಾರ್ಪೊರೇಟ್ ಕಂಪನಿಗಳ ನೆರವು)
- ಶಾಲೆ ತೊರೆದ ಮಕ್ಕಳು, ಅಂಗವಿಕಲರನ್ನು ಒಳಗೊಳ್ಳುವಂಥ ವಾತಾವರಣ ಸೃಷ್ಟಿಸುವುದು

6ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ



9ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ



ಪ್ರದೇಶ, ಸಮುದಾಯವಾರು ವ್ಯತ್ಯಾಸ

ವರದಿಯ ಪ್ರಕಾರ, 3, 6 ಮತ್ತು 9ನೇ ತರಗತಿಗಳ ಮಕ್ಕಳ ಕಲಿಕಾ ಸಾಮರ್ಥ್ಯದಲ್ಲಿ ಲಿಂಗವಾರು ವ್ಯತ್ಯಾಸ ಅಷ್ಟೇ ಅಲ್ಲ, ಪ್ರದೇಶವಾರು ಮತ್ತು ಸಮುದಾಯವಾರು ವ್ಯತ್ಯಾಸಗಳೂ ಇವೆ. ನಿದರ್ಶನಕ್ಕೆ ಆರನೇ ತರಗತಿಯ ಭಾಷೆ, ಗಣಿತ ಮತ್ತು ಪ್ರಾಪಂಚಿಕ ಜ್ಞಾನದ ಕಲಿಕೆಯಲ್ಲಿ ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶದ ಮಕ್ಕಳಿಗಿಂತ ನಗರ ಪ್ರದೇಶಗಳ ಮಕ್ಕಳು ಹೆಚ್ಚು ಹಿಂದುಳಿದಿದ್ದಾರೆ. ಹಾಗೆಯೇ, ಒಟ್ಟಾರೆ ಸಾಮರ್ಥ್ಯದಲ್ಲಿ ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗಿಂತ ಖಾಸಗಿ ಶಾಲೆಗಳು ಮಕ್ಕಳು ಮುಂದಿದ್ದಾರೆ. ಕೇಂದ್ರ ಸರ್ಕಾರದ ಶಾಲೆಗಳ ಮಕ್ಕಳ ಕಲಿಕಾ ಸಾಮರ್ಥ್ಯವು ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚಾಗಿದೆ. ಇನ್ನು ವಿವಿಧ ಸಮುದಾಯಗಳ ನಡುವಿನ ಕಲಿಕಾ ಸಾಮರ್ಥ್ಯದಲ್ಲಿರುವ ವ್ಯತ್ಯಾಸದ ಬಗ್ಗೆಯೂ ವರದಿ ಗಮನ ಸೆಳೆಯುತ್ತದೆ. ಕಲಿಕೆಯಲ್ಲಿ ರಾಷ್ಟ್ರೀಯ ಸರಾಸರಿಗಿಂತ ಎಸ್‌ಸಿ, ಎಸ್‌ಟಿ, ಒಬಿಸಿ ಮಕ್ಕಳು ಹಿಂದುಳಿದಿದ್ದರೆ, ಪ್ರಬಲ ಜಾತಿಗಳ ಮಕ್ಕಳು ಮುಂದಿದ್ದಾರೆ ಎಂದು ವರದಿ ಉಲ್ಲೇಖಿಸಿದೆ.

ಉತ್ತಮ ಸಾಧನೆ

ಹಿಂದಿನ ಸಮೀಕ್ಷೆಗಳಿಗೆ ಹೋಲಿಸಿದರೆ ಈ ಸಮೀಕ್ಷೆಯಲ್ಲಿ ಬಹುತೇಕ ರಾಜ್ಯಗಳ ಸಾಧನೆ ಉತ್ತಮವಾಗಿದೆ. ಪಂಜಾಬ್, ಹಿಮಾಚಲ ಪ್ರದೇಶ, ಕೇರಳ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶಗಳು ಉತ್ತಮ ಸಾಧನೆ ತೋರಿವೆ.

ರಾಷ್ಟ್ರದ ಚಿತ್ರಣವೂ ಭಿನ್ನವಿಲ್ಲ

ವರದಿಯಲ್ಲಿನ ರಾಷ್ಟ್ರ ಮಟ್ಟದ ಅಂಕಿ ಅಂಶಗಳು ಕೂಡ ಬಹುಪಾಲು ರಾಜ್ಯದ ಸ್ಥಿತಿಯನ್ನೇ ಬಿಂಬಿಸುತ್ತಿವೆ. ಹಿರಿಯ ಪ್ರಾಥಮಿಕ, ಪ್ರೌಢಶಾಲಾ ಹಂತದ ಮಕ್ಕಳಿಗೆ ಗಣಿತ, ವಿಜ್ಞಾನ ವಿಷಯಗಳು ಕಬ್ಬಿಣದ ಕಡಲೆಯಾಗಿವೆ. ಉದಾಹರಣೆಗೆ 6ನೇ ತರಗತಿಯ ಶೇ 53ರಷ್ಟು ಮಕ್ಕಳಿಗೆ ಮಾತ್ರ 10ರವರೆಗೆ ಮಗ್ಗಿ ಬರುತ್ತದೆ. 3ನೇ ತರಗತಿಯ ಶೇ 55 ಮಕ್ಕಳು ಮಾತ್ರ 1ರಿಂದ 99ರವರೆಗಿನ ಅಂಕಿಗಳನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಜೋಡಿಸಬಲ್ಲರು. ಎರಡು ಅಂಕಿಗಳ ಸಂಖ್ಯೆಯನ್ನು ಕೂಡಿಸಲು ಮತ್ತು ಕಳೆಯಲು ಬರುವ ಮಕ್ಕಳ ಪ್ರಮಾಣ ಶೇ 58ರಷ್ಟು.

3ನೇ ತರಗತಿ ವಿಭಾಗದಲ್ಲಿ ಕೇಂದ್ರ ಸರ್ಕಾರದ ಶಾಲೆಗಳ ಮಕ್ಕಳು ಗಣಿತ ವಿಷಯದಲ್ಲಿ ಅತ್ಯಂತ ಕಳಪೆ ಸಾಧನೆ ತೋರಿದ್ದಾರೆ. 6ನೇ ತರಗತಿ ವಿಭಾಗದಲ್ಲಿ ಅನುದಾನಿತ ಮತ್ತು ರಾಜ್ಯ ಸರ್ಕಾರಿ ಶಾಲೆಗಳ ಮಕ್ಕಳು ಗಣಿತ ವಿಷಯದಲ್ಲಿ ತುಂಬಾ ದುರ್ಬಲರಾಗಿದ್ದಾರೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದಲ್ಲಿ ಗಮನಾರ್ಹ ಅಂತರ ಇರುವುದನ್ನೂ ಸಮೀಕ್ಷೆ ವರದಿ ತೋರಿಸಿದೆ.

ರಾಷ್ಟ್ರೀಯ

ಮಗುವಿನ ಪಿತೃತ್ವ ಪರೀಕ್ಷೆಗೆ ಹೈಕೋರ್ಟ್ ನಿರಾಕರಣೆ

ಮುಂಬೈ (ಪಿಟಿಐ): ವ್ಯಕ್ತಿಯೊಬ್ಬರು ತನ್ನ ಪತ್ನಿ ವಿರುದ್ಧ ವ್ಯಭಿಚಾರದ ಆರೋಪ ಮಾಡಿದ ಮಾತ್ರಕ್ಕೆ, ಅವರ ಅಪ್ರಾಪ್ತ ವಯಸ್ಸಿನ ಮಗುವನ್ನು ಪಿತೃತ್ವ ಪರೀಕ್ಷೆಗೆ ಒಳಪಡಿಸಲು ಆಗುವುದಿಲ್ಲ ಎಂದು ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠ ತಿಳಿಸಿದೆ.

ಈ ಕುರಿತು ಬಾಲಕನ ಡಿಎನ್‌ಎ ಪರೀಕ್ಷೆಗೆ ನಿರ್ದೇಶಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ನ್ಯಾಯಮೂರ್ತಿ ಆರ್.ಪಿ.ಜೋಶಿ ಅವರ ಪೀಠ ರದ್ದುಗೊಳಿಸಿದೆ. ಈ ರೀತಿಯ ಆನುವಂಶಿಕ ಪರೀಕ್ಷೆಯನ್ನು ಅಸಾಧಾರಣ ಪ್ರಕರಣಗಳಲ್ಲಿ ಮಾತ್ರ ಆದೇಶಿಸಲಾಗುತ್ತದೆ ಎಂದು ಪೀಠ ಹೇಳಿದೆ.

ವ್ಯಭಿಚಾರದ ಆಧಾರದ ಮೇಲೆ ಪುರುಷನು ಪತ್ನಿಯಿಂದ ವಿಚ್ಛೇದನ ಪಡೆಯಲು ಅರ್ಹನಾದ ಮಾತ್ರಕ್ಕೆ ಅದು, ಮಗುವಿನ ಡಿಎನ್‌ಎ ಪರೀಕ್ಷೆಗೆ ನಿರ್ದೇಶಿಸುವ ಆದೇಶವನ್ನು ಅಂಗೀಕರಿಸುವುದಿಲ್ಲ ಎಂದು ಪೀಠ ತಿಳಿಸಿದೆ. ಈ ಕುರಿತು ಪೀಠ ಜುಲೈ 1ರಂದು ತೀರ್ಪು ನೀಡಿದ್ದು, ಅದರ ಪ್ರತಿ ಬುಧವಾರ ಲಭ್ಯವಾಗಿದೆ.

ಕೌಟುಂಬಿಕ ನ್ಯಾಯಾಲಯವು 12 ವರ್ಷದ ಬಾಲಕನ ಪಿತೃತ್ವ ಪರೀಕ್ಷೆಗೆ ಒಳಪಡಿಸುವಂತೆ 2020ರ ಫೆಬ್ರುವರಿಯಲ್ಲಿ ನೀಡಿದ್ದ ಆದೇಶವನ್ನು ಪ್ರಶ್ನಿಸಿ, ಬಾಲಕ ಮತ್ತು ಆತನ ತಾಯಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ನಡೆಸಿತ್ತು.

ಪರೀಕ್ಷೆಯನ್ನು ಒಪ್ಪಿಕೊಳ್ಳುವ ಅಥವಾ ನಿರಾಕರಿಸುವ ನಿರ್ಧಾರವನ್ನು ತೆಗೆದುಕೊಳ್ಳುವ ಸಾಮರ್ಥ್ಯವಿಲ್ಲದ ವ್ಯಕ್ತಿಯನ್ನು, ವಿಶೇಷವಾಗಿ ಅಪ್ರಾಪ್ತ ಮಕ್ಕಳನ್ನು ರಕ್ತ ಪರೀಕ್ಷೆಗೆ ಒಳಪಡಿಸುವಂತೆ ಒತ್ತಾಯಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿರುವ ತೀರ್ಪನ್ನು ಪೀಠ ಉಲ್ಲೇಖಿಸಿದೆ.

ತಂದೆ, ತಾಯಿ ನಡುವಿನ ಹೋರಾಟದಲ್ಲಿ ಮಗು ಸಾಧನವಾದಾಗ, ನ್ಯಾಯಾಲಯವು ಆ ಮಗುವಿನ ಹಕ್ಕುಗಳ ರಕ್ಷಕನಾಗಬೇಕು ಎಂದು ಹೈಕೋರ್ಟ್ ಒತ್ತಿ ಹೇಳಿದೆ.

ವಿಸ್ತೃತ ಶ್ರೇಣಿಯ ಜಲಾಂತರ್ಗಾಮಿ ನಿಗ್ರಹ ರಾಕೆಟ್ ಪರೀಕ್ಷೆಯು ಯಶಸ್ವಿಯಾಗಿ ನಡೆಯಿತು —ಪಿಟಿಐ ಚಿತ್ರ

ಜಲಾಂತರ್ಗಾಮಿ: ವಿಸ್ತೃತ ಶ್ರೇಣಿ ರಾಕೆಟ್ ವ್ಯವಸ್ಥೆ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಜಲಾಂತರ್ಗಾಮಿಗಳ ಮೇಲಿನ ದಾಳಿಗೆ ಬಳಸುವ ಕ್ಷಿಪಣಿಗಳನ್ನು ಹೊಡೆದುರುಳಿಸಲು ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ವಿಸ್ತೃತ ಶ್ರೇಣಿಯ ರಾಕೆಟ್‌ಗಳ ವ್ಯವಸ್ಥೆಯ (ಇಆರ್‌ಎಎಸ್‌ಆರ್) ಪರೀಕ್ಷೆ ಯಶಸ್ವಿಯಾಗಿದೆ. ಜೂನ್ 23ರಿಂದ ಜುಲೈ7ರವರೆಗೆ ಯುದ್ಧನೌಕೆ ಐಎನ್‌ಎಸ್ ಕವರತ್ತಿ ಮೂಲಕ ಭಾರತೀಯ ನೌಕಾಪಡೆಯು ಈ ಪರೀಕ್ಷೆ ನಡೆಸಿದೆ. ಈ ರಾಕೆಟ್ ವ್ಯವಸ್ಥೆಯು ಭಾರತೀಯ ನೌಕಾಪಡೆಯ ಬಲ ಹೆಚ್ಚಿಸುವಲ್ಲಿ ಮಹತ್ತರ ಪಾತ್ರ ವಹಿಸಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾಹಿತಿ ನೀಡಿದ್ದಾರೆ. ವಿವಿಧ ಶ್ರೇಣಿಯ ಒಟ್ಟು 17 ಇಆರ್‌ಎಎಸ್‌ಆರ್ ರಾಕೆಟ್‌ಗಳನ್ನು ಪರೀಕ್ಷಿಸಲಾಗಿದ್ದು, ಡಿಆರ್‌ಡಿಒ ಇವುಗಳನ್ನು ಅಭಿವೃದ್ಧಿಪಡಿಸಿದೆ.

ಛತ್ತೀಸಗಢ: ಶರಣಾದ 12 ನಕ್ಸಲರು

ದಂತೇವಾಡ: ಛತ್ತೀಸಗಢದ ದಂತೇವಾಡ ಜಿಲ್ಲೆಯಲ್ಲಿ ಬುಧವಾರ 12 ನಕ್ಸಲರು ಶರಣಾಗಿದ್ದಾರೆ. ಈ ಪೈಕಿ 9 ಜನರ ಸುಳಿವು ನೀಡಿದವರಿಗೆ ₹28.50 ಲಕ್ಷ ಬಹುಮಾನವನ್ನು ಸರ್ಕಾರ ಈ ಹಿಂದೆ ಘೋಷಿಸಿತ್ತು.

ಈ ಹಿಂದೆ ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಿದ್ದ ಮಾವೋವಾದಿ ಸಂಘಟನೆಯ ಸಕ್ರಿಯ ಸದಸ್ಯರಾದ ಚಂದ್ರಣ್ಣ (52), ಅಮಿತ್ (26) ಸೇರಿ 12 ಮಂದಿ ಶರಣಾಗಿದ್ದಾರೆ.

'ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರಲು ಆರಂಭಿಸಿದ 'ಲೋನ್ ವರಾರ್ಟು' ಅಭಿಯಾನದಡಿ ಈವರೆಗೆ ಒಟ್ಟು 1005 ನಕ್ಸಲರು ಶರಣಾಗಿದ್ದಾರೆ' ಎಂದು ದಂತೇವಾಡದ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರೈ ತಿಳಿಸಿದ್ದಾರೆ.

ಅಹಿಂಸೆ

ನುಡಿ ಬೆಳಗು

ಪಿ.ಚಂದ್ರಿಕಾ

ಅವನ ಮೇಲೆ ಗಾಂಧೀಜಿಯವರ ಪ್ರಭಾವ ವಿಪರೀತ ಎನ್ನುವ ಹಾಗೇ ಇದೆ. ಅವರು ತಮ್ಮ ಚಪ್ಪಲಿಗಳನ್ನು ಸತ್ತ ಪ್ರಾಣಿಯ ಚರ್ಮದಿಂದ ಮಾತ್ರ ಮಾಡಿಸಿಕೊಳ್ಳುತ್ತಿದ್ದರು. ಅದಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಅವುಗಳನ್ನು ಅಹಿಂಸಕ ಚಪ್ಪಲಿಗಳು ಎಂದು ಕರೆಯುತ್ತಿದ್ದರು. ಈ ಘಟನೆಯಿಂದ ಪ್ರಭಾವಿತಗೊಂಡ ಅವನು ಒಂದು ದಿವ್ಯ ಪ್ರತಿಜ್ಞೆಯನ್ನು ತೆಗೆದುಕೊಂಡಿದ್ದ- ಸಜೀವವಾದ ಯಾವುದನ್ನೂ ನಮ್ಮ ಉದ್ದೇಶಗಳಿಗೆ ಕೊಲ್ಲಬಾರದು ಎಂದು. ಹೀಗಾಗಿ, ತಾನೂ ಮಹಾತ್ಮರ ಹಾಗೆ ಸಾಧಿಸಬೇಕು, ಜಗತ್ತು ತನ್ನನ್ನು ಕೊಂಡಾಡಬೇಕು ಎಂದು ಭಾವಿಸಿ ಮನೆ ಕಟ್ಟುವಾಗ ಮರವನ್ನು ಎಲ್ಲೂ ಬಳಸಬಾರದು ಎಂದು ನಿರ್ಧಾರ ಮಾಡಿದ್ದ.

ಆದರೆ, ಪರಿಚಯದ ಬಡಗಿಯೊಬ್ಬ, 'ನೂರು ವರ್ಷಗಳ ಹಳೆಯದಾದ ಮರವೊಂದು ನಮ್ಮ ಹೊಲದಲ್ಲಿ ಬಿದ್ದು ಹೋಗಿದೆ. ಅದನ್ನು ನಿಮ್ಮ ಮನೆಗೆ ಬಳಸಬಹುದಲ್ಲವೇ' ಎಂದ. ಅದಕ್ಕೆ ಅವನು ಇಡೀ ಮನೆಗೆ ಅದು ಸಾಲುತ್ತದೆಯೇ ಎಂದು ಕೇಳಿದ. ನಾಲ್ಕಾಳು ತಮ್ಮೆರಡೂ ಕೈಗಳಿಂದ ತಬ್ಬಿದರೂ ಸಾಕಾಗಲ್ಲ ಅಷ್ಟು ದಪ್ಪದ ಮರವದು ಎಂದು ಹೇಳಿದ ಬಡಗಿ. ಅವನಿಗೆ ನಿಜಕ್ಕೂ ಖುಷಿಯಾಗಿ ಮನೆಗೆ ಇದೇ ಮರವನ್ನು ಬಳಸುವ ಎಂದ. ಮರದ ಗುಣಮಟ್ಟ ನಿಜಕ್ಕೂ ಚೆನ್ನಾಗಿತ್ತು. ಅವನು ಎಲ್ಲರ ಬಳಿ ಇಷ್ಟನ್ನೂ ಹೇಳಿಕೊಳ್ಳುತ್ತಾ ಬಂದ. ಎಲ್ಲರೂ ಇದೇನು ಹುಚ್ಚಾಟ ಎಂದು ಬೈದರು. 'ನಿಮಗೆ ಗೊತ್ತಿಲ್ಲ, ಮರಗಳ ನಿಟ್ಟುಸಿರು ನಮ್ಮನ್ನು ಬಿಡದು. ಪೂರ್ಣಾಯುವಾಗದೆ ನಾವದನ್ನು ಕಡಿಯಬಾರದು' ಎಂದು ಸಮಜಾಯಿಷಿ ನೀಡಿದ.

ದುರದೃಷ್ಟವಶಾತ್ ಊರಿನ ತೇರಿಗೆ ಬೇಕೆಂದು ಅವನು ಕೊಂಡಿಟ್ಟ ಆ ಮರದ ಅರ್ಧದಷ್ಟನ್ನು ಹೇಳದೆ ಆ ಬಡಗಿ ಬಳಸಿಕೊಂಡು ಬಿಟ್ಟಿದ್ದ. ಇದರಿಂದ ಆತ ಜಗಳ ಆಡಿದ. ಆದರೆ ಆ ಮರ ವಾಪಾಸು ಬರುತ್ತದೆಯೇ? ಉಳಿದ ಕೆಲಸಕ್ಕೆ ಎಲ್ಲಿಂದ ಮರವನ್ನು ತರುವುದು ಎಂಬ ಧರ್ಮ ಸಂಕಟಕ್ಕೆ ಬಿದ್ದ. ಕೇಳಿದ, 'ಇನ್ನಾವುದಾದರೂ ಮರ ಬಿದ್ದಿದೆಯೇ?' 'ಇಲ್ಲ, ಕಾಯಬೇಕು, ಕಾಯೋಣ' ಎಂದ ಬಡಗಿ.

ಬಹಳಷ್ಟು ತಿಂಗಳುಗಳೇ ಕಳೆದರೂ ಮರ ಬಿದ್ದ ಸುದ್ದಿ ಬರಲಿಲ್ಲ. ಮಳೆಗಾಲವೂ ಬಂತು. ಆಗ ಅವನು ಪ್ರಾರ್ಥಿಸ ತೊಡಗಿದ, 'ಒಂದು ಬಲಿತ ಮರವಾದರೂ ಬೀಳಲಿ. ನನ್ನ ಮನೆ ಪೂರ್ಣವಾಗಲಿ' ಹೆಂಡತಿ ಹೇಳಿದಳು; 'ಇದೆಂಥಾ ಪ್ರಾರ್ಥನೆ? ಸಾಯಲಿ ಎಂದು ಬಯಸುವುದು ಸಾಯಿಸಿದಷ್ಟೇ ಕ್ರೂರ ಅಲ್ಲವೇ? ಹಿಂಸೆಯ ಪರಾಕಾಷ್ಠೆ ಇದಲ್ಲವೆ? ನಿನ್ನ ಮರಕ್ಕಿಂತ ಮನೆಯೇ ಹೆಚ್ಚಾಯಿತೇ?' ತಬ್ಬಿಬ್ಬಾದ ಅವ ಹೇಳಿದ, 'ಈಗ ನಾನೇನು ಮಾಡಲಿ? ಕತ್ತಲೆಯಲ್ಲಿ ಕಣ್ಣನ್ನು ಕಟ್ಟಿಕೊಂಡಂತೆ ಆಗಿರುವೆ. ಖಂಡಿತಾ ದಾರಿ ಕಾಣುತ್ತಿಲ್ಲ'.

ಸರಳವಾದಂತೆ ಕಂಡರೂ ಮಹಾತ್ಮರ ದಾರಿ ದುರ್ಗಮ. ಮಹಾತ್ಮ ಯಾವ ಪ್ರಾಣಿಯೂ ಸಾಯಲಿ ಎಂದು ಬಯಸಲಿಲ್ಲ. ಯಾರೇ ಆಗಲಿ ಹಾಗೆ ಬಯಸಿದ ತಕ್ಷಣ ಮಾನವೀಯತೆಯ ಎಲ್ಲ ದಾರಿಗಳು ಮುಚ್ಚಿ ಹೋಗುತ್ತವೆ. ಹಾದಿಯಲ್ಲಿ ತಾವಾಗೇ ಉಪಯೋಗಕ್ಕೆ ಬಂದರೆ ಬಳಸಿಕೊಳ್ಳೋಣ, ಇಲ್ಲವಾದರೆ ಇಲ್ಲ. ಕಾರ್ಯದ ಒಳಾರ್ಥಗಳನ್ನು ಗ್ರಹಿಸದೆ ಯಾವುದೂ ದಕ್ಕುವುದಿಲ್ಲ.

ಗುಂಡಣ್ಣ

ಪದಬಂಧ 6099

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಾಮಾನುಗಳನ್ನು ಕೊಂಡುಕೊಳ್ಳುವವನು (3)
2.ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ (3)
4.ಆರೋಹದ ನಂತರ ಇಳಿಯುವಿಕೆ (4)
7.ಮಾಡಿದ ಕೆಲಸಕ್ಕೆ ಪ್ರತಿಯಾಗಿ ದೊರೆತ ಲಾಭ (4)
9.ವನದಲ್ಲಿದ್ದವನದು ಹೊಸ ಪ್ರಾಯ (5)
12.ಸ್ವಾಮಿಗಿರುವ ಆತ್ಮಾಭಿಮಾನ (4)
13.ದೃಢಪಡಿಸುವ ಸಾಧನ (4)
15.ಕಕ್ಷದಲ್ಲಿ ಗೋಚರಿಸಿದ ತಾರೆ (3)
16.ಒಳ್ಳೆಯ ಯೋಗ (3)

ಮೇಲಿಂದ ಕೆಳಕ್ಕೆ
1.ಅಂಗಿ ಅರ್ಧ ತೊಟ್ಟಿಕೊಳ್ಳುವಾಗ ತಿರುಗಿರುವ ಪತ್ನಿ (3)
3.ಕುಟಿಲತೆ ತೋರುವಲ್ಲಿನ ಸಂಕೀರ್ಣ (3)
5.ವರ್ಣನೆಯಲ್ಲಿನ ಅಕ್ಷರ (2)
6.ಇದು ಕುದುರೆಯ ಮುಖ (5)
7.ಪ್ರತಿಭಾವಂತನಿಗೆ ಹೀಗೆ ವರ್ಚಸ್ಸು ಬೀರು (5)
8.ಫಲಕದ ಹತ್ತಿರವಿರುವ ಹಣ್ಣು (2)
10.ಅಭಿನಯಿಸುವಾಗ ತೋರಿಸಿದ ಹೊಕ್ಕುಳು (2)
11.ಪೂರ್ತಿ ಅರ್ಥಕೊಡುವ ಶಬ್ದಗಳ ಗುಂಪು ಉಲ್ಟಾ ಆಗಿದೆ (2)
12.ಹಿಡಿತಕ್ಕೊಂದು ಪರ್ಯಾಯ ಪದ (3)
14.ಆತುರವಾಗಿ ಓಡುತ್ತಿರುವ ಕುದುರೆ (3)



6098ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಧ್ವಾನ 3.ವಿಕ್ರಮ
4.ಗಗನ 6.ಕಾಟಾಚಾರ
8.ಯಥೋಚಿತ 10.ಸ್ವರ
11.ಸುಂಕ 12.ಅಂತರಂಗ
14.ಹರಿಗೋಲು 15.ಲಾವಣಿ
16.ತೊಗಟೆ 17.ಗೆಜ್ಜಲು

ಮೇಲಿಂದ ಕೆಳಕ್ಕೆ:
2.ನಗರ 3.ವಿನಯ
5.ದೂತ 7.ಚಾಕರ
9.ಚಿಲುಕ 10.ಸ್ವಗತ
11.ಸುಂದರಿ 12.ಅಂಬು
13.ಗಲಾಟೆ 14.ಹಣಿಗೆ

ಸುಡೊಕು 6483

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

6482 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಜುಲೈ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪೂರ್ಣಿಮಾ ಗಂ. 26-07 **ನಕ್ಷತ್ರ:** ಪೂರ್ವಾಷಾಢ ಅಹೋರಾತ್ರ **ಯೋಗ:** ಇಂದ್ರ ಗಂ. 21-38 **ಕರಣ:** ವಿಷ್ಟಿ ಗಂ. 13-56, ಮಿಥುನ ಮಾಸದ 26 ನೇ ದಿನ. **ಮಳೆ ನಕ್ಷತ್ರ:** ಪುನರ್ವಸು 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30–03-00, **ಸೂರ್ಯೋದಯ:** 06-13 **ಸೂರ್ಯಾಸ್ತ:** 06-58, ಮುಸ್ಲಿಂ ದಿನಾಂಕ : 14 ಮೊಹರಮ್, **ದಿನ ವಿಶೇಷ:** ಗುರು ಪೂರ್ಣಿಮಾ, ವ್ಯಾಸ ಪೂಜಾ, ಆಷಾಢ ಪೂರ್ಣಿಮಾ, ಅದೃಷ್ಟ ಸಂಖ್ಯೆ : 1, 7

ಮೇಷ: ಬದುಕಿನ ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದುಡಿದು ಯಶಸ್ಸನ್ನು ಹೊಂದುವಿರಿ. ಜೀವನದ ಮುಂದಿನ ದಿನಗಳಿಗೆ ದೀರ್ಘಕಾಲೀನ ಯೋಜನೆಗಳನ್ನು ಮಾಡುವಿರಿ. ವಾಹನ ಚಾಲಕರು ಎಚ್ಚರವಿರಲಿ.

ವೃಷಭ: ಸರ್ಕಾರಿ ನೌಕರರಿಗೆ ಕೆಲಸದ ವಿಚಾರದಲ್ಲಿ ನಾನಾ ರೀತಿಯಲ್ಲಿ ಅಡ್ಡಿ-ಆತಂಕ ಕಾಡಬಹುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅನೇಕ ಅವಕಾಶಗಳು ಒದಗಿ ಬರುತ್ತವೆ. ಶನೈಶ್ಚರನ ಆರಾಧನೆ ಮಾಡಿ.

ಮಿಥುನ: ನಿವೇಶನ ಖರೀದಿ ಹಾಗೂ ಕಟ್ಟಡ ನಿರ್ಮಾಣದಂಥ ಕೆಲಸಗಳಿಗೆ ಪೂರಕ ವಾತಾವರಣ ದೊರೆಯಲಿದೆ. ವಾಹನ ಚಲಾಯಿಸುವಾಗ ಎಚ್ಚರಿಕೆ ಅತ್ಯಗತ್ಯ. ಕುಟುಂಬದ ಅಭಿವೃದ್ಧಿಯಲ್ಲಿ ಅವಿರತ ಪ್ರಯತ್ನ ಫಲಕಾರಿ.

ಕರ್ಕಾಟಕ: ಅತ್ತೆ-ಸೊಸೆ, ತಾಯಿ-ಮಗಳು ಸಣ್ಣಪುಟ್ಟ ವಿಚಾರಗಳಿಗೆ ಮನಸ್ತಾಪ ಮಾಡಿಕೊಳ್ಳದೆ ಸಾಮರಸ್ಯದ ಜೀವನ ನಡೆಸಿ. ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಲಾಭ ಪಡೆದುಕೊಳ್ಳುವಿರಿ.

ಸಿಂಹ: ಯಾವ ವಿಷಯದಲ್ಲಿ ಹಿಂದುಳಿದಿರುವಿರಿ ಎಂದು ಕಂಡುಕೊಂಡು ತಜ್ಞರಿಂದ ಅದಕ್ಕೆ ಪರಿಹಾರ ಕಂಡುಕೊಳ್ಳಿರಿ. ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣವೆಂಬುವುದು ಅರಿತು ಅವರನ್ನು ಕ್ಷಮಿಸಿ ತಿದ್ದಿ.

ಕನ್ಯಾ: ಸಮಾಜದಲ್ಲಿ ಬೆರೆಯುವುದರಿಂದ ಅಥವಾ ಅಕ್ಕ-ಪಕ್ಕದವರಲ್ಲಿ ಮಾತನಾಡುವುದರಿಂದ ಉದ್ಯೋಗಕ್ಕೆ ಸಂಬಂಧಿಸಿದಂತೆ ಅನುಕೂಲವಾಗುವುದು. ಪತ್ರಿಕೋದ್ಯಮದವರಿಗೆ ವೃತ್ತಿಯಲ್ಲಿ ನಾಯಕತ್ವ ಹೊಂದುವ ಅವಕಾಶ ಸಿಗಲಿದೆ.

ತುಲಾ: ಕುಟುಂಬದೊಡನೆ ನಡೆದ ವೈಮನಸ್ಯವನ್ನು ಕ್ಷಮಾಯಾಚಿಸಿ, ಬಗೆಹರಿಸಿಕೊಳ್ಳಿ. ಸ್ನೇಹಿತರೊಂದಿಗೆ ಮರೆಯಲಾಗದ ಕ್ಷಣಗಳನ್ನು ಕಳೆಯುವಿರಿ. ವಿದ್ಯಾರ್ಥಿಗಳಿಗೆ ಪ್ರಯತ್ನ ಅತ್ಯಗತ್ಯವಾಗುವುದು.

ವೃಶ್ಚಿಕ: ಇಚ್ಛಾಶಕ್ತಿಯೊಂದಿಗೆ ಪ್ರಯತ್ನವೂ ಉತ್ತಮವಾಗಿರುವುದರಿಂದ ನೀವಂದುಕೊಂಡ ಕಾರ್ಯ ಅದ್ಭುತವಾಗಿ ನಡೆಯಲಿದೆ. ಉತ್ತಮ ಅವಕಾಶ ಲಭಿಸುವುದು.

ಧನು: ಸ್ವತಂತ್ರ ಆಲೋಚನೆಯಿಂದ ಮಾಡಿದ ಕೆಲಸಗಳೇ ಗುಣಮಟ್ಟದ್ದಾಗಿರುವುದರಿಂದ ಬೇರೆಯವರ ಕೆಲಸವನ್ನು ನಕಲುಪಡಿಸುವ ಪ್ರಯತ್ನ ಮಾಡದಿರಿ. ಸಂಪಾದಿಸಿದ ಹಣವನ್ನು ಸನ್ಮಾರ್ಗದಲ್ಲಿ ಬಳಸಿ.

ಮಕರ: ಪ್ರತಿದಿನವೂ ಒಂದೇ ರೀತಿಯ ದಿನಚರಿಯನ್ನು ಪಾಲಿಸುತ್ತಿರುವವರು ಅದರಿಂದ ಬೇಸತ್ತು ಹೋಗುವಿರಿ. ಬೇರೆಯವರ ಸಂಸಾರವನ್ನು ಟೀಕಿಸುವ ಮೊದಲು ಸಂಸಾರದ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಿ.

ಕುಂಭ: ಬದಲಾಗುತ್ತಿರುವ ಮನಃಸ್ಥಿತಿಯಿಂದಾಗಿ ನಿಕಟವರ್ತಿಗಳಿಗೆ ಗೋಳೆನ್ನಿಸಬಹುದು. ಪೋಷಕರಾದ ನೀವು ಮಕ್ಕಳ ಅಗತ್ಯಗಳನ್ನು ಪೂರೈಸಿ. ಮನೆಯ ಹಿರಿಯರಿಗೆ ಸರಿಯಾದ ಗೌರವ ಸಲ್ಲಿಸಿ.

ಮೀನ: ದೇವರನ್ನು ಸ್ತುತಿಸಿದ ಅದರ ಪುಣ್ಯಫಲಗಳ ಅನುಭವ ಮಕ್ಕಳ ಮೂಲಕ ತಿಳಿಯುತ್ತದೆ. ಒಪ್ಪಂದ ವ್ಯವಹಾರಗಳಿಂದ ವರಮಾನ ಹೆಚ್ಚಲಿದೆ. ಬಡ ವಿದ್ಯಾರ್ಥಿಗೆ ಕೈಲಾದ ಸಹಾಯ ಮಾಡಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,522
ಇಂದಿನ ಅಂತ್ಯ: 25,476
ದಿನದ ಗರಿಷ್ಠ: 25,424
46

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹600
	12 ಕ್ಕೆ	₹80
ಮೈಸೂರು:	100 ಕ್ಕೆ	₹610

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹336-541
ದ್ವಿತಳಿ (ಬಿ.ವಿ)	₹390-689

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹201
ಆರ್‌ಎಸ್‌ಎಸ್-5	₹195
ಗುಡ್ ಲಾಟ್	₹183

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1405 (1405)
ಸೋಯಾ (ರಿಫೈನ್ಡ್)	₹1205 (1210)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1180 (1170)

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ತೀರ್ಥಹಳ್ಳಿ/ಶಿವಮೊಗ್ಗ	
ಚಾಲಿ	38689-42399	ಬಿಳಿಗೋಟು	24889-30712	ತಟ್ಟಬೆಟ್ಟೆ	24609-31099
ಚಿಪ್ಪು	24189-29899	ಚಾಲಿ	33209-40499	**ಶಿವಮೊಗ್ಗ**	
ಕೋಕ	6869-19069	ಕೋಕ	18109-26900	ಬೆಟ್ಟೆ	52272-59829
ಫ್ಯಾಕ್ಟರಿ	4789-24829	ಕೆಂಪುಗೋಟು	22312-22312	ಗೊರಬಲು	18188-30239
ಹೊಸಚಾಲಿ	35001-42099	ರಾಶಿ	41529-46299	ರಾಶಿ	45000-57299
				ಸರಕು	61699-85196

ಚುಟುಕು ಸುದ್ದಿ

ಗೋಲ್ಡನ್ ವೀಸಾ ಯುಎಇ ಸ್ಪಷ್ಟನೆ

ದುಬೈ (ಪಿಟಿಐ): ನಿರ್ದಿಷ್ಟ ರಾಷ್ಟ್ರಗಳ ಪ್ರಜೆಗಳಿಗೆ ಜೀವಮಾನ ಗೋಲ್ಡನ್ ವೀಸಾ ನೀಡಲಿದೆ ಎಂಬ ಮಾಧ್ಯಮಗಳಲ್ಲಿನ ವರದಿಗಳನ್ನು ಯುಎಇ ಸರ್ಕಾರ ತಳ್ಳಿಹಾಕಿದೆ.

'ಗೋಲ್ಡನ್ ವೀಸಾ ವಿತರಣೆಗೆ ಸಂಬಂಧಿಸಿ ಅರ್ಜಿಗಳ ಪರಿಶೀಲನೆ ಹಾಗೂ ವಿಲೇವಾರಿ ಪ್ರಕ್ರಿಯೆಗೆ ಯುಎಇ ಅಧಿಕಾರಿಗಳು ಚಾಲನೆ ನೀಡಿದ್ದಾರೆ ಎಂಬುದಾಗಿ ಕೆಲ ಮಾಧ್ಯಮಗಳು ವರದಿ ಮಾಡಿವೆ. ಇಂತಹ ಯಾವ ಪ್ರಕ್ರಿಯೆಯೂ ನಡೆಯುತ್ತಿಲ್ಲ. ಈ ಪ್ರಕ್ರಿಯೆ ಮೂಲಕ ಗೋಲ್ಡನ್ ವೀಸಾ ಪಡೆಯಬಹುದು ಎಂದು ತಪ್ಪಾಗಿ ಅರ್ಥೈಸಲಾಗಿದೆ' ಎಂದು ಯುಎಇ ಫೆಡರಲ್ ಪೌರತ್ವ, ಕಸ್ಟಮ್ಸ್ ಮತ್ತು ಬಂದರು ಭದ್ರತಾ ಪ್ರಾಧಿಕಾರ (ಐಸಿಪಿ) ತಿಳಿಸಿದೆ. ಗೋಲ್ಡನ್ ವೀಸಾ ಪಡೆಯಲು ಕೆಲವು ನಿಬಂಧನೆ, ಷರತ್ತು ಮತ್ತು ಕಾನೂನುಗಳಿದ್ದು, ಈ ಕುರಿತ ಎಲ್ಲ ಅರ್ಜಿಗಳನ್ನು ಸರ್ಕಾರವೇ ನಿರ್ವಹಿಸುತ್ತದೆ. ಅದಕ್ಕಾಗಿ ಯಾವುದೇ ಮಧ್ಯವರ್ತಿಗಳು ಇಲ್ಲ ಎಂದೂ ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

09-07-2025	
ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	7900-8000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1178 (1168)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1260)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	95,600 (96,500)
ಬೆಳ್ಳಿ ಕೆ.ಜಿಗೆ	1,07,400 (1,07,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹29600-29600
ಬೆಂಗಳೂರು	₹20000-25000
ತುಮಕೂರು	₹21500-23600

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಜಿಯೊ ಐಪಿಒ ಈ ವರ್ಷ ಇಲ್ಲ

ಷೇರುಪೇಟೆ ಪ್ರವೇಶಕ್ಕೆ ಮುನ್ನ ಮಾರುಕಟ್ಟೆ ಮೌಲ್ಯ ಹೆಚ್ಚಿಸಿಕೊಳ್ಳಲು ಆಲೋಚನೆ

ನವದೆಹಲಿ/ಸಿಡ್ನಿ (ರಾಯಿಟರ್ಸ್): ಭಾರತದ ದೂರಸಂಪರ್ಕ ಹಾಗೂ ಡಿಜಿಟಲ್ ಸೇವಾ ವಲಯದ ದೈತ್ಯ ಕಂಪನಿ ರಿಲಯನ್ಸ್ ಜಿಯೊ ಪ್ಲಾಟ್‌ಫಾರ್ಮ್ಸ್ ತನ್ನ ಸಾರ್ವಜನಿಕ ಷೇರು ಹಂಚಿಕೆಯನ್ನು (ಐಪಿಒ) ಈ ವರ್ಷ ನಡೆಸದೆ ಇರಲು ತೀರ್ಮಾನಿಸಿದೆ.

ಮಾರುಕಟ್ಟೆ ತಜ್ಞರು ಜಿಯೊ ಮೌಲ್ಯವು 100 ಬಿಲಿಯನ್ ಡಾಲರ್ (ಸರಿಸುಮಾರು ₹8.57 ಲಕ್ಷ ಕೋಟಿ) ಎಂದು ಅಂದಾಜಿಸಿದ್ದಾರೆ. ಇನ್ನಷ್ಟು ಹೆಚ್ಚಿನ ವರಮಾನ, ಇನ್ನಷ್ಟು ಹೆಚ್ಚಿನ ಚಂದಾದಾರರನ್ನು ಹೊಂದುವ ಬಯಕೆಯು ಜಿಯೊ ಕಂಪನಿಗೆ ಇದೆ. ಡಿಜಿಟಲ್ ಸೇವೆಗಳನ್ನು ಇನ್ನಷ್ಟು ವಿಸ್ತರಿಸುವ ಬಯಕೆಯೂ ಅದಕ್ಕೆ ಇದೆ. ಹೀಗೆ ಮಾಡಿದಾಗ ಐಪಿಒ ಪ್ರಕ್ರಿಯೆಗೆ ಮೊದಲು ಕಂಪನಿಯ ಮೌಲ್ಯವು ಇನ್ನಷ್ಟು ಹೆಚ್ಚಾಗುತ್ತದೆ ಎನ್ನುವ ಲೆಕ್ಕಾಚಾರ ಇದೆ ಎಂದು ಮೂಲಗಳು ಹೇಳಿವೆ.

ಜಿಯೊ ಪ್ಲಾಟ್‌ಫಾರ್ಮ್ಸ್‌ನ ಶೇಕಡ 80ರಷ್ಟು ವರಮಾನವು ದೂರಸಂಪರ್ಕ ವಹಿವಾಟಿನಿಂದ ಬಂದಿದೆ. ಜಿಯೊ ಕಂಪನಿಯಲ್ಲಿ ಗೂಗಲ್ ಮತ್ತು ಮೆಟಾ ಕೂಡ ಹೂಡಿಕೆ ಮಾಡಿವೆ. ಅಲ್ಲದೆ, ಜಿಯೊ ಕಂಪನಿಯು ಕೃತಕ ಬುದ್ಧಿಮತ್ತೆ (ಎ.ಐ) ಮೂಲಸೌಕರ್ಯಕ್ಕಾಗಿ ಎನ್‌ವಿಡಿಯಾ ಕಂಪನಿಯ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ.

ಜಿಯೊ ಕಂಪನಿಯು ಐದು ವರ್ಷಗಳಲ್ಲಿ ಷೇರುಪೇಟೆಯಲ್ಲಿ ನೋಂದಣಿ ಆಗುವತ್ತ ಸಾಗಲಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರು 2019ರಲ್ಲಿ ಹೇಳಿದ್ದರು.

'ಜಿಯೊ ಐಪಿಒ ಈ ವರ್ಷ ನಡೆಯುವುದಿಲ್ಲ. ಅದು ಸಾಧ್ಯವಿಲ್ಲ. ವಹಿವಾಟುಗಳು ಇನ್ನಷ್ಟು ಪಕ್ವಗೊಳ್ಳಬೇಕು ಎಂದು ಕಂಪನಿ ಬಯಸುತ್ತಿದೆ' ಎಂದು ಮೂಲವು ವಿವರಿಸಿದೆ. ಈ ವಿಚಾರವಾಗಿ ಸುದ್ದಿಸಂಸ್ಥೆಗೆ ರಿಲಯನ್ಸ್ ಕಡೆಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಸ್ಟಾರ್‌ಲಿಂಕ್ ಸೇವೆಗೆ ಇನ್–ಸ್ಪೇಸ್ ಒಪ್ಪಿಗೆ

ನವದೆಹಲಿ/ಬೆಂಗಳೂರು (ಪಿಟಿಐ/ರಾಯಿಟರ್ಸ್): ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್‌ಗೆ ಭಾರತದಲ್ಲಿ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಆರಂಭಿಸಲು ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಅಧಿಕಾರ ಕೇಂದ್ರ (ಇನ್–ಸ್ಪೇಸ್) ಪರವಾನಗಿ ನೀಡಿದೆ.

ಪರವಾನಗಿಯ ಅವಧಿ ಐದು ವರ್ಷ ಎಂದು ಇನ್–ಸ್ಪೇಸ್ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

ಸ್ಟಾರ್‌ಲಿಂಕ್ ಭಾರತದಲ್ಲಿ ವಾಣಿಜ್ಯ ಕಾರ್ಯಾಚರಣೆ ಆರಂಭಿಸಲು 2022ರಿಂದ ಕಾಯುತ್ತಿದೆ. ಕಳೆದ ತಿಂಗಳು ದೂರಸಂಪರ್ಕ ಸಚಿವಾಲಯವು ಸೇವೆ ಆರಂಭಿಸಲು ಅನುಮತಿ ನೀಡಿತ್ತು. ಆದರೆ, ದೇಶದ ಬಾಹ್ಯಾಕಾಶ ಇಲಾಖೆ ಅನುಮತಿ ಬೇಕಿತ್ತು. ಇದೀಗ ಅನುಮತಿ ದೊರೆತಿದೆ.

ಸ್ಟಾರ್‌ಲಿಂಕ್ ಮತ್ತು ಬಾಹ್ಯಾಕಾಶ ಇಲಾಖೆ ಈ ಕುರಿತು ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ರಾಯಿಟರ್ಸ್ ವರದಿ ಮಾಡಿದೆ.

ಸ್ಟಾರ್‌ಲಿಂಕ್ ಈಗ ಸರ್ಕಾರದಿಂದ ತರಂಗಾಂತರ ಪಡೆದುಕೊಳ್ಳಬೇಕಿದೆ ಮತ್ತು ಭದ್ರತಾ ನಿಯಮಗಳನ್ನು ಪಾಲಿಸಬೇಕಿದೆ.

ಸುದ್ದಿ 2 ನಿಮಿಷ

ಕೇರಳದಲ್ಲಿ ಬಂದ್ ಯಶಸ್ವಿ

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 'ಕಾರ್ಮಿಕ ವಿರೋಧಿ' ನೀತಿಗಳನ್ನು ಅನುಸರಿಸುತ್ತಿದೆ ಎಂದು ದೂರಿ, ನೀತಿಗಳ ವಿರುದ್ಧ ಪ್ರತಿಭಟಿಸಲು ಕರೆ ನೀಡಿದ್ದ ಭಾರತ್ ಬಂದ್‌ನಲ್ಲಿ ಅಂದಾಜು 25 ಕೋಟಿ ಕಾರ್ಮಿಕರು ಭಾಗಿಯಾಗಿದ್ದರು ಎಂದು ಸಂಘಟನೆಗಳು ಹೇಳಿವೆ.

ಕೇರಳದಲ್ಲಿ ಬಂದ್ ಯಶಸ್ಸು ಕಂಡಿದೆ, ಪಶ್ಚಿಮ ಬಂಗಾಳದಲ್ಲಿ ಅಲ್ಲಲ್ಲಿ ಹಿಂಸಾಚಾರ ನಡೆದಿದೆ. ಆರ್‌ಎಸ್‌ಎಸ್‌ನ ಕಾರ್ಮಿಕ ಸಂಘಟನೆಯಾದ ಭಾರತೀಯ ಮಜ್ದೂರ್ ಸಂಘವು ಬಂದ್‌ನಲ್ಲಿ ಭಾಗಿಯಾಗಿರಲಿಲ್ಲ.

ಕಲ್ಲಿದ್ದಲು, ಬ್ಯಾಂಕಿಂಗ್, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಮತ್ತು ಕೈಗಾರಿಕಾ ವಲಯಗಳ ಮೇಲೆ ಬಂದ್‌ನಿಂದಾಗಿ ಪರಿಣಾಮ ಉಂಟಾಗಿದೆ ಎಂದು ಕಾರ್ಮಿಕ ಸಂಘಟನೆಗಳು ಹೇಳಿವೆ.

ರಸ್ತೆ ತಡೆ, ರೈಲು ತಡೆಯಂತಹ ಪ್ರತಿಭಟನೆಗಳಲ್ಲಿ ಕಾರ್ಮಿಕರು ಭಾಗಿಯಾಗಿದ್ದರು ಎಂದು ಸಂಘಟನೆಗಳು ಹೇಳಿವೆ. ಅಸಂಘಟಿತ ವಲಯದ ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತ ರೈತರು ಕೂಡ ಭಾಗಿಯಾದ್ದರು ಎಂದು ತಿಳಿಸಿವೆ.

ದೆಹಲಿಯಲ್ಲಿ ಮಾರುಕಟ್ಟೆಗಳು ತೆರೆದಿದ್ದವು. ಜಾರ್ಖಂಡ್‌ನಲ್ಲಿ ಕಲ್ಲಿದ್ದಲು, ಬ್ಯಾಂಕಿಂಗ್ ಮತ್ತು ಇತರ ವಲಯಗಳಲ್ಲಿ ಚಟುವಟಿಕೆಗಳಿಗೆ ಧಕ್ಕೆ ಆಗಿದೆ ಎಂದು ಕಾರ್ಮಿಕರ ಸಂಘಟನೆಗಳು ಹೇಳಿವೆ.

ವೇದಾಂತ ಕಂಪನಿ ವಿರುದ್ಧ ಶಾರ್ಟ್‌ಸೆಲ್ಲರ್ ವರದಿ

ನವದೆಹಲಿ (ಪಿಟಿಐ): ಅನಿಲ್ ಅಗರ್ವಾಲ್ ಮಾಲೀಕತ್ವದ ವೇದಾಂತ ಕಂಪನಿಯ ವಹಿವಾಟುಗಳು 'ಹಣಕಾಸಿನ ದೃಷ್ಟಿಯಿಂದ ಸುಸ್ಥಿರವಾಗಿಲ್ಲ' ಎಂದು ಅಮೆರಿಕದ ಶಾರ್ಟ್‌ಸೆಲ್ಲರ್ 'ವೈಸ್‌ರಾಯ್ ರಿಸರ್ಚ್' ಬಿಡುಗಡೆ ಮಾಡಿರುವ ವರದಿ ಹೇಳಿದೆ. ಇದರಿಂದಾಗಿ ಕಂಪನಿಗೆ ಸಾಲ ನೀಡಿದವರಿಗೆ ಅಪಾಯ ಕಾದಿದೆ ಎಂದು ವರದಿಯು ಹೇಳಿದೆ.

ವರದಿಯಲ್ಲಿನ ವಿವರಗಳನ್ನು ಅಲ್ಲಗಳೆದಿರುವ ಕಂಪನಿಯು 'ಇದು ಆಯ್ದ ಕೆಲವು ತಪ್ಪು ಮಾಹಿತಿಗಳನ್ನು ಹರಡುವ ಕೆಲಸ, ಆಧಾರರಹಿತ ಆರೋಪ' ಎಂದು ಹೇಳಿದೆ. ಕಂಪನಿಗೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಹೀಗೆ ಮಾಡಲಾಗಿದೆ ಎಂದು ಹೇಳಿದೆ.

ವೇದಾಂತ ಲಿಮಿಟೆಡ್‌ನ ಮಾತೃಸಂಸ್ಥೆಯಾದ ವೇದಾಂತ ರಿಸೋರ್ಸಸ್‌ನ ಸಾಲಪತ್ರಗಳ ಶಾರ್ಟ್ ಸೆಲ್ಲಿಂಗ್‌ನಲ್ಲಿ (ಸಾಲಪತ್ರಗಳ ಮೌಲ್ಯದಲ್ಲಿನ ಇಳಿಕೆಯಿಂದ ಲಾಭ ಮಾಡಿಕೊಳ್ಳುವುದು) ತಾನು ಭಾಗಿಯಾಗಿರುವುದಾಗಿ ವೈಸ್‌ರಾಯ್ ರಿಸರ್ಚ್ ತಿಳಿಸಿದೆ.

ವರದಿ ಬಹಿರಂಗ ಆದ ನಂತರದಲ್ಲಿ ವೇದಾಂತ ಕಂಪನಿಯ ಷೇರುಮೌಲ್ಯವು ಶೇ 6ರವರೆಗೆ ಇಳಿಕೆಯಾಗಿತ್ತು. ನಂತರದಲ್ಲಿ ಮೌಲ್ಯವು ತುಸು ಚೇತರಿಕೆ ಕಂಡಿತು. ವೇದಾಂತ ರಿಸೋರ್ಸಸ್ ಲಿ. ಕಂಪನಿಯು ಭಾರಿ ಪ್ರಮಾಣದ ಸಾಲದಲ್ಲಿ ಇದೆ, ಇಡೀ ಸಮೂಹವು ಹಣಕಾಸಿನ ದೃಷ್ಟಿಯಿಂದ ಸುಸ್ಥಿರವಾಗಿಲ್ಲ ಎಂದು ವರದಿಯು ಹೇಳಿದೆ.

ವಿಶ್ವಸಂಸ್ಥೆಯಲ್ಲಿ ಸಂಗೀತ ಕಛೇರಿ

ಜೈಪುರ (ಪಿಟಿಐ): ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತ ಪಂಡಿತ್ ವಿಶ್ವ ಮೋಹನ ಭಟ್ ಮತ್ತು ಅವರ ಪುತ್ರ, ಸಾತ್ವಿಕ್ ವೀಣಾ ಸೃಷ್ಟಿಕರ್ತ ಪಂಡಿತ್ ಸಲೀಲ್ ಭಟ್ ಅವರು ಜಿನೀವಾದಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಮಂಗಳವಾರ ಭಾರತೀಯ ಶಾಸ್ತ್ರೀಯ ಸಂಗೀತದ ಕಛೇರಿ ನಡೆಸಿಕೊಟ್ಟರು.



ವಿಶ್ವ ಮೋಹನ ಭಟ್

ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ ಮತ್ತು ಭಾರತದ ನಡುವಿನ ಸಹಕಾರದ ಸುವರ್ಣ ಮಹೋತ್ಸವದ ಅಂಗವಾಗಿ ಜಿನೀವಾದಲ್ಲಿನ ಭಾರತೀಯ ರಾಯಭಾರ ಕಚೇರಿ ಮತ್ತು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ ಬೆಂಬಲದೊಂದಿಗೆ ಜುಲೈ 8ರಂದು ಈ ವಿಶೇಷ ಸಂಗೀತ ಕಾರ್ಯಕ್ರಮ ನಡೆಯಿತು.

190ಕ್ಕೂ ಹೆಚ್ಚು ದೇಶಗಳ ರಾಜತಾಂತ್ರಿಕರು, ಸಚಿವರು, ಸಾಂಸ್ಕೃತಿಕ ಲೋಕದ ಗಣ್ಯರು ಉಪಸ್ಥಿತರಿದ್ದರು.

ಈಕ್ವಿಟಿ ಎಂ.ಎಫ್ ಒಳಹರಿವು ಶೇ 24ರಷ್ಟು ಏರಿಕೆ

ನವದೆಹಲಿ (ಪಿಟಿಐ): ಜೂನ್ ತಿಂಗಳಿನಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ಒಳಹರಿವು ಶೇ 24ರಷ್ಟು ಏರಿಕೆಯಾಗಿದ್ದು, ₹23,587 ಕೋಟಿ ಆಗಿದೆ ಎಂದು ಭಾರತದ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಬುಧವಾರ ತಿಳಿಸಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ₹41,156 ಕೋಟಿ ಒಳಹರಿವು ಇತ್ತು. ಈ ಬಳಿಕ ಒಳಹರಿವಿನ ಪ್ರಮಾಣವು ಕಡಿಮೆಯಾಗಿತ್ತು. ಜನವರಿಯಲ್ಲಿ ₹39,688 ಕೋಟಿ, ಫೆಬ್ರುವರಿಯಲ್ಲಿ ₹29,303 ಕೋಟಿ, ಮಾರ್ಚ್‌ನಲ್ಲಿ ₹25,082 ಕೋಟಿ, ಏಪ್ರಿಲ್‌ನಲ್ಲಿ ₹24,269 ಕೋಟಿ ಮತ್ತು ಮೇ ತಿಂಗಳಿನಲ್ಲಿ ₹19,013 ಕೋಟಿ ಹೂಡಿಕೆಯಾಗಿತ್ತು. ಸತತ ಐದು ತಿಂಗಳ ಇಳಿಕೆ ಬಳಿಕ ಒಳಹರಿವಿನ ಪ್ರಮಾಣ ಜೂನ್‌ನಲ್ಲಿ ಏರಿಕೆ ಕಂಡಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಅಡಿ ಮೇ ತಿಂಗಳಿನಲ್ಲಿ ₹26,688 ಕೋಟಿ ಒಳಹರಿವಾಗಿತ್ತು. ಜೂನ್‌ನಲ್ಲಿ ₹27,269 ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದೆ.

'ಒಳಹರಿವಿನ ಪ್ರಮಾಣದ ಹೆಚ್ಚಳವು ಸಣ್ಣ ಹೂಡಿಕೆದಾರರಲ್ಲಿ ಹೆಚ್ಚಿದ ವಿಶ್ವಾಸವನ್ನು ಪ್ರತಿಬಿಂಬಿಸುತ್ತಿದೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿನ ಒಳಹರಿವು ಹೆಚ್ಚಳವು ಹೂಡಿಕೆಯ ಹೆಚ್ಚಳಕ್ಕೆ ನೆರವಾದವು' ಎಂದು ಮಾರ್ನಿಂಗ್‌ಸ್ಟಾರ್ ರಿಸರ್ಚ್ ಇಂಡಿಯಾ ಸಂಸ್ಥೆಯ ಸಹ ನಿರ್ದೇಶಕ (ಸಂಶೋಧನೆ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

Together We Can
ಕೆನರಾ ಬ್ಯಾಂಕ್ Canara Bank
A Government of India Undertaking

ಎಸ್‌ಎಂಪಿಎಸ್ ಪರೀಕ್ಷೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಗನಯಾನ ನೌಕೆಗೆ ಅಳವಡಿಸಲಾಗುವ ಸರ್ವಿಸ್ ಮಾಡ್ಯೂಲ್ ಪ್ರೊಪೆಲ್ಷನ್ ಸಿಸ್ಟಮ್‌ನ (ಎಸ್‌ಎಂಪಿಎಸ್) ಉಷ್ಣತೆ ಸ್ಥಿತಿಯ ಎರಡು ಪರೀಕ್ಷೆಗಳನ್ನು ಇಸ್ರೊ ಯಶಸ್ವಿಯಾಗಿ ನಡೆಸಿದೆ.

ತಮಿಳುನಾಡಿನ ಮಹೇಂದ್ರಗಿರಿಯ ಇಸ್ರೊ ಪ್ರೊಪೆಲ್ಷನ್ ಕೇಂದ್ರದಲ್ಲಿ ಅಲ್ಪಾವಧಿಯ ಈ ಪರೀಕ್ಷೆಗಳನ್ನು ನಡೆಸಲಾಗಿದೆ. ಪ್ರೊಪೆಲ್ಷನ್ ಸಿಸ್ಟಮ್ ಅಂದರೆ, ಒತ್ತಡವನ್ನು ಸೃಷ್ಟಿಸಿ ನೂಕು ಬಲದ ಮೂಲಕ ನೌಕೆಯನ್ನು ನಿಗದಿತ ಕಕ್ಷೆಗೆ ಅಥವಾ ಪ್ರದೇಶಕ್ಕೆ ಕಳುಹಿಸುವ ಪ್ರಕ್ರಿಯೆ. ಮೊದಲ ಪರೀಕ್ಷೆ 30 ಸೆಕೆಂಡುಗಳದ್ದಾಗಿದ್ದು, ಎರಡನೇ ಪರೀಕ್ಷೆ 100 ಸೆಕೆಂಡ್‌ಗಳಷ್ಟು ಅವಧಿಯಾಗಿತ್ತು. ಉಷ್ಣತೆ ಸ್ಥಿತಿಯ ಪರೀಕ್ಷೆಯ ಒಟ್ಟಾರೆ ನಿರ್ವಹಣೆ ನಿರೀಕ್ಷೆಯಂತೆ ಯಶಸ್ವಿಯಾಗಿ ನಡೆಯಿತು ಇಸ್ರೊ ಪ್ರಕಟಣೆ ತಿಳಿಸಿದೆ.

'ಅಂಗವಿಕಲರು ಸೌಲಭ್ಯ ಪಡೆಯಲು ಆಧಾರ್ ಕಡ್ಡಾಯ'

ನವದೆಹಲಿ (ಪಿಟಿಐ): ಕೌಶಲಾಭಿವೃದ್ಧಿ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಅಂಗವಿಕಲರು ಆಧಾರ್ ಸಂಖ್ಯೆ ಅಥವಾ ಅದಕ್ಕೆ ಅರ್ಜಿ ಸಲ್ಲಿಸಿದ ದಾಖಲೆ ನೀಡುವುದನ್ನು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿದೆ.

ಆಧಾರ್ ಇಲ್ಲದಿದ್ದರೆ ಅಥವಾ ದೃಢೀಕರಣ ವಿಫಲವಾದ ಕಾರಣಕ್ಕೆ ಯಾವುದೇ ಅಂಗವಿಕಲ ಮಕ್ಕಳನ್ನು ಸೌಲಭ್ಯದಿಂದ ವಂಚಿತಗೊಳಿಸುವುದಿಲ್ಲ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ತಿಳಿಸಿದೆ.

ಪ್ರಯಾಣ ಮತ್ತು ವಸತಿ ಭತ್ಯೆ, ನೇಮಕಾತಿ ಬಳಿಕದ ನೆರವು ಸೇರಿದಂತೆ ನಗದು ಸೌಲಭ್ಯಗಳನ್ನು ಪಡೆಯಲು ಆಧಾರ್ ದೃಢೀಕರಣ ಅತ್ಯಗತ್ಯವಾಗಿರುತ್ತದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಅಂಗವಿಕಲರ ಕೌಶಲಭಿವೃದ್ಧಿಗಾಗಿ ರಾಷ್ಟ್ರೀಯ ಕ್ರಿಯಾ ಯೋಜನೆ (ಎನ್‌ಎಪಿ-ಎಸ್‌ಡಿಪಿ)ಯನ್ನು 2015ರಲ್ಲಿ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಅಂಗವಿಕಲರಿಗೆ ಉತ್ತಮ ಗುಣಮಟ್ಟದ ತರಬೇತಿಯನ್ನು ನೀಡಿ ಅವರು ಉದ್ಯೋಗ ಪಡೆಯುವಂತೆ ಮಾಡಲಾಗುತ್ತದೆ. ಅಂಗವಿಕಲರಿಗಾಗಿ ಆಧಾರ್ ನೋಂದಣಿ ಕೇಂದ್ರ ತೆರೆಯುವಂತೆ ಸಂಬಂಧಿಸಿದ ಸಂಸ್ಥೆಗಳಿಗೆ ಸಚಿವಾಲಯ ನಿರ್ದೇಶನ ನೀಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು



ಶ್ರೀ ಆರ್. ಎಂ. ರಾಜಣ್ಣ
ನಿಮ್ಮ ಆದರ್ಶವೇ ನಮಗೆ ದಾರಿದೀಪ
ಶ್ರೀಮತಿ ಭಾರತಿ ರಾಜಣ್ಣ ಮತ್ತು ಕುಟುಂಬದವರು
ಶ್ರೀ ಆರ್. ಎಂ. ನಾಗರಾಜ ಮತ್ತು ಕುಟುಂಬದವರು
ರಾಮಚಂದ್ರಾಪುರ.

'ಗುಂಡಿಕ್ಕಲು ಹಸೀನಾ ಆದೇಶ'

ಢಾಕಾ (ಎಎಫ್‌ಪಿ): 'ಕಳೆದ ವರ್ಷ ಬಾಂಗ್ಲಾದೇಶದಲ್ಲಿ ಸರ್ಕಾರದ ವಿರುದ್ಧ ಭಾರಿ ಪ್ರತಿಭಟನೆ ನಡೆಸಿದವರ ಮೇಲೆ ಗುಂಡು ಹಾರಿಸಲು, ಅವರ ವಿರುದ್ಧ ಕಠಿಣವಾದ ಕ್ರಮ ಜರುಗಿಸಲು ಆಗ ಪ್ರಧಾನಿಯಾಗಿದ್ದ ಶೇಖ್ ಹಸೀನಾ ಆದೇಶಿಸಿದ್ದರು...'

ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರದ್ದು ಎನ್ನಲಾದ ಧ್ವನಿ ಮುದ್ರಣಗಳನ್ನು ವಿಶ್ಲೇಷಿಸಿದ ಬಳಿಕ ಈ ತೀರ್ಮಾನಕ್ಕೆ ಬಂದಿದ್ದಾಗಿ ಬಿಬಿಸಿಯ 'ಐ ಇನ್ವೆಸ್ಟಿಗೇಷನ್ಸ್' ತಂಡ ಹೇಳಿದೆ.

'ಧ್ವನಿ ಮುದ್ರಣಗಳಲ್ಲಿನ ಮಾತುಗಳನ್ನು ತಿರುಚಿರುವ ಅಥವಾ ತಿದ್ದುಪಡಿ ಮಾಡಿರುವ ಕುರಿತು ಯಾವುದೇ ಸಾಕ್ಷ್ಯಗಳು ಪತ್ತೆಯಾಗಿಲ್ಲ. ಕೃತಕವಾಗಿ ಧ್ವನಿ ಸೃಷ್ಟಿ ಮಾಡಿರುವ ಸಾಧ್ಯತೆಗಳು ಕೂಡ ಬಹಳ ಕಡಿಮೆ' ಎಂದು ಆಡಿಯೊ ವಿಧಿವಿಜ್ಞಾನ ತಜ್ಞರು ಹೇಳಿದ್ದಾಗಿಯೂ ಬಿಬಿಸಿ ತಿಳಿಸಿದೆ.

ಈ ಧ್ವನಿ ಮುದ್ರಣವು ಕಳೆದ ವರ್ಷ ಜುಲೈ 18ಕ್ಕೆ ಸಂಬಂಧಿಸಿದ್ದಾಗಿದೆ. 'ಪ್ರತಿಭಟನಕಾರರ ವಿರುದ್ಧ ಮಾರಕಾಸ್ತ್ರಗಳನ್ನು ಬಳಕೆ ಮಾಡಿ. ಅವರು ಎಲ್ಲಿಯೇ ಕಾಣಲಿ, ಅವರು ಗುಂಡಿಕ್ಕಲಿ' ಎಂಬುದಾಗಿ ಶೇಖ್ ಹಸೀನಾ ಅವರು ಭದ್ರತಾ ಪಡೆಗಳಿಗೆ ನಿರ್ದೇಶನ ನೀಡಿದ್ದರು ಎಂದು ಆರೋಪಿಸಲಾಗಿದೆ.

ಬಾಂಗ್ಲಾದೇಶ ಪೊಲೀಸರು ಕೂಡ, ಹಸೀನಾ ಅವರ ಧ್ವನಿಮುದ್ರಿತ ಮಾತುಗಳೊಂದಿಗೆ ಈ ಆಡಿಯೊದಲ್ಲಿನ ಮಾತುಗಳನ್ನು ಹೊಂದಾಣಿಕೆ ಮಾಡಿದ್ದಾರೆ ಎನ್ನಲಾಗಿದೆ.

ಈ ಆರೋಪಗಳನ್ನು ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷ ತಳ್ಳಿಹಾಕಿದೆ.

ರೈತನಾದ ಶುಭಾಂಶು ಶುಕ್ಲಾ

ಬಾಹ್ಯಾಕಾಶದಲ್ಲಿ ಮೊಳಕೆಯೊಡೆದ ಹೆಸರುಕಾಳು, ಮೆಂತ್ಯ

ನವದೆಹಲಿ (ಪಿಟಿಐ): ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು 'ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ (ಐಎಸ್‌ಎಸ್) ಗಾಜಿನ ಸಣ್ಣ ಜಾಡಿಗಳಲ್ಲಿ ಹೆಸರುಕಾಳು ಹಾಗೂ ಮೆಂತ್ಯವನ್ನು ಬಿತ್ತಿದ್ದು, ಅವು ಮೊಳಕೆಯೊಡೆದಿವೆ. ಈ ಮೂಲಕ ಗಗನಯಾನಿ ಶುಭಾಂಶು ಅವರು ರೈತನೂ ಆಗಿದ್ದಾರೆ.

ಬೀಜಗಳ ಮೊಳಕೆಯೊಡೆಯುವಿಕೆ ಮತ್ತು ಅವುಗಳ ಆರಂಭಿಕ ಬೆಳವಣಿಗೆ ಮೇಲೆ ಸೂಕ್ಷ್ಮ ಗುರುತ್ವಾಕರ್ಷಣೆ ಹೇಗೆ ಪ್ರಭಾವ ಬೀರಲಿದೆ ಎಂಬ ಅಧ್ಯಯನದ ಭಾಗವಾಗಿ ಅವರು ಈ ಪ್ರಯೋಗ ನಡೆಸುತ್ತಿದ್ದಾರೆ.

ಶುಕ್ಲಾ ಸೇರಿ ನಾಲ್ವರು ಗಗನಯಾತ್ರಿಗಳು ಐಎಸ್‌ಎಸ್‌ನಲ್ಲಿ 12 ದಿನ ಕಳೆದಿದ್ದು, ಜುಲೈ 10ರ ನಂತರ ಯಾವುದೇ ದಿನ ಅವರು ಭೂಮಿಗೆ ಮರಳಲಿದ್ದಾರೆ. ಫ್ಲಾರಿಡಾ ಕರಾವಳಿಯ ಹವಾಮಾನ ಸ್ಥಿತಿ ಆಧರಿಸಿ ಅವರನ್ನು ಯಾವ ದಿನ ವಾಪಸ್ ಕರೆಸಿಕೊಳ್ಳ ಬಹುದು ಎಂದು ನಿರ್ಧರಿಸಲಾಗುತ್ತದೆ.



ಶುಭಾಂಶು ಶುಕ್ಲಾ

'ಆ್ಯಕ್ಸಿಯಂ-4' ಯೋಜನೆಯ ಅನ್‌ಡಾಕಿಂಗ್ ದಿನಾಂಕವನ್ನು ನಾಸಾ ಘೋಷಣೆ ಮಾಡಿಲ್ಲ. ಗಗನಯಾತ್ರಿಗಳು 14 ದಿನಗಳವರೆಗೆ ಬಾಹ್ಯಾಕಾಶದಲ್ಲಿ ಇರಲು ಅವಕಾಶವಿದೆ.

'ಆಕ್ಸಿಯಂ ಸ್ಪೇಸ್' ಸಂಸ್ಥೆಯ ಮುಖ್ಯ ವಿಜ್ಞಾನಿ ಲೂಸಿ ಲೊ ಅವರೊಂದಿಗೆ ಬುಧವಾರ ಮಾತನಾಡಿದ ಶುಕ್ಲಾ ಅವರು, 'ಇಸ್ರೊ ದೇಶದಾದ್ಯಂತ ಇರುವ ರಾಷ್ಟ್ರೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅದ್ಭುತ ಸಂಶೋಧನೆ ನಡೆಸುತ್ತಿರುವುದು ಹೆಮ್ಮೆಯ ವಿಚಾರ. ಈ ಎಲ್ಲ ವಿಜ್ಞಾನಿಗಳು ಮತ್ತು ಸಂಶೋಧಕರಿಗಾಗಿ ನಾನು ಬಾಹ್ಯಾಕಾಶದಲ್ಲಿ ಈ ಪ್ರಯೋಗ ನಡೆಸುತ್ತಿದ್ದೇನೆ' ಎಂದು ಹೇಳಿದರು.

ಭೂಮಿಗೆ ಮರಳಿದ ಬಳಿಕ ಈ ಬೀಜಗಳನ್ನು ಭೂಮಿಯ ಪರಿಸರದಲ್ಲಿ ಬಿತ್ತಲಾಗುತ್ತದೆ ಮತ್ತು ಅವುಗಳ ಬೆಳವಣಿಗೆಯ ಪ್ರತಿ ಹಂತ ಮತ್ತು ಪೌಷ್ಟಿಕಾಂಶ ಕುರಿತ ಅಧ್ಯಯನ ನಡೆಸಲಾಗುತ್ತದೆ ಎಂದು 'ಆಕ್ಸಿಯಂ ಸ್ಪೇಸ್' ತಿಳಿಸಿದೆ.

ನಮೀಬಿಯಾ ರಾಜಧಾನಿ ವಿಂಡ್‌ಹೋಕ್‌ನಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಧ್ಯಕ್ಷೆ ನೆತುಂಬೊ ನಾಂಡಿ–ದೇತ್ವ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಆರ್ಡರ್ ಆಫ್ ದಿ ಮೋಸ್ಟ್ ಎನ್ಸಿಯಂಟ್ ವೆಲ್‌ವಿಚಿಯಾ ಮಿರಾಬಿಲಿಸ್' ಪ್ರದಾನ ಮಾಡಿದರು ಪಿಟಿಐ ಚಿತ್ರ

ಭಾರತ–ನಮೀಬಿಯಾ 4 ಒಪ್ಪಂದಗಳಿಗೆ ಸಹಿ

ವಿಂಡೋಕ್ (ನಮೀಬಿಯಾ): ಭಾರತ ಮತ್ತು ನಮೀಬಿಯಾ ನಡುವಿನ ಸಂಬಂಧ ವೃದ್ಧಿಸುವ ನಿಟ್ಟಿನಲ್ಲಿ ಜೈವಿಕ ಇಂಧನ, ಆರೋಗ್ಯ ಸಹಕಾರ ಸೇರಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ 4 ಒಪ್ಪಂದಗಳಿಗೆ ಉಭಯ ರಾಷ್ಟ್ರಗಳ ನಾಯಕರು ಬುಧವಾರ ಸಹಿ ಹಾಕಿದ್ದಾರೆ.

ಐದು ರಾಷ್ಟ್ರಗಳ ಪ್ರವಾಸ ಕೈಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಪ್ರವಾಸದ ಕೊನೆಯ ಭೇಟಿಯ ಭಾಗವಾಗಿ ನಮೀಬಿಯಾಗೆ ತೆರಳಿ ಅಧ್ಯಕ್ಷೆ ನೆತುಂಬೊ ನಾಂಡಿ–ದೇತ್ವ ಅವರೊಂದಿಗೆ ಮಾತುಕತೆ ನಡೆಸಿದರು. ನಮೀಬಿಯಾ ಸಂಸತ್ ಉದ್ದೇಶಿಸಿಯೂ ಮೋದಿ ಮಾತನಾಡಿದ್ದಾರೆ.

ನಮೀಬಿಯಾಗೆ ಪ್ರಧಾನಿ ಮೋದಿ ಅವರ ಮೊದಲ ಭೇಟಿಯಾಗಿದ್ದು, ವಿದೇಶಾಂಗ ವ್ಯವಹಾರಗಳ ಸಚಿವೆ ಸೆಲ್ಮಾ ಅಶಿಪಾಲಾ ಮೌಸವಿ ಅವರು ವಿಮಾನ ನಿಲ್ದಾಣಕ್ಕೆ ತೆರಳಿ ಮೋದಿ ಅವರನ್ನು ಸ್ವಾಗತಿಸಿದ್ದಾರೆ. ಈ ವೇಳೆ ನಮೀಬಿಯಾವನ್ನು ಭಾರತದ ವಿಶ್ವಾಸಾರ್ಹ ಪಾಲುದಾರ ರಾಷ್ಟ್ರ ಎಂದೂ ಮೋದಿ ಬಣ್ಣಿಸಿದ್ದಾರೆ.

ಪ್ರಶಸ್ತಿ ಪ್ರದಾನ: ಇದೇ ವೇಳೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಧ್ಯಕ್ಷೆ ನೆತುಂಬೊ ನಾಂಡಿ–ದೇತ್ವ ಅವರು ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಆರ್ಡರ್ ಆಫ್ ದಿ ಮೋಸ್ಟ್ ಎನ್ಸಿಯಂಟ್ ವೆಲ್‌ವಿಚಿಯಾ ಮಿರಾಬಿಲಿಸ್' ಪ್ರದಾನ ಮಾಡಿ, ಗೌರವಿಸಿದರು.

'ಎಂಎಚ್ 17 ವಿಮಾನ ದುರಂತದಲ್ಲಿ ರಷ್ಯಾದ ಪಾತ್ರ'

ದಿ ಹೇಗ್ (ಎಪಿ): 2014ರಲ್ಲಿ 'ಎಂಎಚ್ 17' ವಿಮಾನವನ್ನು ಹೊಡೆದುರುಳಿಸುವ ಮೂಲಕ 298 ಜನರ ಸಾವಿಗೆ ಕಾರಣವಾದ ಕೃತ್ಯದಲ್ಲಿ ರಷ್ಯಾದ ಪಾತ್ರವಿತ್ತು ಎಂದು ಯುರೋಪ್‌ನ ಮಾನವ ಹಕ್ಕುಗಳ ನ್ಯಾಯಾಲಯ ತೀರ್ಪು ನೀಡಿದೆ.

ಉಕ್ರೇನ್ ಜೊತೆಗಿನ ಸಂಘರ್ಷದ ವೇಳೆಯೂ ರಷ್ಯಾ ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದೆ ಎಂದು ನ್ಯಾಯಾಲಯ ಹೇಳಿದೆ.

ಮಲೇಷ್ಯಾ ಏರ್‌ಲೈನ್ಸ್‌ನ 'ಎಂಎಚ್ 17' ವಿಮಾನ ಹೊಡೆದುರಳಿಸಿರುವುದು ಮತ್ತು ಉಕ್ರೇನ್ ಮಕ್ಕಳ ಅಪಹರಣ ಸೇರಿದಂತೆ ಯುದ್ಧ ಆರಂಭಗೊಂಡ ಬಳಿಕ ರಷ್ಯಾ ಮಾನವ ಹಕ್ಕುಗಳನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಉಕ್ರೇನ್ ಮತ್ತು ನೆದರ್ಲೆಂಡ್ಸ್ ನಾಲ್ಕು ದೂರುಗಳನ್ನು ನೀಡಿದ್ದವು.

ಈ ಪ್ರಕರಣಕ್ಕೆ ಸಂಬಂಧಿಸಿ ಅಂತರರಾಷ್ಟ್ರೀಯ ನ್ಯಾಯಾಲಯವೊಂದು ಮೊದಲ ಬಾರಿಗೆ ರಷ್ಯಾದ ವಿರುದ್ಧ ತೀರ್ಪು ನೀಡಿದೆ.

ಆಮ್‌ಸ್ಟರ್‌ಡ್ಯಾಂನಿಂದ ಕ್ವಾಲಾಲಂಪುರಕ್ಕೆ ತೆರಳುತ್ತಿದ್ದ ಎಂಎಚ್ 17 ವಿಮಾನವನ್ನು 2014ರ ಜುಲೈ 17ರಂದು ರಷ್ಯಾ ನಿರ್ಮಿತ ಕ್ಷಿಪಣಿಯಿಂದ ಹೊಡದುರುಳಿಸಲಾಗಿತ್ತು. ಈ ಕ್ಷಿಪಣಿಯನ್ನು ಬಂಡುಕೋರರ ಹಿಡಿತದಲ್ಲಿದ್ದ ಪೂರ್ವ ಉಕ್ರೇನ್‌ನಿಂದ ಉಡಾಯಿಸಲಾಗಿತ್ತು.

ದುರಂತಕ್ಕೆ ರಷ್ಯಾ ಹೊಣೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಘಟನೆ (ಐಸಿಎಒ) ಮೇನಲ್ಲಿ ಹೇಳಿತ್ತು.

ಇಸ್ರೇಲ್ ದಾಳಿ: 40 ಮಂದಿ ಸಾವು

ದೀರ್ ಅಲ್-ಬಲಾಹ್ (ಗಾಜಾ ಪಟ್ಟಿ) (ಎಪಿ): ಗಾಜಾಪಟ್ಟಿ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ 40 ಮಂದಿ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ.

ಮೃತರಾದವರಲ್ಲಿ 17 ಮಹಿಳೆಯರು ಮತ್ತು 10 ಮಕ್ಕಳು ಸೇರಿದ್ದಾರೆ. ಒಂದೇ ಕುಟುಂಬದ 10 ಜನರು ಮೃತಪಟ್ಟಿದ್ದಾರೆ ಎಂದು ನಾಸೇರ್ ಆಸ್ಪತ್ರೆ ಬುಧವಾರ ತಿಳಿಸಿದೆ.

ದಾಳಿಯ ಬಗ್ಗೆ ಇಸ್ರೇಲ್ ಸೇನೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಬಂಡುಕೋರರು, ಶಸ್ತ್ರಾಸ್ತ್ರ ಸಂಗ್ರಹಗಾರ, ಕ್ಷಿಪಣಿ ಉಡಾವಣಾ ಕೇಂದ್ರ ಸೇರಿದಂತೆ 100ಕ್ಕೂ ಅಧಿಕ ಸ್ಥಳಗಳ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಬಂಡುಕೋರರು ಮತ್ತು ಶಸ್ತ್ರಾಸ್ತ್ರಗಳನ್ನು ಹಮಾಸ್ ನಾಗರಿಕರ ನಡುವೆ ಬಚ್ಚಿಡಲಾಗುತ್ತಿದೆ ಎಂದು ಇಸ್ರೇಲ್ ಆರೋಪಿಸುತ್ತಿದೆ.

ಚೀನಾ ಅಣೆಕಟ್ಟೆ 'ಜಲಬಾಂಬ್' ಮುಖ್ಯಮಂತ್ರಿ ಖಂಡು ಆತಂಕ

ನವದೆಹಲಿ (ಪಿಟಿಐ): ಭಾರತದ ಗಡಿಯಲ್ಲಿ ಚೀನಾ ನಿರ್ಮಿಸುತ್ತಿರುವ ವಿಶ್ವದ ಬೃಹತ್ ಅಣೆಕಟ್ಟೆಯು ಭಾರತಕ್ಕೆ 'ಜಲ ಬಾಂಬ್' ಆಗಿ ಪರಿಣಮಿಸಲಿದೆ. ಚೀನಾದ ಸೇನಾ ಬೆದರಿಕೆಗಿಂತಲೂ ಇದು ದೊಡ್ಡದು ಮತ್ತು ನಮ್ಮ ಜನರ ಅಸ್ತಿತ್ವಕ್ಕೆ ಧಕ್ಕೆ ತರುವಂತಹದ್ದು ಎಂದು ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು ಆತಂಕ ವ್ಯಕ್ತಪಡಿಸಿದ್ದಾರೆ.

ಯಾರ್ಲುಂಗ್ ತ್ಸಾಂಗ್‌ಪೊ (ಬ್ರಹ್ಮಪುತ್ರ ನದಿಯ ಟಿಬೆಟ್ ಹೆಸರು) ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಾಣಗೊಳ್ಳುತ್ತಿದೆ. ಅಂತರರಾಷ್ಟ್ರೀಯ ಜಲ ಒಪ್ಪಂದಕ್ಕೆ ಚೀನಾ ಸಹಿದಾರ ದೇಶವಲ್ಲದ ಕಾರಣ ಇದು ಕಳವಳಕಾರಿ ಬೆಳವಣಿಗೆ ಎಂದು ಮಂಗಳವಾರ ನೀಡಿದ ಸಂದರ್ಶನದಲ್ಲಿ ಅವರು ಹೇಳಿದರು.

'ಚೀನಾ ಅಣೆಕಟ್ಟೆಯನ್ನು ನಿರ್ಮಿಸಿ ಮುನ್ಸೂಚನೆ ಇಲ್ಲದೇ ದಿಢೀರನೆ ನೀರು ಬಿಡುಗಡೆ ಮಾಡಿದರೆ ಇಡೀ ಸಿಯಾಂಗ್ ಪ್ರದೇಶವೇ ನಾಶವಾಗಲಿದೆ. ಬುಡಕಟ್ಟು ಜನರು ಸೇರಿದಂತೆ ನಾಗರಿಕರು ವ್ಯತಿರಿಕ್ತ ಪರಿಣಾಮ ಎದುರಿಸಬೇಕಾಗುತ್ತದೆ.



ಚೀನಾ ಅಣೆಕಟ್ಟೆ ನಿರ್ಮಿಸಿದರೆ ಸಿಯಾಂಗ್ ಮತ್ತು ಬ್ರಹ್ಮಪುತ್ರ ನದಿಗಳು ಕ್ರಮೇಣ ಬತ್ತಿಹೋಗುವ ಆತಂಕವೂ ಇದೆ. ಕೇಂದ್ರ ಸರ್ಕಾರದ ಜೊತೆ ಚರ್ಚಿಸಿ ಅರುಣಾಚಲ ಸರ್ಕಾರವು ಬಹು ಉದ್ದೇಶದ ಸಿಯಾಂಗ್ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ತರುತ್ತಿದೆ' ಎಂದು ಖಂಡು ಹೇಳಿದರು.

2024ರಲ್ಲಿ 137 ಶತಕೋಟಿ ಡಾಲರ್ (ಸುಮಾರು ₹11.75 ಲಕ್ಷ ಕೋಟಿ) ವೆಚ್ಚದ ಯೋಜನೆಗೆ ಚೀನಾ ಸರ್ಕಾರ ಒಪ್ಪಿಗೆ ನೀಡಿದ್ದು, 60,000 ಮೆಗಾವಾಟ್ ಜಲ ವಿದ್ಯುತ್ ಉತ್ಪಾದನೆ ಉದ್ದೇಶವನ್ನು ಹೊಂದಿದೆ.

ಗುರುವಿಗಾಗಿ ಹಂಬಲಿಸುವ ಹಬ್ಬ

• ಎಸ್.ಸೂರ್ಯಪ್ರಕಾಶ ಪಂಡಿತ್

ಇಂದು ಗುರುಪೂರ್ಣಿಮಾ

'ಅಧ್ಯಾತ್ಮ' ಎಂದರೆ ನಮ್ಮನ್ನು ನಾವು ಅರಿಯುವುದು. ನಮ್ಮನ್ನು ನಾವು ಸರಿಯಾಗಿ ತಿಳಿದುಕೊಳ್ಳಲು ನೆರವಾಗುವವನೇ ಗುರು.

ಗುರುಪರಂಪರೆಯನ್ನು ಆರಾಧಿಸುವ ಪರ್ವದಿನವೇ ಗುರುಪೂರ್ಣಿಮಾ. ಎಲ್ಲ ಗುರುಗಳನ್ನೂ ವ್ಯಾಸರಲ್ಲಿ ಕಂಡರಿಸಿ, ಪೂಜಿಸುವ ಪರ್ವದಿನವೇ 'ವ್ಯಾಸಪೂರ್ಣಿಮಾ'. ಅಖಂಡವೂ ಅನಂತವೂ ಆದ ವೇದರಾಶಿಯನ್ನು ಮಾನವಕುಲದ ಒಳಿತಿಗಾಗಿ ವಿಭಾಗ ಮಾಡಿ, ನಮಗೆ ಅರಿವು ಸುಲಭವಾಗಿ ದಕ್ಕುವಂತೆ ಮಾಡಿದವರು ವ್ಯಾಸಮಹರ್ಷಿಗಳು. ಇದು ಮತ್ತೂ ಸುಲಭವಾಗಿ ಎಲ್ಲರಿಗೂ ಸಿಗಬೇಕೆಂದು ಮಹಾಭಾರತವನ್ನೂ ಪುರಾಣಗಳನ್ನೂ ರಚಿಸಿದವರೂ ಅವರೇ. ಹೀಗಾಗಿ ವ್ಯಾಸಮಹರ್ಷಿಗಳನ್ನು ಗುರುವಾಗಿ ಸ್ವೀಕರಿಸುವುದು ಯುಕ್ತವಾಗಿದೆ.

ನೆಮ್ಮದಿಯನ್ನು ಅರಸುವ ಪ್ರವೃತ್ತಿ ಮನುಷ್ಯನಿಗೆ ಎಂದಿನಿಂದಲೂ ಇದೆ. ಸಮಸ್ಯೆಗಳ ಸುಳಿ, ಜೀವನದ ನಶ್ವರತೆ, ಶಾಶ್ವತಸುಖದ ಹಂಬಲ – ಹೀಗೆ ಏನೇನೋ ಕಾರಣಗಳು ಅವನನ್ನು ನೆಮ್ಮದಿಯ ಕಡೆಗೆ, ಆನಂದದ ಕಡೆಗೆ ತಳ್ಳುತ್ತಿರುತ್ತವೆ. ಈ ಹುಡುಕಾಟದಲ್ಲಿ ಅವನು ಎದುರಿಸಬೇಕಾದ ಮೊದಲ ಪ್ರಶ್ನೆ: 'ನಾನು ಯಾರು?' ಈ ಪ್ರಶ್ನೆಗೆ ಉತ್ತರವನ್ನು ಕಾಣಿಸಬಲ್ಲವನೇ ಗುರು.



ಈ ತತ್ತ್ವಾನ್ವೇಷಣೆ ಎಂಬುದು ಯಾವುದೋ ಪ್ರಾಚೀನ ಕಾಲದಲ್ಲಿ ನಡೆಯುತ್ತಿದ್ದ ವಿದ್ಯಮಾನ ಏನಲ್ಲ; ಇಂದಿಗೂ ನಡೆದಿದೆ; ಈಗ ಪರಿಭಾಷೆ ಬೇರೆಯಾಗಿರಬಹುದು ಅಷ್ಟೆ. ಅಧ್ಯಾತ್ಮದ ಹಸಿವು ಹಿಂದಿಗಿಂತಲೂ ಇಂದು ತುಸು ಹೆಚ್ಚೇ ಇದ್ದೀತು. ಸ್ವಘೋಷಿತ ಆಧುನಿಕ ಗುರುಗಳ ಸಂಖ್ಯೆಯನ್ನೂ, ಅವರನ್ನು ಸುತ್ತುವರಿದಿರುವ 'ಭಕ್ತ'ರ ಸಂಖ್ಯೆಯನ್ನೂ ಗಮನಿಸಿದರೆ ಈ ಮಾತಿಗೆ ಪುಷ್ಟಿ ಒದಗುತ್ತಿದೆ. ಆದರೆ ಈ ಗುಂಪಿನಲ್ಲಿ ದಿಟವಾದ ಗುರುವನ್ನು ಕಂಡುಕೊಳ್ಳುವುದು ಹೇಗೆ?

ಸನ್ಯಾಸಿಗಳು ಗುರುಪರಂಪರೆಯಲ್ಲಿ ಮುಖ್ಯರಾದವರು. ಇವರು ಲೌಕಿಕ ವಿವರಗಳಿಂದ ವಿಮುಖರಾಗಿ, ವಿಶ್ವದ ಒಳಿತಿಗಾಗಿ ಮಾತ್ರವೇ ಕ್ರಿಯಾಶೀಲರಾಗಿರುವವರು. ಇವರು ಸದಾ ಲೋಕವನ್ನು ಸುತ್ತುತ್ತ, ಜನರಿಗೆ ನೆಮ್ಮದಿಯ ದಾರಿಯನ್ನು ಕಾಣಿಸಲು ನೆರವಾಗಬೇಕು. ಆದರೆ ಎಲ್ಲ ಕಾಲದಲ್ಲೂ ಇವರು ಸಂಚಾರದಲ್ಲಿಯೇ ಇರಲಾಗದು. ಅದರಲ್ಲೂ ಮಳೆಗಾಲದಲ್ಲಿ ಇವರು ಒಂದೆಡೆ ಇರಲೇಬೇಕಾಗುತ್ತದೆ. ಹೀಗೆ ಸನ್ಯಾಸಿಗಳು ಒಂದೆಡೆ ನೆಲೆನಿಲ್ಲುವ ವಿಧಿಯೇ 'ಚಾತುರ್ಮಾಸ್ಯವ್ರತ'. ಇದು ಸಾಮಾನ್ಯವಾಗಿ ಗುರುಪೂರ್ಣಿಮೆಯಂದೇ ಆರಂಭವಾಗುತ್ತದೆ.

ಸತ್ಯವನ್ನು ಅರಿತವರು ಮಾತ್ರವೇ ಸತ್ಯದ ಬಗ್ಗೆ ಉಪದೇಶ ಮಾಡಬಲ್ಲರು; ಲೌಕಿಕದ ಸೆಳೆತಗಳಿಂದ ಮುಕ್ತರಾದವರು ಮಾತ್ರವೇ ದಿಟವಾದ ಸುಖದ ಬಗ್ಗೆ ಮಾತನಾಡಬಲ್ಲರು. ಇಂಥ ಸಿದ್ಧಿಯನ್ನು ಪಡೆದವರಷ್ಟೆ ನಮ್ಮ ಜೀವನಕ್ಕೆ ಗುರುಗಳಾಗಿ ಒದಗಲು ಸಾಧ್ಯ. 'ಗುರು'ಗಳ ಗುಂಪಿನಲ್ಲಿ ಇಂಥ ದಿಟದ ಗುರುಗಳನ್ನು ಹುಡುಕುವುದು ಕಷ್ಟವೇನಿಲ್ಲ; ಆದರೆ ನಮ್ಮ ಹುಡುಕಾಟವೂ ದಿಟವಾಗಿರಬೇಕಷ್ಟೆ!

ಗುರು ಎನ್ನುವುದು ತತ್ತ್ವವೇ ಹೊರತು ಮಾನುಷರೂಪ ಮಾತ್ರವೇ ಅಲ್ಲ – ಎಂದಿದೆ, ಭಾಗವತ. ನಿಸರ್ಗದಲ್ಲಿ ಕಾಣಿಸುವ ಹಲವರು ಸಹಜಗುರುಗಳನ್ನು ವ್ಯಾಸರು ಕಾಣಿಸಿದ್ದಾರೆ. ಪ್ರಾಣಿ, ಪಕ್ಷಿ, ಮರ, ಗಿಡ, ಬಾಣ – ಯಾವುದೂ ನಮಗೆ ಗುರುವಾಗಿ ನೆರವಾಗಬಹುದಂತೆ. ಎಂದರೆ, ನಮ್ಮ ಜೀವನವನ್ನು ಎಚ್ಚರದಿಂದ ಗಮನಿಸಬಲ್ಲ ಸೂಕ್ಷ್ಮತೆಯನ್ನು ನಾವು ದಕ್ಕಿಸಿಕೊಂಡರೆ, ಆಗ ನಮ್ಮ ಎಲ್ಲ ನೋಟವೂ 'ದರ್ಶನ'ವಾಗಬಲ್ಲದು. ನಮ್ಮ ಅಂತರಂಗದಲ್ಲಿರುವ ಗುರುತತ್ತ್ವ ಆ ಸಾಕ್ಷಾತ್ಕಾರದ ಸಮಯದಲ್ಲಿ, ನಮಗೆ ಹಿತವೆನಿಸುವ ರೂಪದಲ್ಲಿ ಬಹಿರಂಗದಲ್ಲಿ ಕಾಣಿಸಿಕೊಂಡು, ನಮ್ಮ ಜೀವನವನ್ನೆಲ್ಲ ವ್ಯಾಪಿಸಿ, ನಮ್ಮನ್ನು ನೆಮ್ಮದಿಯಲ್ಲಿ ಒಂದಾಗಿಸುತ್ತದೆ. ಅಂಥ ಗುರುತತ್ತ್ವಕ್ಕಾಗಿ ತವಕಿಸುವ ದಿನವೇ ಗುರುಪೂರ್ಣಿಮಾ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ
Travel

1.9.2025 ಜೈಪುರ್, ಪುಷ್ಕರ್, ಜೈಸಲ್‌ಮೇರ್, ಜೋಧ್‌ಪುರ್, ಉದಯ್‌ಪುರ್, ಮೌಂಟ್‌ಅಬು 6.9.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್8.9.2025 ಗುಜರಾತ್, ಮಧ್ಯಪ್ರದೇಶ್ ಕರ್ನಾಟಕ ಹೆರಿಟೇಜ್ ಟೂರ್ಸ್.(ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

DH DECCAN HERALD Classifieds More value, more impact
PUBLIC NOTICE
ಪ್ರಜಾವಾಣಿ
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
www.dhclassifieds.com
@ 550/-* PER SQCM
BOOK NOW
*Conditions apply
For more details contact:
+91 9886213331 | +91 9845114560
+91 9731810277 | 080- 45557163/164

ಚಿತ್ರೀಕರಣ ಮುಗಿಸಿದ 'ಕಮಲ್ ಶ್ರೀದೇವಿ'

'666'ರಲ್ಲಿ ಹೀಗಿದ್ದಾರೆ ಶಿವಣ್ಣ

ಶಿವರಾಜ್‌ಕುಮಾರ್

ಹೇಮಂತ್ ರಾವ್ ನಿರ್ದೇಶನದ '666: ಆಪರೇಷನ್ ಡ್ರೀಮ್ ಥಿಯೇಟರ್' ಚಿತ್ರದಿಂದ ನಿರಂತರವಾಗಿ ಹೊಸ ಅಪ್‌ಡೇಟ್‌ಗಳು ಬರುತ್ತಲೇ ಇವೆ. ಚಿತ್ರದಲ್ಲಿ ಶಿವರಾಜ್‌ಕುಮಾರ್ ಅವರ ಫಸ್ಟ್‌ಲುಕ್ ಅನ್ನು ಚಿತ್ರತಂಡ ಬಿಡುಗಡೆಗೊಳಿಸಿದೆ. ಶಿವಣ್ಣ ಕೈಯ್ಯಲ್ಲೊಂದು ಪಿಸ್ತೂಲ್ ಹಿಡಿದು ಜೇಮ್ಸ್ ಬಾಂಡ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ.

ಹೇಮಂತ್ ರಾವ್ 'ಸಪ್ತ ಸಾಗರ'ದ ಬಳಿಕ ಶಿವರಾಜ್‌ಕುಮಾರ್ ಜತೆ ತಮ್ಮ ಮುಂದಿನ ಸಿನಿಮಾ ಘೋಷಿಸಿದ್ದರು. ಆದರೆ ಕಾರಣಾಂತರಗಳಿಂದ ಆ ಸಿನಿಮಾ ಸೆಟ್ಟೇರಲಿಲ್ಲ. ಬಳಿಕ ಡಾಲಿ ಧನಂಜಯ ಅವರ ಜತೆ '666: ಆಪರೇಷನ್ ಡ್ರೀಮ್ ಥಿಯೇಟರ್' ಸಿನಿಮಾ ಪ್ರಾರಂಭಿಸಿ, ಶಿವರಾಜ್‌ಕುಮಾರ್ ಕೂಡ ಚಿತ್ರದಲ್ಲಿ ಇರಲಿದ್ದಾರೆ ಎಂದರು. ಇದೀಗ ಶಿವರಾಜ್‌ಕುಮಾರ್ ಅವರ ಪಾತ್ರವನ್ನೂ ತಂಡ ರಿವೀಲ್ ಮಾಡಿದೆ.

ಡಾಲಿ ಧನಂಜಯ ಅವರ ಎರಡು ಲುಕ್‌ಗಳನ್ನು ಈ ಹಿಂದೆ ಪರಿಚಯಿಸಿತ್ತು. 'ಶಿವಣ್ಣ ಕೂಡ ಪ್ರಮುಖ ಪಾತ್ರದಲ್ಲಿ ಇರುತ್ತಾರೆ. ಇಬ್ಬರದ್ದೂ ಸಮಾನ ಪ್ರಾಮುಖ್ಯತೆ ಹೊಂದಿರುವ ಪಾತ್ರಗಳು' ಎಂದಿದೆ ಚಿತ್ರತಂಡ. ಚಿತ್ರದಲ್ಲಿ ಶಿವಣ್ಣ ಸ್ಪೈ ಪಾತ್ರ ಮಾಡುತ್ತಿದ್ದಾರೆ ಎಂಬ ಸುಳಿವನ್ನೂ ನೀಡಿದೆ. ರಾಜ್‌ಕುಮಾರ್ ಅವರ 999ರ ಬ್ಲಾಕ್‌ಬಸ್ಟರ್ ಸ್ಪೈ ಚಿತ್ರಗಳನ್ನು ನೆನಪಿಸುತ್ತಿದೆ ಶಿವಣ್ಣ ಅವರ ಫಸ್ಟ್‌ಲುಕ್.

ವೈಶಾಕ್ ಜೆ.ಗೌಡ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಚರಣ್ ರಾಜ್ ಸಂಗೀತ, ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ ಹಾಗೂ ವಿಶ್ವಾಸ್ ಕಶ್ಯಪ್ ನಿರ್ಮಾಣ ವಿನ್ಯಾಸವಿದೆ. ಜುಲೈನಲ್ಲಿ ಚಿತ್ರೀಕರಣ ಪ್ರಾರಂಭವಾಗುವ ನಿರೀಕ್ಷೆಯಿದೆ. ತೆಲುಗು ಮತ್ತು ಕನ್ನಡದಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಬಿಡುಗಡೆಗೆ ಸಿದ್ಧವಾಯ್ತು ಲವ್ ಮ್ಯಾಟ್ರು

ವಿರಾಟ್, ಸೋನಲ್

ಪ್ರೇಮಕಥೆಯನ್ನು ಹೊಂದಿರುವ 'ಲವ್ ಮ್ಯಾಟ್ರು' ಚಿತ್ರದ 'ಏನೋ ಗೊತ್ತಿಲ್ಲ' ಎಂಬ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿರಾಟ್ ಬಿಲ್ವ ಚಿತ್ರವನ್ನು ನಿರ್ದೇಶಿಸಿರುವುದರ ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ಸಿನಿಮಾದ ಎಲ್ಲಾ ಕೆಲಸಗಳು ಮುಗಿದಿದ್ದು ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ. ಲವ್, ರೊಮ್ಯಾನ್ಸ್ ಜತೆಗೆ ಹಿತವಾದ ಪ್ರೇಮಗೀತೆಗಳನ್ನು ಹೊಂದಿರುವ ಚಿತ್ರ. ಸುಕ್ಕಾ ಸೂರಿ, ಪ್ರಶಾಂತ್ ನೀಲ್, ಕೆ.ಎಂ. ಚೈತನ್ಯ ಅವರ ಸಿನಿಮಾಗಳೇ ನನಗೆ ಸ್ಫೂರ್ತಿ. ಈ ಹಿಂದೆ 'ಕಡ್ಡಿಪುಡಿ' ಚಿತ್ರದಲ್ಲಿ ನಟಿಸಿದ್ದೆ. ಈ ಸಿನಿಮಾ ಮೂಲಕ ನಟನೆ ಹಾಗೂ ನಿರ್ದೇಶನ ಎರಡೂ ಜವಾಬ್ದಾರಿ ಹೊತ್ತಿದ್ದೇನೆ' ಎಂದರು ವಿರಾಟ್.

ಹಾಡಿಗೆ ಶೇಡ್ರಾಕ್ ಸೋಲೋಮನ್ ಸಂಗೀತವಿದೆ. ಸೋನಲ್ ಚಿತ್ರದ ನಾಯಕಿ. ವಂದನಾ ಪ್ರಿಯ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಸುಶ್ಮಿತಾ ಗೋಪಿನಾಥ್, ಅಚ್ಯುತ್‌ಕುಮಾರ್, ಸುಮನ್ ರಂಗನಾಥ್, ಅನಿತಾ ಭಟ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ದೇವೇಂದ್ರ ಆರ್.ನಾಯ್ಡು ಮತ್ತು ಪರಮೇಶ್ ಸಿ.ಎಂ. ಛಾಯಾಚಿತ್ರಗ್ರಹಣ, ಸುರೇಶ್ ಅರಸ್ ಸಂಕಲನವಿದೆ.

ಸಚಿನ್ ಚಲುವರಾಯಸ್ವಾಮಿ ನಾಯಕನಾಗಿ ನಟಿಸಿರುವ ಕಮಲ್ ಶ್ರೀದೇವಿ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಈ ಚಿತ್ರವನ್ನು ವಿ.ಎ. ಸುನೀಲ್ ಕುಮಾರ್ ನಿರ್ದೇಶಿಸುತ್ತಿದ್ದಾರೆ.

'ಎಲ್ಲವೂ ನಾವಂದುಕೊಂಡಂತೆ ಆಗಿದೆ.ಆಗಸ್ಟ್ ಅಥವಾ ಸೆಪ್ಟೆಂಬರ್ ವೇಳೆಗೆ ಪ್ರೇಕ್ಷಕರೆದುರಿಗೆ ಬರಲಿದ್ದೇವೆ. ಹಂತಹಂತವಾಗಿ ಸಿನಿಮಾದ ಕುರಿತು ಒಂದೊಂದೇ ವಿಷಯ ತಿಳಿಸುತ್ತ ಹೋಗುತ್ತೇವೆ. ಸಿನಿಮಾ ಆರಂಭದಲ್ಲಿ ನಡೆಯುವ ಒಂದು ಅಪರಾಧವನ್ನು ಯಾರು ಮಾಡಿದ್ದಾರೆ ಎಂಬುದರ ಹಿಂದೆ ಇದರ ಕಥೆ ಸುತ್ತುತ್ತದೆ. ಕಮಲ್ ಮತ್ತು ಶ್ರೀದೇವಿ ನಡುವಿನ ಸಂಬಂಧವೇನು? ಅವರೇಕೆ ಭೇಟಿಯಾಗುತ್ತಾರೆ ಎಂಬಿತ್ಯಾದಿ ಅಂಶಗಳು ಕಥೆಯಲ್ಲಿ ಬರುತ್ತವೆ' ಎಂದರು ನಿರ್ದೇಶಕರು.

ಸ್ವರ್ಣಾಂಬಿಕ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಬಿ.ಕೆ.ಧನಲಕ್ಷ್ಮಿ ಚಿತ್ರ ನಿರ್ಮಾಣ ಮಾಡಿದ್ದು, ರಾಜವರ್ಧನ್ ಸಹ ನಿರ್ಮಾಣದ ಜತೆಗೆ ಕ್ರಿಯೇಟೀವ್ ಹೆಡ್ ಆಗಿದ್ದಾರೆ. ಸಂಗೀತಾ ಭಟ್ ಶ್ರೀದೇವಿಯಾಗಿ ನಟಿಸಿದ್ದಾರೆ. ಕಿಶೋರ್, ರಮೇಶ್ ಇಂದಿರಾ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಕೀರ್ತನ್ ಸಂಗೀತ, ನಾಗೇಶ್ ವಿ.ಆಚಾರ್ಯ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ ಮಠದ್ ಸಂಕಲನವಿದೆ.

ಸಂಗೀತಾ ಭಟ್

ವೆಂಕಟೇಶಾಯ ನಮಃ ಎಂದ ಹರೀಶ್ ರಾಜ್

ಚಿತ್ರತಂಡ

ಹರೀಶ್ ರಾಜ್ ನಿರ್ದೇಶಿಸಿ, ನಾಯಕನಾಗಿ ನಟಿಸುತ್ತಿರುವ 'ವೆಂಕಟೇಶಾಯ ನಮಃ' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಪಿ. ಜನಾರ್ದನ್ ನಿರ್ಮಾಣದ ಈ ಚಿತ್ರ ಸದ್ಯದಲ್ಲೇ ತೆರೆಗೆ ಬರಲಿದೆ.

'ಮಾರ್ಡನ್ ಪ್ರೀತಿ, ಪ್ರೇಮ, ಪ್ರಣಯ ಪ್ರಸಂಗಗಳ ಸುತ್ತ ಕಥೆ ಸಾಗುತ್ತದೆ. ರೋಮ್ಯಾಂಟಿಕ್ ಲವ್ ಸ್ಟೋರಿಯಾಗಿದ್ದು, ಬೆಂಗಳೂರಿನಲ್ಲಿ ಬಹುಭಾಗ ಚಿತ್ರೀಕರಣಗೊಂಡಿದೆ. ಹುಡುಗಿ ಕೈ ಕೊಟ್ಟಾಗ ಜೀವನವನ್ನು ಸವಾಲಾಗಿ ತೆಗೆದುಕೊಂಡು, ಲವ್ ಮಾಡದೆ, ಹುಡುಗೀರ ಜತೆ ಚೆಲ್ಲಾಟವಾಡುವ ಕಥಾನಾಯಕ ವೆಂಕಟೇಶನಿಗೆ ಮತ್ತೆ ಲೈಫ್‌ನಲ್ಲಿ ಲವ್ ಆಗುತ್ತದೆಯಾ ಎಂಬುದೇ ಕಥಾಹಂದರ. ಕಥೆಯನ್ನು ಹಾಸ್ಯಮಯವಾಗಿ ಹೇಳಿದ್ದೇವೆ. ಸಂಪೂರ್ಣ ಮನರಂಜನೀಯ ಚಿತ್ರ' ಎಂದು ಹರೀಶ್ ರಾಜ್ ಹೇಳಿದ್ದಾರೆ.

ನಾಯಕ ಹರೀಶ್ ರಾಜ್ ಸಾಫ್ಟ್‌ವೇರ್ ಉದ್ಯೋಗಿ ಪಾತ್ರವನ್ನು ನಿರ್ವಹಿಸಿದ್ದಾರೆ. ಅವರ ತಾಯಿಯ ಪಾತ್ರದಲ್ಲಿ ಉಮಾಶ್ರೀ ಕಾಣಿಸಿಕೊಂಡಿದ್ದಾರೆ. ಪ್ರಕೃತಿ ಪ್ರಸಾದ್ ನಾಯಕಿ. ಅಶೋಕ್, ಉಮೇಶ್, ತಬಲಾ ನಾಣಿ, ನಾಯಕಿಯ ತಾಯಿಯಾಗಿ ಚಿತ್ಕಲಾ ಬಿರಾದಾರ್, ರಾಘು ರಾಮನ ಕೊಪ್ಪ ಸೇರಿದಂತೆ ಹಲವಾರು ಕಲಾವಿದರಿದ್ದಾರೆ.

ಪ್ರವೀಣ್ ಶ್ರೀನಿವಾಸ್‌ಮೂರ್ತಿ ಸಂಗೀತ, ಶಿವಶಂಕರ್ ಛಾಯಾಚಿತ್ರಗ್ರಹಣ, ಜೀವನ್ ಪ್ರಕಾಶ್ ಸಂಕಲನವಿದೆ.

ಸೇತುವೆ ಕುಸಿತ: 11 ಜನರ ಸಾವು

ವಡೋದರಾದಲ್ಲಿ ನಡೆದ ಅವಘಡ • ನದಿಗೆ ಬಿದ್ದ ಟ್ರಕ್, ವ್ಯಾನ್, ಆಟೊ

ವಡೋದರಾ (ಪಿಟಿಐ): ಗುಜರಾತಿನ ವಡೋದರಾ ಜಿಲ್ಲೆಯಲ್ಲಿ ನಾಲ್ಕು ದಶಕಗಳಷ್ಟು ಹಳೆಯದಾದ 'ಗಂಭೀರ' ಸೇತುವೆ ಬುಧವಾರ ಬೆಳಿಗ್ಗೆ ಕುಸಿದ ಪರಿಣಾಮ ಇಬ್ಬರು ಮಕ್ಕಳು ಸೇರಿದಂತೆ 11 ಮಂದಿ ಮೃತಪಟ್ಟಿದ್ದಾರೆ. ಇತರ ಒಂಬತ್ತು ಜನರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಜಿಲ್ಲೆಯ ಪಾದರಾ ನಗರದಲ್ಲಿ ಮಹಿಸಾಗರ್ ನದಿ ಮೇಲೆ ಈ ಸೇತುವೆ ನಿರ್ಮಿಸಲಾಗಿದೆ. ಕೇಂದ್ರ ಗುಜರಾತ್ ಮತ್ತು ಸೌರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಸೇತುವೆ ಇದಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ವಡೋದರಾ ಗ್ರಾಮೀಣ) ರೋಹನ್ ಆನಂದ್ ಹೇಳಿದರು.

ಬೆಳಿಗ್ಗೆ 7.30ರ ಸುಮಾರಿಗೆ ಸೇತುವೆಯ 10ರಿಂದ 15 ಮೀಟರ್ ಉದ್ದದ ಸ್ಲ್ಯಾಬ್ (ಎರಡು ಕಂಬಗಳ ನಡುವಿನ) ಕುಸಿದು, ದುರಂತ ಸಂಭವಿಸಿದೆ. ಈ ವೇಳೆ ಸೇತುವೆ ಮೇಲೆ ಸಾಗುತ್ತಿದ್ದ ಕೆಲ ವಾಹನಗಳು ನದಿಗೆ ಬಿದ್ದಿವೆ ಎಂದು ಅವರು ವಿವರಿಸಿದರು.

ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದವರು ಬೋಟ್‌ಗಳು, ಈಜುಪಟುಗಳು ಮತ್ತು ಸ್ಥಳೀಯ ಈಜುಗಾರರ ನೆರವಿನಿಂದ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಎನ್‌ಡಿಆರ್‌ಎಫ್ ತಂಡ ಸಹ ಸಾಥ್ ನೀಡಿತು. ರಕ್ಷಿಸಿರುವ ಒಂಬತ್ತು ಜನರ ಪೈಕಿ ಐದು ಜನರನ್ನು ಇಲ್ಲಿನ ಎಸ್‌ಎಸ್‌ಜಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನದಿಗೆ ಬಿದ್ದ ವಾಹನಗಳು: ಸೇತುವೆ ಕುಸಿದ ಪರಿಣಾಮ ಎರಡು ಟ್ರಕ್, ಎರಡು ವ್ಯಾನ್‌ಗಳು, ಒಂದು ಆಟೊರಿಕ್ಷಾ ಮತ್ತು ಒಂದು ದ್ವಿಚಕ್ರ ವಾಹನ ಸೇತುವೆಯಿಂದ ಕೆಳಗೆ ನದಿಗೆ ಉರುಳಿದವು. ಬೀಳುವ ಹಂತದಲ್ಲಿದ್ದ ಇತರ ಎರಡು ವಾಹನಗಳನ್ನು ರಕ್ಷಿಸಲಾಯಿತು ಎಂದು ವಡೋದರಾದ ಜಿಲ್ಲಾಧಿಕಾರಿ ಅನಿಲ್ ಧಮೇಲಿಯ ಮಾಹಿತಿ ನೀಡಿದರು.

ನದಿಗೆ ಬಿದ್ದ ದ್ವಿಚಕ್ರ ವಾಹನದಲ್ಲಿದ್ದ ಮೂವರು ಈಜಿಕೊಂಡು ಸುರಕ್ಷಿತವಾಗಿ ಪಾರಾಗಿದ್ದಾರೆ ಎಂದೂ ಅವರು ವಿವರಿಸಿದರು.

ತನಿಖೆಗೆ ಆದೇಶ: ಸೇತುವೆ ಕುಸಿತ ಕುರಿತು ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಗುಜರಾತಿನ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ರಾಜ್ಯ ರಸ್ತೆ ಮತ್ತು ಕಟ್ಟಡ ನಿರ್ಮಾಣ ಇಲಾಖೆಗೆ ಆದೇಶಿಸಿದ್ದಾರೆ.

ಇಲಾಖೆಯ ಹಿರಿಯರು ಮತ್ತು ಖಾಸಗಿ ತಜ್ಞ ಎಂಜಿನಿಯರ್‌ಗಳ ತಂಡವನ್ನು ರಚಿಸುವಂತೆ ಸೂಚಿಸಿರುವ ಸಿ.ಎಂ, ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ತಪಾಸಣೆ ನಡೆಸುವಂತೆ ಹೇಳಿದ್ದಾರೆ. ಅಲ್ಲದೆ ಸೇತುವೆ ಕುಸಿತಕ್ಕೆ ಕಾರಣ ಮತ್ತು ಇತರ ತಾಂತ್ರಿಕ ಮಾಹಿತಿಗಳನ್ನು ಒಳಗೊಂಡ ಪ್ರಾಥಮಿಕ ವರದಿ ಸಲ್ಲಿಸುವಂತೆಯೂ ಅವರು ನಿರ್ದೇಶಿಸಿದ್ದಾರೆ.

ವಡೋದರಾ ಜಿಲ್ಲೆಯಲ್ಲಿ ನಾಲ್ಕು ದಶಕಗಳಷ್ಟು ಹಳೆಯದಾದ 'ಗಂಭೀರ' ಸೇತುವೆ ಬುಧವಾರ ಬೆಳಿಗ್ಗೆ ಕುಸಿಯಿತು. ಈ ವೇಳೆ ನದಿಯಲ್ಲಿ ಬಿದ್ದ ವಾಹನಗಳಲ್ಲಿದ್ದ ಜನರ ರಕ್ಷಣಾ ಕಾರ್ಯ ನಡೆಯಿತು ಎಪಿ/ಪಿಟಿಐ ಚಿತ್ರ

ಪರಿಹಾರ ಘೋಷಣೆ

ದುರಂತದಲ್ಲಿ ಮೃತಪಟ್ಟವರ ಕುರಿತು ಕಂಬನಿ ಮಿಡಿದಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಮೃತರ ಕುಟುಂಬದವರಿಗೆ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50,000 ಪರಿಹಾರವನ್ನು ಪಿಎಂಎನ್‌ಆರ್‌ಎಫ್ ನಿಧಿ ಮೂಲಕ ಘೋಷಿಸಿದ್ದಾರೆ ಎಂದು ಪ್ರಧಾನಿ ಕಚೇರಿ 'ಎಕ್ಸ್'ನಲ್ಲಿ ತಿಳಿಸಿದೆ.

ಗುಜರಾತ್ ಮುಖ್ಯಮಂತ್ರಿ ಭೂಪೇಂದರ್ ಪಟೇಲ್ ಅವರು, ಮೃತರ ಕುಟುಂಬದವರಿಗೆ ತಲಾ ₹4 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50,000 ಆರ್ಥಿಕ ನೆರವು ಘೋಷಿಸಿದ್ದಾರೆ.

ಹಿಂದಿನ ಕಹಿ ಘಟನೆ

ಪಶ್ಚಿಮ ಗುಜರಾತ್‌ನ ಮಚ್ಚು ನದಿ ಮೇಲೆ ನಿರ್ಮಿಸಲಾಗಿದ್ದ ಶತಮಾನದಷ್ಟು ಹಳೆಯ ತೂಗುಸೇತುವೆ 2022ರ ಅಕ್ಟೋಬರ್ 30ರಂದು ಮುರಿದು ಬಿದ್ದು, ಸುಮಾರು 135 ಮಂದಿ ಮೃತಪಟ್ಟಿದ್ದರು.

ವಿಮಾನ ದುರಂತ ಈ ವಾರ ವರದಿ

ನವದೆಹಲಿ: ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ ಬೋಯಿಂಗ್ ಡ್ರೀಮ್‌ಲೈನರ್ ವಿಮಾನ ದುರಂತ ಕುರಿತಂತೆ ಈ ವಾರದಲ್ಲೇ ಪ್ರಾಥಮಿಕ ತನಿಖಾ ವರದಿ ಬಿಡುಗಡೆ ಮಾಡುವುದಾಗಿ ಸಂಸತ್ತಿನ ಸ್ಥಾಯಿ ಸಮಿತಿಗೆ ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ಬುಧವಾರ ತಿಳಿಸಿದೆ.

ಜೆಡಿಯು ಸಂಸದ ಸಂಜಯ್ ಝಾ ನೇತೃತ್ವದ ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆಗಳ ಮೇಲಿನ ಸ್ಥಾಯಿ ಸಮಿತಿಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ವಿಮಾನದ ಬ್ಲ್ಯಾಕ್ ಬಾಕ್ಸ್‌ಗೆ (ಕಪ್ಪು ಪೆಟ್ಟಿಗೆ) ಹಾನಿ ಆಗಿಲ್ಲ. ಅದರಲ್ಲಿನ ದತ್ತಾಂಶ ಪರಿಶೀಲನೆ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ವಿದೇಶಿ ತಂತ್ರಜ್ಞರ ಸಹಕಾರ ಪಡೆದು ತನಿಖೆ ನಡೆಸಲಾಗಿದೆ ಎಂದು ಎಎಐಬಿ ಪ್ರಧಾನ ನಿರ್ದೇಶಕ ಜಿವಿಜಿ ಯುಗಾಂಧರ್ ತಿಳಿಸಿದ್ದಾರೆ.

ಜಾಗ್ವಾರ್ ಪತನ: ಇಬ್ಬರು ಪೈಲಟ್‌ಗಳ ಸಾವು

ಜೈಪುರ/ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ (ಐಎಎಫ್) ಜಾಗ್ವಾರ್ ತರಬೇತಿ ವಿಮಾನವು ರಾಜಸ್ಥಾನದ ಚುರೂ ಜಿಲ್ಲೆಯಲ್ಲಿ ಬುಧವಾರ ಪತನಗೊಂಡಿದ್ದು, ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ.

'ದೈನಂದಿನ ತರಬೇತಿ ವೇಳೆ ವಿಮಾನ ಪತನಗೊಂಡಿದ್ದು, ಅಪಘಾತದಲ್ಲಿ ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ ಮತ್ತು ನಾಗರಿಕ ಆಸ್ತಿ-ಪಾಸ್ತಿಗಳಿಗೆ ಯಾವುದೇ ಹಾನಿಯಾಗಿಲ್ಲ. ಅಪಘಾತಕ್ಕೆ ಕಾರಣವೇನೆಂದು ತಿಳಿಯಲು ತನಿಖಾ ಸಮಿತಿಯನ್ನು ರಚಿಸಲಾಗಿದೆ' ಎಂದು ಐಎಎಫ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಭಾನೋಡಾ ಗ್ರಾಮದ ಕೃಷಿ ಭೂಮಿಯಲ್ಲಿ ಮಧ್ಯಾಹ್ನ 1.25ರ ಸುಮಾರಿಗೆ ವಿಮಾನ ಪತನಗೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಾಗ್ವಾರ್ ಯುದ್ಧ ವಿಮಾನವು ರಾಜಸ್ಥಾನದಲ್ಲಿ ಪತನಗೊಂಡು, ಹೊತ್ತಿ ಉರಿಯಿತು – ಪಿಟಿಐ ಚಿತ್ರ

ಹಳಸಿದ ಆಹಾರ: ಕ್ಯಾಂಟೀನ್ ಪರವಾನಗಿ ರದ್ದು

ಮುಂಬಯಿ (ಪಿಟಿಐ): ಹಳಸಿದ ಆಹಾರ ನೀಡಲಾಗಿದೆ ಎಂದು ಆರೋಪಿಸಿ ಶಿವಸೇನಾ ಶಾಸಕ ಸಂಜಯ್ ಗಾಯಕ್ವಾಡ್, ಮುಂಬೈನ ಶಾಸಕರ ಭವನದ ಕ್ಯಾಂಟೀನ್‌ನ ಉದ್ಯೋಗಿಯೊಬ್ಬರಿಗೆ ಥಳಿಸಿರುವ ಆರೋಪ ಕೇಳಿಬಂದ ಬೆನ್ನಲ್ಲೇ, ಈ ಕ್ಯಾಂಟೀನ್‌ನ ಪರವಾನಗಿಯನ್ನು ಮಹಾರಾಷ್ಟ್ರದ ಆಹಾರ ಮತ್ತು ಔಷಧ ಇಲಾಖೆ (ಎಫ್‌ಡಿಎ) ರದ್ದುಗೊಳಿಸಿದೆ.

ಶಾಸಕರ ಭವನದ ಕ್ಯಾಂಟೀನ್ ನಿರ್ವಹಣೆ ಗುತ್ತಿಗೆ ಪಡೆದಿರುವ ಅಜಂತಾ ಕೇಟರ್ಸ್ ಸಂಸ್ಥೆಯು, ಆಹಾರ ಸುರಕ್ಷತಾ ಮಾನದಂಡ ಉಲ್ಲಂಘಿಸಿದೆ ಎಂದು ಎಫ್‌ಡಿಎ ಹೇಳಿದೆ.

ಶಾಸಕ ಉದ್ಯೋಗಿಗೆ ಥಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ವಿಪಕ್ಷಗಳು ಶಾಸಕರ ನಡವಳಿಕೆಯನ್ನು ಟೀಕಿಸಿವೆ.

ಮಂಗಳವಾರ ರಾತ್ರಿ ಘಟನೆ ನಡೆದಿದ್ದು, ತನಗೆ ಕಳಪೆ ಆಹಾರ ನೀಡಲಾಗಿದ್ದು, ಇದರ ಬಗ್ಗೆ ಮಹಾರಾಷ್ಟ್ರ ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸುವುದಾಗಿ ಹೇಳಿದ್ದಾರೆ. ಕ್ಯಾಂಟೀನ್ ನಿರ್ವಾಹಕರನ್ನು ಅವರು ಗದರಿಸಿರುವುದು, ಕೌಂಟರ್‌ನಲ್ಲಿದ್ದ ಸಿಬ್ಬಂದಿಯನ್ನು ಥಳಿಸಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಶಿವಸೇನಾ (ಉದ್ಧವ್ ಠಾಕ್ರೆ) ಬಣದ ರಾಜ್ಯಸಭಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಅವರು ಗಾಯಕ್ವಾಡ್ ಅವರ ಕೃತ್ಯವನ್ನು ಖಂಡಿಸಿದ್ದು, ಕಳೆದ ವರ್ಷ ಅವರು ರಾಹುಲ್ ಗಾಂಧಿ ಅವರ ನಾಲಗೆಯನ್ನು ಕತ್ತರಿಸುವವರಿಗೆ ₹11 ಲಕ್ಷ ಘೋಷಿಸಿದ್ದನ್ನು ನೆನಪಿಸಿಕೊಂಡಿದ್ದಾರೆ. ಗಾಯಕ್ವಾಡ್ ಅವರು ಕಳೆದ ವರ್ಷ ಪೊಲೀಸರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು.

ಶರ್ಜೀಲ್ ಜಾಮೀನು ತೀರ್ಪು ಕಾಯ್ದಿರಿಸಿದ ಕೋರ್ಟ್

ನವದೆಹಲಿ (ಪಿಟಿಐ): 2020ರಲ್ಲಿ ದೆಹಲಿಯಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿದ ಪ್ರಕರಣದಲ್ಲಿ ಜೆಎನ್‌ಯು ಹಳೆ ವಿದ್ಯಾರ್ಥಿ ಶರ್ಜೀಲ್ ಇಮಾಮ್ ಹಾಗೂ ಉಮರ್ ಖಲೀದ್ ಅವರ ಜಾಮೀನು ಅರ್ಜಿ ವಿಚಾರಣೆ ನಡೆಸಿರುವ ದೆಹಲಿ ಹೈಕೋರ್ಟ್ ತೀರ್ಪನ್ನು ಬುಧವಾರ ಕಾಯ್ದಿರಿಸಿತು.

ಶರ್ಜೀಲ್ ಇಮಾಮ್

ವಾದ-ಪ್ರತಿವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳಾದ ನವೀನ್ ಚಾವ್ಲಾ ಹಾಗೂ ಶಾಲಿಂದರ್ ಕೌರ್ ಅವರಿದ್ದ ಪೀಠವು ತೀರ್ಪು ಕಾಯ್ದಿರಿಸಿತು.

'ಇದು ಸಾಮಾನ್ಯ ಹಿಂಸಾಚಾರ ಪ್ರಕರಣವಲ್ಲ; ಜಾಗತಿಕ ಮಟ್ಟದಲ್ಲಿ ಭಾರತದ ಮಾನಹಾನಿ ಮಾಡುವ ಉದ್ದೇಶದಿಂದ ಕೂಡಿದ ಪೂರ್ವಯೋಜಿತ ಕೃತ್ಯವಾಗಿತ್ತು. ಹೀಗಾಗಿ ಜಾಮೀನು ನೀಡಬಾರದು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

2019ರ ಡಿಸೆಂಬರ್ 13 ಮತ್ತು 16ರಂದು ಕ್ರಮವಾಗಿ ಜಾಮಿಯಾ ಮಿಲಿಯಾ ಇಸ್ಲಾಮಿಯಾ ಮತ್ತು ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಭಾಷಣದ ಮೂಲಕ ಶರ್ಜೀಲ್ ಹಾಗೂ ಉಮರ್ ಗಲಭೆಗೆ ಪ್ರಚೋದನೆ ನೀಡಿದ್ದಾರೆ ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ.

ಸಂಕ್ಷಿಪ್ತ ಸುದ್ದಿ

ನೆಲೆ ಕಳೆದುಕೊಂಡ 100ಕ್ಕೂ ಹೆಚ್ಚು ಕುಟುಂಬಗಳು

ಅಗರ್ತಲಾ/ನಾಗ್ಪುರ (ಪಿಟಿಐ): ದಕ್ಷಿಣ ತ್ರಿಪುರಾ ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಸಂಭವಿಸಿರುವ ಭೀಕರ ಪ್ರವಾಹದಿಂದಾಗಿ 100ಕ್ಕೂ ಹೆಚ್ಚು ಕುಟುಂಬಗಳು ನಿರಾಶ್ರಿತವಾಗಿವೆ ಎಂದು ಬುಧವಾರ ಅಧಿಕಾರಿಗಳು ತಿಳಿಸಿದ್ದಾರೆ.

'ಸೋಮವಾರ ರಾತ್ರಿಯಿಂದ ಭಾರಿ ಮಳೆ ಸುರಿಯುತ್ತಿದ್ದು, ತಗ್ಗು ಪ್ರದೇಶಗಳಾದ ಬೆಲೋನಿಯಾ ಮತ್ತು ಸಂತೀರ್‌ಬಜಾರ್ ಉಪವಿಭಾಗಗಳು ಪ್ರವಾಹದಲ್ಲಿ ಮುಳುಗಿವೆ. 118 ಕುಟುಂಬಗಳ 289 ಜನರನ್ನು 10 ನಿರಾಶ್ರಿತ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ' ಎಂದು ದಕ್ಷಿಣ ತ್ರಿಪುರಾದ ಜಿಲ್ಲಾ ಮ್ಯಾಜಿಸ್ಟ್ರೇಟ್ ಮುಹಮ್ಮದ್ ಸಜಾದ್ ಅವರು ತಿಳಿಸಿದ್ದಾರೆ.

ಮುಹುರಿ ನದಿ ನೀರಿನ ಪ್ರಮಾಣ ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು (15.70 ಮೀಟರ್), ಒಡ್ಡಿನ ಎರಡು ಬದಿಯೂ ನೀರು ನುಗ್ಗುತ್ತಿದೆ.

ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯಲ್ಲೂ ಪ್ರವಾಹದ ಆತಂಕವಿದ್ದು, ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಹೋಟೆಲ್ ಉದ್ಯಮಿ ಸೆರೆ

ಹೈದರಾಬಾದ್(ಪಿಟಿಐ): ಮಾದಕ ವಸ್ತುಗಳ ಸಾಗಣೆ ಮತ್ತು ಸೇವನೆಯ ದೊಡ್ಡ ಜಾಲವೊಂದನ್ನು ಭೇದಿಸಿರುವ ಹೈದರಾಬಾದ್ ಪೊಲೀಸರು ಬೆಂಗಳೂರಿನ ನಂಟಿರುವ ಹೋಟೆಲ್ ಮಾಲೀಕ ಸೇರಿದಂತೆ ಹಲವರನ್ನು ಬಂಧಿಸಿದ್ದಾರೆ.

ಗುಪ್ತಚರ ಮಾಹಿತಿ ಆಧರಿಸಿ ಸೈಬರಾಬಾದ್ ಮಾದಕ ವಸ್ತುಗಳ ನಿಗ್ರಹ ಠಾಣೆ ಪೊಲೀಸರು ಜುಲೈ 7ರಂದು ಕೊಂಪಲ್ಲಿ ರೆಸ್ಟೋರೆಂಟ್ ಬಳಿ ಕಾರಿನಲ್ಲಿ ತೆರಳುತ್ತಿದ್ದ 34 ವರ್ಷದ ಸೂರ್ಯ ಅಣ್ಣಾಮನೇನಿ ಎಂಬುವರನ್ನು ಬಂಧಿಸಿ ವಿಚಾರಣೆ ನಡೆಸಿದ್ದರು. ಎಂಬಿಎ ಪದವೀಧರನೂ ಆಗಿರುವ ಕೊಂಪಲ್ಲಿಯ ಈತ 'ಮಲ್ನಾಡ್ ಕಿಚನ್' ಎಂಬ ರೆಸ್ಟೋರೆಂಟ್ ನಡೆಸುತ್ತಿರುವುದು ಬೆಳಕಿಗೆ ಬಂದಿದೆ. ಅಣ್ಣಾಮನೇನಿ ಈ ಹಿಂದೆ ಬೆಂಗಳೂರಿನಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರು. ಅನಂತರ ಹೈದರಾಬಾದ್‌ಗೆ ಬಂದಿದ್ದರು ಎನ್ನಲಾಗಿದೆ.

ವಕೀಲರಿಗೆ ಇ.ಡಿ ಸಮನ್ಸ್: ವಿಚಾರಣೆ ನಡೆಸಲಿದೆ 'ಸುಪ್ರೀಂ'

ನವದೆಹಲಿ (ಪಿಟಿಐ): ಪ್ರಕರಣಗಳಲ್ಲಿ ಕಾನೂನು ಸಲಹೆ ನೀಡುವ ಹಾಗೂ ಕಕ್ಷಿದಾರರನ್ನು ಪ್ರತಿನಿಧಿಸುವ ವಕೀಲರಿಗೆ ಸಮನ್ಸ್ ಜಾರಿ ಮಾಡಿ ವಿಚಾರಣೆ ನಡೆಸುವ ಜಾರಿ ನಿರ್ದೇಶನಾಲಯದ (ಇ.ಡಿ) ಪ್ರವೃತ್ತಿಯ ಬಗ್ಗೆ ಸ್ವಯಂ ಪ್ರೇರಿತ ಪ್ರಕರಣವನ್ನು ಸುಪ್ರೀಂ ಕೋರ್ಟ್ ದಾಖಲಿಸಿಕೊಂಡಿದ್ದು, ಜುಲೈ 14ರಂದು ವಿಚಾರಣೆ ನಡೆಸಲಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠವು ವಿಚಾರಣೆ ನಡೆಸಲಿದೆ. ಹಿರಿಯ ವಕೀಲರಾದ ಅರವಿಂದ್ ದಾತಾರ್, ಪ್ರತಾಪ್ ವೇಣುಗೋಪಾಲ್ ಅವರಿಗೆ ಇ.ಡಿ ಸಮನ್ಸ್ ನೀಡಿದ ಹಿನ್ನಲೆ ಈ ಕ್ರಮ ಕೈಗೊಳ್ಳಲಾಗಿದೆ.

ನೊಬೆಲ್ ಪ್ರಶಸ್ತಿಗೆ ವಿಲಕ್ಷಣ ಆಯ್ಕೆಗಳು: ಜೈರಾಮ್

ನವದೆಹಲಿ (ಪಿಟಿಐ): ಶತಮಾನದಿಂದೀಚೆಗೆ ನೊಬೆಲ್ ಪ್ರಶಸ್ತಿಗೆ ವಿಲಕ್ಷಣ ಆಯ್ಕೆಗಳನ್ನು ಮಾಡಲಾಗುತ್ತಿದ್ದು, ಈ ಸಂಬಂಧಿಸಿದ ಲೋಪದೋಷಗಳು ಸ್ಪಷ್ಟವಾಗಿ ಕಾಣಿಸುತ್ತಿವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.



2025ನೇ ಸಾಲಿನ ನೊಬೆಲ್ ಪ್ರಶಸ್ತಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಪಾಕಿಸ್ತಾನ, ಇಸ್ರೇಲ್ ನಾಮನಿರ್ದೇಶನ ಮಾಡಿರುವುದನ್ನು ಉಲ್ಲೇಖಿಸಿ ಈ ಹೇಳಿಕೆ ನೀಡಿದ್ದಾರೆ.

'ಸಾಮಾನ್ಯವಾಗಿ ನೊಬೆಲ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರನ್ನು ಯಾರು ನಾಮನಿರ್ದೇಶನ ಮಾಡಿದ್ದಾರೆ ಎಂಬುದು 50 ವರ್ಷಗಳ ನಂತರ ತಿಳಿಯುತ್ತದೆ. ನಾಮನಿರ್ದೇಶನ ಮಾಡಿದವರು ತಮ್ಮ ಆಯ್ಕೆಗಳನ್ನು ಸಾರ್ವಜನಿಕವಾಗಿ ಯಾವಾಗಾದರೂ ಘೋಷಿಸಿಕೊಳ್ಳಬಹುದು ಇಸ್ರೇಲ್ ಮತ್ತು ಪಾಕಿಸ್ತಾನವು ಟ್ರಂಪ್ ಅವರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ ಹೇಳಿಕೊಂಡಿವೆ' ಎಂದಿದ್ದಾರೆ.

ಮತಾಂತರ ಜಾಲ: ಪ್ರಕರಣ ದಾಖಲಿಸಿದ ಇ.ಡಿ

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜದಲ್ಲಿನ ದುರ್ಬಲ ಮತ್ತು ಬಡ ಜನರಿಗೆ ಹಣದ ಆಮಿಷವೊಡ್ಡಿ, ಮತಾಂತರ ದಂಧೆ ನಡೆಸುತ್ತಿರುವ ಜಾಲದ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿದೆ.

ಮತಾಂತರ ಕಾರ್ಯಕ್ಕಾಗಿ ಈ ದಂಧೆಯಲ್ಲಿ ತೊಡಗಿರುವವರಿಗೆ ವಿದೇಶಗಳಿಂದ ಕೋಟ್ಯಂತರ ರೂಪಾಯಿ ಅಕ್ರಮವಾಗಿ ವರ್ಗಾವಣೆ ಆಗಿದೆ ಎಂದು ಇ.ಡಿ ಉಲ್ಲೇಖಿಸಿದೆ.

ಜಾರಿ ನಿರ್ದೇಶನಾಲಯದ ಲಖನೌ ಘಟಕವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಮಂಗಳವಾರ ಸಂಜೆ ಪ್ರಕರಣ ದಾಖಲು ಮಾಡಿದೆ.

ಮತಾಂತರ ದಂಧೆಯ ಸೂತ್ರಧಾರ ಜಮಾಲುದ್ದೀನ್ ಅಲಿಯಾಸ್ ಚಂಗೂರ್ ಬಾಬಾನ ಅಕ್ರಮ ಚಟುವಟಿಕೆಗಳು ಮತ್ತು ವಿದೇಶದಿಂದ ವರ್ಗಾವಣೆಯಾಗಿರುವ ಹಣಕಾಸಿನ ಕುರಿತು ಇ.ಡಿ ತನಿಖೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

ಮತಾಂತರ ಜಾಲ ನಡೆಸುತ್ತಿದ್ದಾರೆ ಎಂಬ ಆರೋಪದ ಮೇಲೆ ಚಂಗೂರ್ ಬಾಬಾನನ್ನು ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ಪಡೆ (ಎಟಿಎಸ್) ಈಗಾಗಲೇ ಬಂಧಿಸಿದೆ. ದೇಶದಲ್ಲಿ ಈ ಕಾರ್ಯಕ್ಕಾಗಿ ವಿದೇಶಗಳಿಂದ ₹100 ಕೋಟಿಗೂ ಹೆಚ್ಚು ಹಣಕಾಸು ಪಡೆದಿರುವ ಆರೋಪ ಅವರ ಮೇಲಿದೆ.

ಚಂಗೂರ್ ಬಾಬಾ ಅವರನ್ನು ಶೀಘ್ರದಲ್ಲಿಯೇ ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸುವ ಸಾಧ್ಯತೆಯಿದೆ ಎಂದೂ ಮೂಲಗಳು ಹೇಳಿವೆ.

ಮಹಾಘಟಬಂಧನ್ ಕಾರ್ಯಕರ್ತರಿಂದ ಹಲವೆಡೆ ರಸ್ತೆ, ರೈಲು ತಡೆ

ಪರಿಷ್ಕರಣೆ ವಿರೋಧಿಸಿ ಪ್ರತಿಭಟನೆ

ಪಟ್ನಾ/ಅರವಲ್/ಜೆಹನಾಬಾದ್/ದರ್ಭಾಂಗ್ (ಪಿಟಿಐ): ಬಿಹಾರದಲ್ಲಿ ಮತದಾರ ಪಟ್ಟಿಯ ವಿಶೇಷ ಪರಿಷ್ಕರಣೆಯನ್ನು ವಿರೋಧಿಸಿ ಮಹಾಘಟಬಂಧನ್ ಮೈತ್ರಿಕೂಟವು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಇಲ್ಲಿನ ಚುನಾವಣಾ ಆಯೋಗದ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿತು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಬೆಳಿಗ್ಗೆ ಬಿಹಾರಕ್ಕೆ ಆಗಮಿಸಿದರು. ನಂತರ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಮತ್ತು ವಿರೋಧ ಪಕ್ಷಗಳ ಹಿರಿಯ ನಾಯಕರೊಂದಿಗೆ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪಟ್ನಾದ ಆದಾಯ ತೆರಿಗೆ ಕಚೇರಿಯಿಂದ ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿದರು.

ಮಹಾಘಟಬಂಧನ್ ಮೈತ್ರಿಕೂಟವು ರಾಜ್ಯದಾದ್ಯಂತ ಬಂದ್‌ಗೆ ಕರೆನೀಡಿದ್ದರಿಂದ ವಿರೋಧ ಪಕ್ಷಗಳ ಕಾರ್ಯಕರ್ತರು ಹಲವು ಕಡೆಗಳಲ್ಲಿ ರಸ್ತೆ ಮತ್ತು ರೈಲು ತಡೆ ನಡೆಸಿದರು. ಮಹಾತ್ಮ ಗಾಂಧಿ ಸೇತು ಸಮೀಪ ಕಾರ್ಯಕರ್ತರು ರಸ್ತೆ ಮೇಲೆ ಟೈಯರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು, ವಾಹನ ಸಂಚಾರಕ್ಕೆ ಅಡ್ಡಿ ಮಾಡಿದರು.

> ಆಯೋಗವು ಬಿಜೆಪಿಯ ನಿರ್ದೇಶನದಂತೆ ಅದು ಕೆಲಸ ಮಾಡುತ್ತಿದೆ. ಚುನಾವಣಾಧಿಕಾರಿಗಳನ್ನು ಬಿಜೆಪಿ ನೇಮಕ ಮಾಡುತ್ತಿದೆ
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> ಪ್ರತಿಭಟನೆ ಮೂಲಕ ನ್ಯಾಯಾಂಗದ ಮೇಲೆ ಒತ್ತಡ ಹೇರಲು ವಿಪಕ್ಷಗಳು ಯತ್ನಿಸುತ್ತಿವೆ. ಜುಲೈ 10ರಂದು ವಿಚಾರಣೆಯಿದೆ. ಹಾಗಿದ್ದರೂ ಇಂದು ಪ್ರತಿಭಟನೆ ಏಕೆ?
> **ರವಿಶಂಕರ್ ಪ್ರಸಾದ್,** ಬಿಜೆಪಿ ನಾಯಕ

'ಅಕ್ರಮಕ್ಕೆ ಅವಕಾಶ ನೀಡಲ್ಲ'

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಪರವಾಗಿ 'ಅಕ್ರಮ' ಎಸಗಲಾಗಿತ್ತು. ಈಗಲೂ ಅಂಥದ್ದೇ ಅಕ್ರಮಕ್ಕೆ ಕೇಂದ್ರ ಸರ್ಕಾರ ಯೋಜಿಸಿದೆ ಎಂದು ರಾಹುಲ್ ಗಾಂಧಿ ಅವರು ಆರೋಪಿಸಿದರು.

'ಪರಿಷ್ಕರಣೆಯು 'ಮಹಾರಾಷ್ಟ್ರ ಮಾದರಿ'ಯ ವಿಸ್ತೃತ ರೂಪ. ಇದು ಬಿಹಾರ ಮತದಾರರ ಹಕ್ಕು ಮತ್ತು ಅವರ ಭವಿಷ್ಯವನ್ನು ಕಸಿಯಲಿದೆ. ಇದಕ್ಕೆ ನಾವು ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

ಲಾರ್ಡ್ಸ್‌ನಲ್ಲಿಯೂ 'ಶುಭ' ಆಶಯ

ಟೆಸ್ಟ್ ಇಂದಿನಿಂದ: ಭಾರತ–ಇಂಗ್ಲೆಂಡ್ ಮುಖಾಮುಖಿ
• ಜಸ್‌ಪ್ರೀತ್ ಬೂಮ್ರಾ, ಜೋಫ್ರಾ ಆರ್ಚರ್ ಜಿದ್ದಾಜಿದ್ದಿ

• ಸಿದ್ಧಿ ಕಿರಣ್

ಲಂಡನ್: ಆತಿಥೇಯ ಇಂಗ್ಲೆಂಡ್ ಬಳಗದ ಮಂತ್ರಕ್ಕೇ ತಿರುಮಂತ್ರ ಹಾಕಿರುವ ಭಾರತವು ಲಾರ್ಡ್ಸ್‌ನಲ್ಲಿ ಗುರುವಾರ ಆರಂಭವಾಗಲಿರುವ ಮೂರನೇ ಟೆಸ್ಟ್ ಪಂದ್ಯದಲ್ಲಿ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸುವತ್ತ ಚಿತ್ತ ನೆಟ್ಟಿದೆ.

2022ರ ಬೇಸಿಗೆಯಲ್ಲಿ ಬ್ರೆಂಡನ್ ಮೆಕ್ಕಲಂ ಅವರು ಮುಖ್ಯ ಕೋಚ್ ಆಗಿ ನೇಮಕವಾದ ದಿನದಿಂದ ಇಂಗ್ಲೆಂಡಿನ ತಂತ್ರಗಾರಿಕೆ ಬದಲಾಗಿದೆ. ಅದರ ಭಾಗವಾಗಿ ಸಪಾಟಾದ ಪಿಚ್‌ಗಳು (ಸೀಮಿತ ಓವರ್ ಕ್ರಿಕೆಟ್‌ನಲ್ಲಿರುವಂತೆ) ಸಿದ್ಧವಾಗಿವೆ. ಇಂಗ್ಲೆಂಡ್ ಟಾಸ್ ಗೆದ್ದು ಎದುರಾಳಿಗಳನ್ನು ಬ್ಯಾಟಿಂಗ್‌ಗೆ ಆಹ್ವಾನಿಸುವುದು ಕೂಡ ಈ ತಂತ್ರಗಾರಿಕೆಯ ಭಾಗವೇ ಆಗಿದೆ. ಮೊದಲು ಬ್ಯಾಟ್ ಮಾಡುವ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವುದು. ದೊಡ್ಡ ಮುನ್ನಡೆ ಸಾಧಿಸುವುದು. ಅಪ್ಪೊತ್ತಿಗೆ ಪಿಚ್ ಬೌಲರ್‌ಗಳಿಗೆ ನೆರವು ನೀಡುವ ಲಕ್ಷಣಗಳು ತೋರಿದಾಗ ಎದುರಾಳಿ ಬ್ಯಾಟರ್‌ಗಳ ಮೇಲೆ ಒತ್ತಡ ಹಾಕುವುದು. ಗುರಿಯನ್ನು ವೇಗವಾಗಿ ಬೆನ್ನಟ್ಟಿ ಗೆಲ್ಲುವುದು ತಂತ್ರವಾಗಿದೆ.

ಒಂದೊಮ್ಮೆ ಇಂಗ್ಲೆಂಡ್ ತಂಡವು ಮೊದಲು ಬ್ಯಾಟಿಂಗ್ ಮಾಡುವ ಪ್ರಸಂಗ ಬಂದರೂ ಬೀಸಾಟಕ್ಕೆ ಹೆಚ್ಚು ಒತ್ತು ನೀಡಿ ದೊಡ್ಡ ಮೊತ್ತ ಗಳಿಸುವತ್ತಲೇ ಚಿತ್ತ ಇಡುತ್ತದೆ. ಸ್ಕೋರ್‌ಬೋರ್ಡ್ ಒತ್ತಡದಲ್ಲಿ ವಿರೋಧಿ ತಂಡವನ್ನು ಸಿಲುಕಿಸಿ ಗುರಿಯನ್ನು ಬೆನ್ನಟ್ಟುವ ತಂತ್ರ ಅನುಸರಿಸುತ್ತದೆ. ಲೀಡ್ಸ್‌ನಲ್ಲಿ ನಡೆದಿದ್ದ ಭಾರತದ ಮೊದಲ ಪಂದ್ಯದಲ್ಲಿ 371 ರನ್‌ಗಳ ಗುರಿಯನ್ನು ನಿರಾಯಾಸವಾಗಿ ಇಂಗ್ಲೆಂಡ್ ಬೆನ್ನಟ್ಟಿ ಗೆದ್ದ ಪರಿಯೇ ಎಲ್ಲವನ್ನೂ ಹೇಳುತ್ತದೆ. ಆ ಪಂದ್ಯದಲ್ಲಿ ಭಾರತವು ಮೊದಲ ದಿನದಂದಲೂ ಬಹುತೇಕ ಅವಧಿ ಪಾರಮ್ಯ ಮೆರೆದಿತ್ತು. ತಂಡದ ಐವರು ಬ್ಯಾಟರ್‌ಗಳು ಶತಕ ಬಾರಿಸಿದ್ದರು. ಆದರೂ ಕೊನೆಯಲ್ಲಿ ಆತಿಥೇಯ ತಂಡ ಮೇಲುಗೈ ಸಾಧಿಸಿತ್ತು.

ಎಜ್‌ಬಾಸ್ಟನ್‌ನಲ್ಲಿಯೂ ಇದೇ ತಂತ್ರವನ್ನು ಮುಂದುವರಿಸಿದ ಬೆನ್ ಸ್ಟೋಕ್ಸ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಭಾರತ ತಂಡದ ನಾಯಕ ಶುಭಮನ್ ಗಿಲ್ ಮೊದಲ ಇನಿಂಗ್ಸ್‌ನಲ್ಲಿ ದ್ವಿಶತಕ (269) ಗಳಿಸಿದರು. ಎರಡನೇ ಇನಿಂಗ್ಸ್‌ನಲ್ಲಿ ಶತಕ (161) ಹೊಡೆದರು. ಅವರ ಆಟದ ಕಾವು ಇಂಗ್ಲೆಂಡ್ ಪಡೆಯನ್ನು ಕರಗಿಸಿಬಿಟ್ಟಿತು. ಪಿಚ್‌ನಲ್ಲಿ ಬೌಲರ್‌ಗಳಿಗೆ ಯಾವ ನೆರವೂ ಇರಲಿಲ್ಲ ಮತ್ತು ಡ್ಯೂಕ್ ಚೆಂಡಿನ ಹೊಳಪು ಕೂಡ ಪರಿಣಾಮ ಬೀರುತ್ತಿರಲಿಲ್ಲ. ಆದರೆ ಭಾರತದ ವೇಗದ ಜೋಡಿ ಮೊಹಮ್ಮದ್ ಸಿರಾಜ್ ಮತ್ತು ಆಕಾಶ್ ದೀಪ್ ಅವರ ಅಮೋಘ ಬೌಲಿಂಗ್‌ನಿಂದಾಗಿ ಭಾರತ ಐತಿಹಾಸಿಕ ಜಯ ಸಾಧಿಸಿತು. ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ಆದರೆ 'ಕ್ರಿಕೆಟ್ ಕಾಶಿ' ಲಾರ್ಡ್ಸ್‌ನಲ್ಲಿ ಪರಿಸ್ಥಿತಿ ವಿಭಿನ್ನವಾಗಿರುವ ಸಾಧ್ಯತೆ ಇದೆ. ಮೂರನೇ ಟೆಸ್ಟ್‌ನಲ್ಲಿ ವೇಗದ ತಾರೆ, ಭಾರತ ತಂಡಕ್ಕೆ ಜಸ್‌ಪ್ರೀತ್ ಬೂಮ್ರಾ ಮತ್ತು ಇಂಗ್ಲೆಂಡ್ ಬಳಗಕ್ಕೆ ಬಿರುಗಾಳಿ ವೇಗದ ಬೌಲರ್ ಜೋಫ್ರಾ ಆರ್ಚರ್ ಮರಳುವರು. ಬೂಮ್ರಾ ಎಜ್‌ಬಾಸ್ಟನ್‌ನಲ್ಲಿ ವಿಶ್ರಾಂತಿ ಪಡೆದಿದ್ದರು. ಜೋಫ್ರಾ 2021ರಲ್ಲಿ ಅಹಮದಾಬಾದ್ ಟೆಸ್ಟ್‌ನಲ್ಲಿ ಆಡಿದ ನಂತರ ಗಾಯಗೊಂಡು ವಿಶ್ರಾಂತಿಯಲ್ಲಿದ್ದರು. 30 ವರ್ಷದ ಬೌಲರ್ ತಮ್ಮ ಪ್ರತಾಪ ಮೆರೆಯಲು ಸಿದ್ಧರಾಗಿದ್ದಾರೆ.

ಬೂಮ್ರಾ ಮರಳುವುದು ಖಚಿತವಾಗಿರುವುದರಿಂದ ಭಾರತ ತಂಡದ ಬೌಲಿಂಗ್ ವಿಭಾಗದಲ್ಲಿ ಬದಲಾವಣೆ ಬಹುತೇಕ ಖಚಿತವಾಗಿದೆ. ಆಕಾಶ್ ಅವರು ಕಳೆದ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ನೀಡಿರುವುದರಿಂದಾಗಿ ಪ್ರಸಿದ್ಧಕೃಷ್ಣ ಅವರು ಬೆಂಚ್‌ನಲ್ಲಿ ಕೂರಬಹುದು. ಪಿಚ್ ಕ್ಯುರೇಟರ್ ಏನಾದರೂ ಅಂಗಣದ ಮೇಲೆ ಹಸಿರು ಗರಿಕೆಗಳನ್ನು ಹಾಗೆಯೇ ಉಳಿಸಿದರೆ ಆಕಾಶ್ ಅವರ 'ದ್ವಿಮುಖ ಸ್ವಿಂಗ್' ರಂಗೇರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಎರಡನೇ ಸ್ಪಿನ್ನರ್ ಆಗಿ ವಾಷಿಂಗ್ಟನ್ ಸುಂದರ್ ಅವರನ್ನೇ ಕಣಕ್ಕಿಳಿಸುವ ಸಾಧ್ಯತೆಗಳು ಹೆಚ್ಚು. ಪಂದ್ಯದ ದಿನಗಳಲ್ಲಿ ಇಲ್ಲಿಯ ವಾತಾವರಣವು ಪ್ರಖರ ಬಿಸಿಲು ಮತ್ತು ಸೆಕೆಯಿಂದ ಕೂಡಿರುವ ಸಾಧ್ಯತೆಗಳಿವೆ. ಅದರಿಂದ ಎರಡನೇ ಸ್ಪಿನ್ನರ್ ಆಡಿಸುವುದು ಸ್ವಲ್ಪ ಭಾರವಾಗಬಹುದು.

ವಾಷಿಂಗ್ಟನ್ ಅವರು 10 ಟೆಸ್ಟ್‌ಗಳಲ್ಲಿ 43.50ರ ಸರಾಸರಿಯಲ್ಲಿ ರನ್ ಗಳಿಸಿದ್ದಾರೆ. ಅಜೇಯ 96 ಅವರ ಶ್ರೇಷ್ಠ ಸ್ಕೋರ್ ಆಗಿದೆ. ತಂಡಕ್ಕೆ ಅಗತ್ಯವಿದ್ದ ಸಂದರ್ಭಗಳಲ್ಲಿ ಅವರು ಬ್ಯಾಟಿಂಗ್ ಮೂಲಕವೂ ನೆರವಾಗಿದ್ದಾರೆ.

ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್‌ಗೆ ಬರುವ ಮುನ್ನ ಪ್ರಮುಖ ಟೆಸ್ಟ್ ಸರಣಿಗಳಲ್ಲಿ ಸೋಲಿನ ಕಹಿಯುಂಡಿತ್ತು. ದಿಗ್ಗಜ ಆಟಗಾರರ ದಿಢೀರ್ ನಿವೃತ್ತಿಯಿಂದ ಅಸಮತೋಲನಗೊಳ್ಳುವ ಆತಂಕ ಎದುರಿಸಿತ್ತು. ಆದರೆ ನವನಾಯಕ ಶುಭಮನ್ ಗಿಲ್ ಅವರು ಗೆಲುವಿನ ರೂವಾರಿಯಾಗಿ ಉದಯಿಸುವ ಮೂಲಕ ತಂಡದಲ್ಲಿ ಶಕ್ತಿ ಸಂಚಲನವಾಗಿದೆ. ಇದೀಗ ಜಗತ್ತಿನ ಅತ್ಯಂತ ಪ್ರತಿಷ್ಠಿತ ಕ್ರೀಡಾ ತಾಣಗಳಲ್ಲಿ ಒಂದಾಗಿರುವ ಲಾರ್ಡ್ಸ್‌ನಲ್ಲಿ ಉಭಯ ತಂಡಗಳ ಸೆಣಸಾಟಕ್ಕೆ ವೇದಿಕೆ ಸಿದ್ಧವಾಗಿದೆ.

ತಂಡಗಳು

ಭಾರತ: ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್ (ವಿಕೆಟ್‌ಕೀಪರ್/ಉಪನಾಯಕ), ಅಭಿಮನ್ಯು ಈಶ್ವರನ್, ಯಶಸ್ವಿ ಜೈಸ್ವಾಲ್, ಧ್ರುವ ಜುರೇಲ್, ಕರುಣ್ ನಾಯರ್, ಕೆ.ಎಲ್. ರಾಹುಲ್, ಸಾಯಿ ಸುದರ್ಶನ್, ರವೀಂದ್ರ ಜಡೇಜ, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಆಕಾಶದೀಪ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧಕೃಷ್ಣ, ಶಾರ್ದೂಲ್ ಠಾಕೂರ್.

ಇಂಗ್ಲೆಂಡ್: ಬೆನ್ ಸ್ಟೋಕ್ಸ್ (ನಾಯಕ), ಜೆಮಿ ಸ್ಮಿತ್ (ವಿಕೆಟ್‌ಕೀಪರ್), ಜ್ಯಾಕ್ ಕ್ರಾಲಿ, ಬೆನ್ ಡಕೆಟ್, ಒಲಿ ಪೋಪ್, ಹ್ಯಾರಿ ಬ್ರೂಕ್, ಜೋ ರೂಟ್, ಕ್ರಿಸ್ ವೋಕ್ಸ್, ಬ್ರೈಡನ್ ಕಾರ್ಸ್, ಜೋಫ್ರಾ ಆರ್ಚರ್, ಶೋಯಬ್ ಬಶೀರ್.

ಭಾರತ ತಂಡದ ನಾಯಕ ಶುಭಮನ್ ಗಿಲ್

ಪಂದ್ಯ
ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)
ನೇರಪ್ರಸಾರ: ಸೋನಿ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ರಿಷಭ್ ಪಂತ್

ಜೋಫ್ರಾ ಆರ್ಚರ್

ಪ್ರಸಿದ್ಧ ಕೃಷ್ಣ ಮತ್ತು ಜಸ್‌ಪ್ರೀತ್ ಬೂಮ್ರಾ

ಬಲಾಬಲ (ಟೆಸ್ಟ್)

ಪಂದ್ಯ	136
ಇಂಗ್ಲೆಂಡ್ ಜಯ	51
ಭಾರತ ಜಯ	35
ಡ್ರಾ	50

ಲಾರ್ಡ್ಸ್‌ನಲ್ಲಿ ಟೆಸ್ಟ್

148 ಪಂದ್ಯ

ಡ್ರಾ	51
ಮೊದಲು ಬ್ಯಾಟಿಂಗ್ ಮಾಡಿ ಗೆದ್ದ ತಂಡಗಳು	53
ಮೊದಲು ಫೀಲ್ಡಿಂಗ್ ಮಾಡಿ ಜಯಿಸಿದ ತಂಡಗಳು	44

ಲಾರ್ಡ್ಸ್‌ನಲ್ಲಿ ಭಾರತದ ಸಾಧನೆ (ಟೆಸ್ಟ್)

ಪಂದ್ಯ	19
ಭಾರತ ಜಯ	3
ಇಂಗ್ಲೆಂಡ್ ಜಯ	12
ಡ್ರಾ	4

ಐಸಿಸಿ ರ‍್ಯಾಂಕಿಂಗ್

ಇಂಗ್ಲೆಂಡ್ 3 | 4 ಭಾರತ

- **1932**ರಲ್ಲಿ ತನ್ನ ಪ್ರಥಮ ಟೆಸ್ಟ್ ಕ್ರಿಕೆಟ್ ಪಂದ್ಯವನ್ನು ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಎದುರು ಆಡಿತ್ತು.
- **1986**ರಲ್ಲಿ ಕಪಿಲ್ ದೇವ್ ನಾಯಕತ್ವದ ಭಾರತ ತಂಡವು ಲಾರ್ಡ್ಸ್‌ನಲ್ಲಿ ಮೊದಲ ಜಯ ಸಾಧಿಸಿತು
- **2014**ರಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕರಾಗಿದ್ದ ತಂಡವು ಇಲ್ಲಿ ಗೆದ್ದಿತ್ತು
- **2021**ರಲ್ಲಿ ವಿರಾಟ್ ಕೊಹ್ಲಿ ಮುಂದಾಳತ್ವದ ಬಳಗವು ವಿಜಯ ಸಾಧಿಸಿತ್ತು

ರ‍್ಯಾಂಕಿಂಗ್: ಅಗ್ರ 10ರಲ್ಲಿ ಜೈಸ್ವಾಲ್, ಗಿಲ್

ದುಬೈ (ಪಿಟಿಐ): ಎಜ್‌ಬಾಸ್ಟನ್‌ನಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ನೀಡಿದ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಐಸಿಸಿ ಪುರುಷರ ಟೆಸ್ಟ್ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ಪಟ್ಟಿಯಲ್ಲಿ ಮೊದಲ ಬಾರಿ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ.

ಜೈಸ್ವಾಲ್

24 ವರ್ಷ ವಯಸ್ಸಿನ ಗಿಲ್ ಎರಡನೇ ಟೆಸ್ಟ್‌ನಲ್ಲಿ 269 ಮತ್ತು 161 ರನ್ ಬಾರಿಸಿ, ಒಂದೇ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ 150ಕ್ಕಿಂತ ಹೆಚ್ಚು ರನ್ ಗಳಿಸಿದ ಎರಡನೇ ಆಟಗಾರ ಎನಿಸಿದ್ದರು. ನಾಯಕನಾಗಿ ಅವರು ಆ ಟೆಸ್ಟ್ ಪಂದ್ಯದಲ್ಲಿ ಮೊದಲ ಜಯ ದಾಖಲಿಸಿದ್ದರು.

ಈ ಸರಣಿಗೆ ಮೊದಲು 21ನೇ ಕ್ರಮಾಂಕದಲ್ಲಿದ್ದ ಅವರು ಬುಧವಾರ ಪ್ರಕಟವಾದ ಪಟ್ಟಿಯಲ್ಲಿ 15 ಸ್ಥಾನಗಳಷ್ಟು ದೊಡ್ಡ ಜಿಗಿತ ಕಂಡು ಆರನೇ ಸ್ಥಾನಕ್ಕೆ ಏರಿದ್ದಾರೆ.

2023ರ ಸೆಪ್ಟೆಂಬರ್‌ನಲ್ಲಿ 14ನೇ ಸ್ಥಾನಕ್ಕೆ ಏರಿದ್ದು, ಈ ಹಿಂದಿನ ಅವರ ಶ್ರೇಷ್ಠ ರ‍್ಯಾಂಕಿಂಗ್ ಆಗಿತ್ತು. ಏಕದಿನ ರ‍್ಯಾಂಕಿಂಗ್‌ನಲ್ಲಿ ಅವರು ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ.

ಟೆಸ್ಟ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ ಅವರ ಅಗ್ರಸ್ಥಾನ ಅಬಾಧಿತವಾಗಿದೆ. ಅದೇ ದೇಶದ ಅನುಭವಿ ಬ್ಯಾಟರ್ ಜೋ ರೂಟ್ ಎರಡನೇ ಸ್ಥಾನಕ್ಕಿಳಿದಿದ್ದಾರೆ. ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಮೂರನೇ ಸ್ಥಾನದಲ್ಲಿದ್ದಾರೆ.

ಯಶಸ್ವಿ ಜೈಸ್ವಾಲ್ ನಾಲ್ಕನೇ, ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಐದನೇ ಸ್ಥಾನದಲ್ಲಿದ್ದಾರೆ. ಬ್ರೂಕ್ ಮತ್ತು ಗಿಲ್ ಅವರ ನಡುವೆ ಕೇವಲ 79 ರೇಟಿಂಗ್ ಪಾಯಿಂಟ್‌ಗಳ ಅಂತರವಿದೆ.

ಇಂಗ್ಲೆಂಡ್ ವಿಕೆಟ್ ಕೀಪರ್ ಜೇಮಿ ಸ್ಮಿತ್ ಸಹ ಅಗ್ರ 10ರೊಳಗೆ ಮೊದಲ ಬಾರಿ ಸ್ಥಾನ ಪಡೆದಿದ್ದಾರೆ. ಅವರು ಹತ್ತನೇ ಸ್ಥಾನ ಗಳಿಸಿದ್ದಾರೆ. ಅವರು ಎರಡನೇ ಟೆಸ್ಟ್‌ನಲ್ಲಿ ಅಜೇಯ 184 ಮತ್ತು 88 ರನ್ ಹೊಡೆದಿದ್ದರು.

ಜಿಂಬಾಬ್ವೆ ವಿರುದ್ಧ ಅಜೇಯ 367 ರನ್ ಬಾರಿಸಿದ್ದ ವಿಯಾನ್ ಮಲ್ದರ್ ಅವರು 34 ಸ್ಥಾನ ಬಡ್ತಿ ಪಡೆದಿದ್ದು 22ನೇ ಸ್ಥಾನದಲ್ಲಿದ್ದಾರೆ.

ಬೂಮ್ರಾಗೆ ಅಗ್ರಸ್ಥಾನ: ಟೆಸ್ಟ್ ಬೌಲರ್‌ಗಳ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ ಅವರು ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ. ಕಾರ್ಯಭಾರದ ಭಾಗವಾಗಿ ಅವರು ಎರಡನೇ ಟೆಸ್ಟ್‌ನಲ್ಲಿ ಆಡದಿದ್ದರೂ ಅವರ ಸ್ಥಾನಕ್ಕೆ ಚ್ಯುತಿಬಂದಿಲ್ಲ.

ಎರಡನೇ ಟೆಸ್ಟ್‌ನಲ್ಲಿ ಮಿಂಚಿದ ಸಿರಾಜ್ ಆರು ಸ್ಥಾನ ಬಡ್ತಿ ಪಡೆದಿದ್ದು 22ನೇ ಸ್ಥಾನಕ್ಕೇರಿದ್ದಾರೆ. ವೆಸ್ಟ್ ಇಂಡೀಸ್‌ನ ಶಮರ್ ಜೋಸೆಫ್ ಮತ್ತು ಅಲ್ಜಾರಿ ಜೋಸೆಫ್ ಸಹ ಪ್ರಗತಿ ಕಂಡಿದ್ದಾರೆ.

ಟೆಸ್ಟ್ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ರವೀಂದ್ರ ಜಡೇಜ ಈಗಲೂ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಟಿ20 ವಿಶ್ವಕಪ್ ಅರ್ಹತಾ ಸುತ್ತು ಸ್ಕಾಟ್ಲೆಂಡ್ ವಿರುದ್ಧ ಗೆದ್ದ ಇಟಲಿ

ದಿ ಹೇಗ್ (ನೆದರ್ಲೆಂಡ್ಸ್): ಇಟಲಿ ಕ್ರಿಕೆಟ್ ತಂಡವು ಇದೇ ಮೊದಲ ಸಲ ಟಿ20 ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯುವತ್ತ ದಾಪುಗಾಲಿಟ್ಟಿದೆ.

ಬುಧವಾರ ಇಲ್ಲಿ ನಡೆದ ಟಿ20 ವಿಶ್ವಕಪ್ ಯುರೋಪ್ ವಲಯ ಕ್ವಾಲಿಫಿಕೇಷನ್ ಟೂರ್ನಿಯ ಪಂದ್ಯದಲ್ಲಿ 12 ರನ್‌ಗಳಿಂದ ಸ್ಕಾಟ್ಲೆಂಡ್ ವಿರುದ್ಧ ಜಯಿಸಿತು. ಇದರೊಂದಿಗೆ ತಂಡವು ಪಾಯಿಂಟ್ ಪಟ್ಟಿಯಲ್ಲಿ ಒಟ್ಟು 5 ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿದೆ. ಒಟ್ಟು 3 ಪಂದ್ಯಗಳನ್ನು ಆಡಿ 2ರಲ್ಲಿ ಜಯಿಸಿದೆ. ಇನ್ನೊಂದರಲ್ಲಿ ಫಲಿತಾಂಶ ಬಂದಿಲ್ಲ.

ಈ ಗುಂಪಿನಲ್ಲಿ ಇಟಲಿ, ಜರ್ಸಿ, ಸ್ಕಾಟ್ಲೆಂಡ್, ನೆದರ್ಲೆಂಡ್ಸ್ ಹಾಗೂ ಗರ್ನಸಿಯಾ ತಂಡಗಳು ಇವೆ.

ಈ ಪಂದ್ಯದಲ್ಲಿ ಟಾಸ್ ಗೆದ್ದ ಇಟಲಿ ತಂಡವು ಬ್ಯಾಟಿಂಗ್ ಮಾಡಿತು. 20 ಓವರ್‌ಗಳಲ್ಲಿ 6ಕ್ಕೆ 167 ರನ್ ಗಳಿಸಿತು. ತಂಡದ ಆರಂಭಿಕ ಬ್ಯಾಟರ್ ಎಮಿಲೊ ಗೇ (50; 21ಎ) ಅರ್ಧಶತಕ ಗಳಿಸಿದರು. ಹ್ಯಾರಿ ಮೆನೆಟಿ (38; 38ಎ) ಹಾಗೂ ಗ್ರ್ಯಾಂಡ್ ಸ್ಟುವರ್ಟ್ (ಔಟಾಗದೇ 44) ಉತ್ತಮ ಕಾಣಿಕೆ ನೀಡಿದರು. ಸ್ಕಾಟ್ಲೆಂಡ್‌ನ ಮೈಕೆಲ್ ಲೀಸ್ಕ್ (18ಕ್ಕೆ3) ಉತ್ತಮ ಬೌಲಿಂಗ್ ಮಾಡಿದರು.

ಗುರಿ ಬೆನ್ನಟ್ಟಿದ ಸ್ಕಾಟ್ಲೆಂಡ್ ತಂಡಕ್ಕೆ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 155 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಜಾರ್ಜ್ ಮುನ್ಸಿ (72; 61ಎ) ಅರ್ಧಶತಕ ಗಳಿಸಿದರು.

ಚಟಿಕೆ ಸುದ್ದಿ

ಆಗಸ್ಟ್ 29ರಿಂದ ಪ್ರೊ ಕಬಡ್ಡಿ ಲೀಗ್

ಮುಂಬೈ (ಪಿಟಿಐ): ಪ್ರೊ ಕಬಡ್ಡಿ ಲೀಗ್‌ನ 12ನೇ ಆವೃತ್ತಿ ಆಗಸ್ಟ್ 29ರಂದು ಆರಂಭವಾಗಲಿದೆ ಎಂದು ಆಯೋಜಕರು ಬುಧವಾರ ತಿಳಿಸಿದ್ದಾರೆ.

ಹರಿಯಾಣ ಸ್ಟೀಲರ್ಸ್ ಹಾಲಿ ಚಾಂಪಿಯನ್ ಆಗಿದೆ. ಪಂದ್ಯಗಳು ನಡೆಯುವ ಸ್ಥಳ ಮತ್ತು ಇತರ ವಿವರಗಳನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು ಆಯೋಜಕರಾದ ಮಶಾಲ್ ಸ್ಪೋರ್ಟ್ಸ್ ಬುಧವಾರ ತಿಳಿಸಿದೆ. ಈ ಬಾರಿಯೂ 12 ತಂಡಗಳು ಕಣಕ್ಕಿಳಿಯಲಿವೆ.

ಮೇ 31 ಮತ್ತು ಜೂನ್ 1ರಂದು ನಡೆದ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ 10 ಮಂದಿ ಆಟಗಾರರು ₹1 ಕೋಟಿಗೂ ಹೆಚ್ಚು ಮೌಲ್ಯ ಪಡೆದಿದ್ದು ಇದು ದಾಖಲೆಯಾಗಿದೆ.

ಭಾರತ 'ಎ' ಹಾಕಿ ತಂಡದ ಶುಭಾರಂಭ

ಈಂಡ್‌ಹೋವೆನ್ (ನೆದರ್ಲೆಂಡ್ಸ್), (ಪಿಟಿಐ): ಭಾರತ ಪುರುಷರ ಹಾಕಿ 'ಎ' ತಂಡ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಅಧಿಕಾರಯುತ ಆಟವಾಡಿ 6–1 ಗೋಲುಗಳಿಂದ ಐರ್ಲೆಂಡ್ ತಂಡವನ್ನು ಸೋಲಿಸಿತು. ಆ ಮೂಲಕ ಯುರೋಪ್ ಪ್ರವಾಸವನ್ನು ಯಶಸ್ಸಿನೊಡನೆ ಆರಂಭಿಸಿತು.

ಆದಿತ್ಯ ಲಾಲಗೆ ಎರಡು ಗೋಲು ಗಳಿಸಿದರು. ಉತ್ತಮ್ ಸಿಂಗ್, ಅಮನ್‌ದೀಪ್ ಲಾಕ್ರಾ, ಸೆಲ್ವಂ ಕಾರ್ತಿ ಮತ್ತು ಬಾಬಿ ಸಿಂಗ್ ಧಾಮಿ ಅವರು ತಲಾ ಒಂದೊಂದು ಗೋಲು ಗಳಿಸಿದರು.

ಚೆಸ್: ಹಂಪಿಗೆ ಜಯ

ಬಟುಮಿ (ಪಿಟಿಐ): ಭಾರತದ ಕೋನೇರು ಹಂಪಿ ಮತ್ತು ವಂತಿಕಾ ಅಗರವಾಲ್ ಅವರು ಫಿಡೆ ಮಹಿಳಾ ವಿಶ್ವ ಚೆಸ್ ಕಪ್ ಎರಡನೇ ಸುತ್ತಿನ ಪಂದ್ಯಗಳಲ್ಲಿ ಬುಧವಾರ ಗೆಲುವು ಪಡೆದು ಮುಂದಿನ ಸುತ್ತಿನತ್ತ ಹೆಜ್ಜೆಯಿಟ್ಟರು.

ಹಂಪಿ ಅವರು ಕಪ್ಪು ಕಾಯಿಗಳಲ್ಲಿ ಆಡಿ ಉಜ್ಬೇಕಿಸ್ತಾನದ ಅಫ್ರೂಜಾ ಕಾಮ್ದಮೋವಾ ಅವರನ್ನು ಸೋಲಿಸಿದರು. ವಂತಿಕಾ ಅಗರವಾಲ್ ಇನ್ನೊಂದು ಪಂದ್ಯದಲ್ಲಿ ಮಾಜಿ ಚಾಂಪಿಯನ್ ಅನ್ನಾ ಉಷೆನಿನಾ ಅವರನ್ನು ಮಣಿಸಿದರು.

ಡಿ.ಹಾರಿಕಾ ಇನ್ನೊಂದು ಪಂದ್ಯದಲ್ಲಿ ಸ್ವದೇಶದ ಪಿ.ವಿ.ನಂದಿತಾ ವಿರುದ್ಧ ಜಯಗಳಿಸಿದರು.

ವಿಂಬಲ್ಡನ್ ಮಹಿಳಾ ಸಿಂಗಲ್ಸ್: ಅಗ್ರ ನಾಲ್ಕಕ್ಕೆ ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಲಗ್ಗೆ
ಮೊದಲ ಬಾರಿ ಸೆಮಿಗೆ ಶ್ವಾಂಟೆಕ್

ಲಂಡನ್ (ಎಪಿ/ ಎಎಫ್‌ಪಿ): ಪೋಲೆಂಡ್‌ನ ಇಗಾ ಶ್ವಾಂಟೆಕ್ ಮತ್ತು ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್ಸಿಕ್ ಅವರು ಬುಧವಾರ ತಮ್ಮ ಎದುರಾಳಿಗಳ ವಿರುದ್ಧ ನೇರ ಸೆಟ್‌ಗಳ ಗೆಲುವಿನೊಡನೆ ವಿಂಬಲ್ಡನ್ ಚಾಂಪಿಯನ್‌ಷಿಪ್ ಮಹಿಳಾ ಸಿಂಗಲ್ಸ್‌ನಲ್ಲಿ ಇದೇ ಮೊದಲ ಬಾರಿ ಸೆಮಿಫೈನಲ್ ತಲುಪಿದರು.

ಎಂಟನೇ ಶ್ರೇಯಾಂಕದ ಶ್ವಾಂಟೆಕ್ ಕ್ವಾರ್ಟರ್‌ಫೈನಲ್‌ನಲ್ಲಿ 6–2, 7–5 ರಿಂದ 19ನೇ ಶ್ರೇಯಾಂಕದ ಲುಡ್ಮಿಲಾ ಸ್ಯಾಮ್ಸನೋವಾ ಅವರನ್ನು ಸೋಲಿಸಿದರು.

'ಗೆಲುವಿನಿಂದ ರೋಮಾಂಚನಗೊಂಡಿದ್ದೇನೆ. ಸಂತಸ ಮತ್ತು ಹೆಮ್ಮೆಯಾಗಿದೆ' ಎಂದು ಐದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ 24 ವರ್ಷ ವಯಸ್ಸಿನ ಶ್ವಾಂಟೆಕ್ ಪ್ರತಿಕ್ರಿಯಿಸಿದರು.

ಗುರುವಾರ ನಡೆಯುವ ಸೆಮಿಫೈನಲ್‌ನಲ್ಲಿ ಅವರು ಶ್ರೇಯಾಂಕ ರಹಿತ ಆಟಗಾರ್ತಿ ಬೆಲಿಂಡಾ ಬೆನ್ಸಿಕ್ ಅವರನ್ನು ಎದುರಿಸಲಿದ್ದಾರೆ. ಬೆನ್ಸಿಕ್ ಕೊನೆಯ ಕ್ವಾರ್ಟರ್‌ಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ಮಿರಾ ಆಂಡ್ರೀವಾ ಅವರನ್ನು ಹಿಮ್ಮೆಟ್ಟಿಸಿದರು.

ಫ್ರೆಂಚ್ ಓಪನ್‌ನಲ್ಲಿ ನಾಲ್ಕು ಬಾರಿ ಮತ್ತು 2022ರಲ್ಲಿ ಅಮೆರಿಕ ಓಪನ್‌ನಲ್ಲಿ ಶ್ವಾಂಟೆಕ್ ಚಾಂಪಿಯನ್ ಆಗಿದ್ದರು. ಆದರೆ ಇಲ್ಲಿನ ಹುಲ್ಲಿನಂಕಣದಲ್ಲಿ ಅವರು ಪರದಾಡಿದ್ದೇ ಹೆಚ್ಚು. ಅವರ ಈ ಹಿಂದಿನ ಉತ್ತಮ ಸಾಧನೆ ಎಂದರೆ 2023ರಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದು.

ಮೊದಲ ಸೆಟ್‌ನಲ್ಲಿ ರಷ್ಯಾ ಆಟಗಾರ್ತಿಯ ವಿರುದ್ಧ ಪ್ರಾಬಲ್ಯ ಸಾಧಿಸಿದ ಶ್ವಾಂಟೆಕ್ ಎರಡನೇ ಸೆಟ್‌ನಲ್ಲಿ ಬೆವರು ಹರಿಸಬೇಕಾಯಿತು. ಅಂತಿಮವಾಗಿ 1 ಗಂಟೆ 49 ನಿಮಿಷಗಳಲ್ಲಿ ಪಂದ್ಯ ಗೆದ್ದರು.

ಶ್ವಾಂಟೆಕ್ ಎರಡನೇ ಸೆಟ್‌ನಲ್ಲೂ 3–0 ಮುನ್ನಡೆ ಪಡೆದಿದ್ದರು. ಆದರೆ, ಮೊದಲ ಸಲ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಎಂಟರ ಘಟ್ಟ ತಲುಪಿದ್ದ ಸ್ಯಾಮ್ಸನೋವಾ ತಿರುಗಿ ಬಿದ್ದರು. ಸ್ಕೋರ್ ಕ್ರಮೇಣ 4–4ರಲ್ಲಿ ಸಮನಾಯಿತು. ನಂತರ 6–5ರಲ್ಲಿ ಮುನ್ನಡೆ ಪಡೆದ ಪೋಲೆಂಡ್ ಆಟಗಾರ್ತಿ ಎದುರಾಳಿಯ ಸರ್ವ್ ಮುರಿದು ಪಂದ್ಯ ಮುಗಿಸಿದರು.

ಆಂಡ್ರೀವಾ ನಿರ್ಗಮನ: ಸೆಂಟರ್ ಕೋರ್ಟ್‌ನಲ್ಲಿ ನಡೆದ ಕೊನೆಯ ಕ್ವಾರ್ಟರ್‌ಫೈನಲ್‌ನಲ್ಲಿ ಬೆಲಿಂಡಾ 7–6 (7–3), 7–6 (7–2) ರಿಂದ 18 ವರ್ಷದ ಮಿಯೆರಾ ಆಂಡ್ರೀವಾ ಅವರನ್ನು ಹಿಮ್ಮೆಟ್ಟಿಸಿದರು.

ಮಾಜಿ ಒಲಿಂಪಿಕ್ ಚಾಂಪಿಯನ್ ಬೆನ್ಸಿಕ್, 2024ರ ಏಪ್ರಿಲ್‌ನಲ್ಲಿ ಮಗುವಿಗೆ ಜನ್ಮನೀಡಿದ್ದರು. ಆದರೆ ಮಾತೃತ್ವ ರಜೆ ಮುಗಿಸಿ ಪುನರಾಗಮನ ಮಾಡಿದ ನಂತರ ಮತ್ತೆ ವಿಶ್ವದ ಅಗ್ರ 34ರೊಳಗೆ ಸ್ಥಾನ ಪಡೆದಿದ್ದಾರೆ.

ಈ ಹಿಂದೆ 2019ರಲ್ಲಿ ಅಮೆರಿಕ ಓಪನ್ ಟೂರ್ನಿಯ ಸೆಮಿಫೈನಲ್ ತಲುಪಿದ್ದೇ ಗ್ರ್ಯಾನ್‌ಸ್ಲಾಮ್‌ನಲ್ಲಿ ಬೆನ್ಸಿಕ್ ಅವರ ಶ್ರೇಷ್ಠ ಸಾಧನೆ ಆಗಿತ್ತು. ನಂತರ 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದರು.

27 ವರ್ಷಗಳ ಹಿಂದೆ ಮಾರ್ಟಿನಾ ಹಿಂಗಿಸ್ ಸೆಮಿಫೈನಲ್ ತಲುಪಿದ ನಂತರ ಈ ಹಂತ ತಲುಪಿದ ಸ್ವಿಜರ್ಲೆಂಡ್‌ನ ಮೊದಲ ಆಟಗಾರ್ತಿ ಎಂಬ ಗೌರವವೂ ಬೆನ್ಸಿಕ್ ಅವರದಾಯಿತು.

18 ವರ್ಷ ವಯಸ್ಸಿನ ಆಂಡ್ರೀವಾ ಮಹಿಳಾ ಟೆನಿಸ್‌ನ ಉದಯೋನ್ಮುಖ ತಾರೆ ಎನಿಸಿದ್ದಾರೆ. 2007ರಲ್ಲಿ ನಿಕೋಲ್ ವೈದಿಸೋವಾ ಬಳಿಕ ವಿಂಬಲ್ಡನ್ ಎಂಟರ ಘಟ್ಟ ತಲುಪಿದ ಅತಿ ಕಿರಿ ವಯಸ್ಸಿನ ಆಟಗಾರ್ತಿ ಕೂಡ. ಮಾಜಿ ಚಾಂಪಿಯನ್ ಕೊಂಚಿಟಾ ಮಾರ್ಟಿನೆಝ್ ಅವರ ಗರಡಿಯಲ್ಲಿರುವ ಮಿರಾ ಆಂಡ್ರೀವಾ ಮೊದಲ ನಾಲ್ಕು ಸುತ್ತುಗಳಲ್ಲಿ ಒಂದೂ ಸೆಟ್ ಕಳೆದುಕೊಂಡಿರಲಿಲ್ಲ.



ಸೆಮಿಫೈನಲ್ ತಲುಪಿದ ಸಂಭ್ರಮದಲ್ಲಿ ಇಗಾ ಶ್ವಾಂಟೆಕ್ (ಎಡಚಿತ್ರ) ಬ್ಯಾಕ್‌ಹ್ಯಾಂಡ್ ಹೊಡೆತ ಆಡಿದ ರಷ್ಯಾದ ಮಿರಾ ಆಂಡ್ರೀವಾ
ಚಿತ್ರಗಳು: ಎಪಿ / ಎಎಫ್‌ಪಿ

ಸೆಮಿಫೈನಲ್‌ಗೆ ಸಿನ್ನರ್

ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಒಂದೇ ಒಂದು ಸೆಟ್ ಕಳೆದುಕೊಳ್ಳದೆ ಸೆಮಿಫೈನಲ್ ಪ್ರವೇಶಿಸಿದರು.

ಇಟಲಿಯ 23 ವರ್ಷ ವಯಸ್ಸಿನ ಈ ಆಟಗಾರ, 7–6 (7/2), 6–4, 6–4ರಿಂದ 10ನೇ ಶ್ರೇಯಾಂಕದ ಬೆನ್ ಶೆಲ್ಟನ್(ಅಮೆರಿಕ) ಅವರನ್ನು ಮಣಿಸಿದರು.

ನಾಲ್ಕನೇ ಸುತ್ತಿನ ಪಂದ್ಯದ ವೇಳೆ ಬಲ ಮೊಣಗಂಟಿನ ನೋವಿಗೆ ಒಳಗಾಗಿದ್ದ ಸಿನ್ನರ್ ತೋಳಿಗೆ ಪಟ್ಟಿ ಕಟ್ಟಿ ಆಡಲಿಳಿದರು. ನೋವಿನ ನಡುವೆಯೂ ಆಕರ್ಷಕ ಆಟವಾಡಿ ಜಯದ ಸಿಹಿ ಸವಿದರು.

ವಿಂಬಲ್ಡನ್‌ನಲ್ಲಿ ಮೊದಲ ಬಾರಿ ಟ್ರೋಫಿ ಗೆಲ್ಲುವ ಗುರಿ ಹೊಂದಿರುವ ಸಿನ್ನರ್, ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅಥವಾ ಇಟಲಿಯ ಫ್ಲಾವಿಯೊ ಕೊಬೊಲ್ಲಿ ವಿರುದ್ಧ ಸೆಮಿಫೈನಲ್‌ನಲ್ಲಿ ಸೆಣಸಬೇಕಿದೆ.

ವಿದಾಯ ಹೇಳಿದ ಫೊಗ್ನಿನಿ



ಲಂಡನ್ (ಎಎಫ್‌ಪಿ): ಇಟಲಿಯ ವರ್ಣರಂಜಿತ ಟೆನಿಸಿಗ ಫ್ಯಾಬಿಯೊ ಫೊಗ್ನಿನಿ ಅವರು ಟೆನಿಸ್‌ಗೆ ವಿದಾಯ ಹೇಳಿದರು.

ವಿದಾಯ ಹೇಳುವುದಾಗಿ ಅವರು ವಿಂಬಲ್ಡನ್‌ನಲ್ಲಿ ಬುಧವಾರ ಪ್ರಕಟಿಸಿದರು.

38 ವರ್ಷ ವಯಸ್ಸಿನ ಫೊಗ್ನಿನಿ ಅವರು ವಿಂಬಲ್ಡನ್ ಚಾಂಪಿಯನ್‌ಷಿಪ್ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಎದುರು ಹೋರಾಟ ತೋರಿ ಐದು ಸೆಟ್‌ಗಳಲ್ಲಿ ಸೋತಿದ್ದರು.

2019ರಲ್ಲಿ ಒಂಬತ್ತನೇ ಕ್ರಮಾಂಕಕ್ಕೆ ಏರಿದ್ದು ಅವರ ಈವರೆಗಿನ ಉತ್ತಮ ಸಾಧನೆ. ಅವರು 9 ಎಟಿಪಿ ಟೂರ್ ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ. ಅವರ ಏಕೈಕ ಮಾಸ್ಟರ್ಸ್ 1,000 ಟೂರ್ನಿಯ ಪ್ರಶಸ್ತಿ ಗೆಲುವು ಬಂದಿದ್ದು 2019ರ ಮಾಂಟೆ ಕಾರ್ಲೊ ಟೂರ್ನಿಯಲ್ಲಿ.

ವೇಟ್‌ಲಿಫ್ಟಿಂಗ್: ಸಾಯಿರಾಜ್‌ಗೆ ಕಂಚು

ಅಸ್ತಾನ (ಕಜಕಸ್ತಾನ) (ಪಿಟಿಐ): ಭಾರತದ ಸಾಯಿರಾಜ್ ಪರ್ದೇಶಿ ಅವರು ಇಲ್ಲಿ ನಡೆದ ಏಷ್ಯನ್ ಜೂನಿಯರ್ (ಪುರುಷ ಮತ್ತು ಮಹಿಳಾ) ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು.

ಮಹಾರಾಷ್ಟ್ರದ 18 ವರ್ಷ ವಯಸ್ಸಿನ ಸಾಯಿರಾಜ್ ಅವರು ಪುರುಷರ 86 ಕೆ.ಜಿ ವಿಭಾಗದಲ್ಲಿ ಈ ಸಾಧನೆ ಮಾಡಿದರು. ಸ್ನ್ಯಾಚ್‌ನಲ್ಲಿ 152 ಕೆ.ಜಿ ಮತ್ತು ಕ್ಲೀನ್ ಹಾಗೂ ಜರ್ಕ್‌ನಲ್ಲಿ 186 ಕೆ.ಜಿ ಸೇರಿದಂತೆ ಒಟ್ಟು 338 ಕೆಜಿ ಭಾರ ಎತ್ತಿದರು.

ಸಾಯಿರಾಜ್ ಪರ್ದೇಶಿ

ಕಳೆದ ವರ್ಷ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ 81 ಕೆ.ಜಿ ವಿಭಾಗದಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ ಅವರು ಮೂರು ಯೂತ್ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು.

ದೋಹಾದಲ್ಲಿ ನಡೆದ 2024ರ ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸಾಯಿರಾಜ್ ಅವರು ಚಿನ್ನದ ಪದಕ ಗೆದ್ದಿದ್ದರು. ಕಳೆದ ವರ್ಷ ಮೇ ತಿಂಗಳಲ್ಲಿ ನಡೆದ ಐಡಬ್ಲ್ಯುಎಫ್ ವಿಶ್ವ ಯುವ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು.

ಸಂಕ್ಷಿಪ್ತ ಸುದ್ದಿ

'ಜಾಲಹಳ್ಳಿ ರಾಮಯ್ಯ ಕಪ್' ಕಬಡ್ಡಿ ಟೂರ್ನಿಗೆ ಚಾಲನೆ ಇಂದು

ಬೆಂಗಳೂರು: 'ಜಾಲಹಳ್ಳಿ ರಾಮಯ್ಯ ಕಪ್' ರಾಜ್ಯ ಮಟ್ಟದ ಪುರುಷ ಹಾಗೂ ಮಹಿಳೆಯರ ಕಬಡ್ಡಿ ಟೂರ್ನಿಯು ಜುಲೈ 10ರಿಂದ 13ರ ವರೆಗೆ ಪದ್ಮನಾಭನಗರದಲ್ಲಿ ನಡೆಯಲಿದೆ.

ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಹಾಗೂ ಬೆಂಗಳೂರು ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಸಹಯೋಗದಲ್ಲಿ ನಡೆಯಲಿರುವ ಈ ಟೂರ್ನಿಗೆ ಪದ್ಮನಾಭ ನಗರದ ಕಾರ್ಮೆಲ್ ಶಾಲೆಯ ಆಟದ ಮೈದಾನದಲ್ಲಿ (ವಾಜಪೇಯಿ ಆಟದ ಮೈದಾನ) ಗುರುವಾರ ಸಂಜೆ ಐದು ಗಂಟೆಗೆ ಚಾಲನೆ ದೊರೆಯಲಿದೆ.

ರಾಜ್ಯ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರು ತಂದೆ ದಿವಂಗತ ಕೆ. ರಾಮಯ್ಯ ಹೆಸರಿನಲ್ಲಿ ಪ್ರತಿವರ್ಷ ಕಾರ್ಯಕ್ರಮ ಆಯೋಜಿಸುತ್ತಿದ್ದು, ಈ ವರ್ಷ ಕಬಡ್ಡಿ ಟೂರ್ನಿ ಏರ್ಪಡಿಸಿದ್ದಾರೆ.

ಜಾಸ್ಮಿನ್ ಕೌರ್ ಅಮಾನತು

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಪರೀಕ್ಷೆಯಲ್ಲಿ ಸಿಲುಕಿರುವ ಭಾರತದ ಶಾಟ್‌ಪಟ್ ಸ್ಪರ್ಧಿ ಜಾಸ್ಮಿನ್ ಕೌರ್ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ.

ಪಂಜಾಬ್‌ನ 22 ವರ್ಷ ವಯಸ್ಸಿನ ಜಾಸ್ಮಿನ್ ಅವರು ಡೆಹ್ರಾಡೂನ್‌ನ ರಾಷ್ಟ್ರೀಯ ಕ್ರೀಡೆಗಳಲ್ಲಿ 15.97 ಮೀ. ಥ್ರೋದೊಡನೆ ಚಿನ್ನ ಗೆದ್ದಿದ್ದರು.

ಅವರಿಂದ ಪಡೆದ ಮಾದರಿಯಲ್ಲಿ ಟೆರ್ಬುಟಲೈನ್ ಅಂಶ ಪತ್ತೆಯಾಗಿದೆ. ಈ ಅಂಶ ಕೆಮ್ಮಿನ ಸಿರಪ್‌ಗಳಲ್ಲಿ ಸಾಮಾನ್ಯವಾಗಿರುತ್ತದೆ. 20 ವರ್ಷದೊಳಗಿನವರ ವಿಶ್ವ ಕುಸ್ತಿ ಕೂಟದಲ್ಲಿ ಬೆಳ್ಳಿ ಗೆದ್ದಿದ್ದ ನಿಕಿತಾ ಅವರ ಮೇಲೆ ನಾಲ್ಕು ವರ್ಷಗಳ ನಿಷೇಧ ಹೇರಲಾಗಿದೆ. ಈ ಶಿಕ್ಷೆ 2024ರ ಮೇ 28ರಿಂದ ಪೂರ್ವಾನ್ವಯವಾಗಿದೆ.